ಬೆಸಗರಹಳ್ಳಿ ರಾಮಣ್ಣನವರ ಕಥೆಗಳಲ್ಲಿ ಶ್ರಮ ಸಂಸ್ಕೃತಿ

ಈ ನಿಂಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ
ಎಂ.ಫಿಲ್. (ಕನ್ನಡ) ಪದವಿಗಾಗಿ ಅರ್ಪಿಸಲಾಗಿದೆ.

ಸಂಶೋಧನಾ ವಿದ್ಯಾರ್ಥಿ
ರಾಜೇಶ್ವರಿ .ಎಸ್.
ರಿ.ನಂ.181201030032

ಮಾರ್ಗದರ್ಶಕರು

ಡಾ|| ಮಧುಸೂಧನ ಆಚಾರ್ಯ ಜೋಷಿ
ಕನ್ನಡ ಸಹ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಚನ್ನಪಟ್ಟಣ

ಮಾನ್ಯತಾ ಸಂಸ್ಥೆ
ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ
(ಹಂಪಿ ಕನ್ನಡ ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದಿದೆ)
ಕರ್ನಾಟಕ ಸಂಘ, ಮಂಡ್ಯ

1424

8K0.9
RAJ 6

ಸಾಹಿತ್ಯ ಅಧ್ಯಯನದ ವಿಭಾಗ
ಕನ್ನಡ ವಿಶ್ವವಿದ್ಯಾಲಯ-ಹಂಪಿ
ವಿದ್ಯಾರಣ್ಯ-583276
2018-19

ಪರಾಮರ್ಶೆಗೆ ಮಾತ್ರ

"ಸಿರಿಗನ್ನಡ" ಗ್ರಂಥಾಲಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬.

1424

[illegible] ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ.ಹಂಪಿ

ಸಿರಿಗನ್ನಡ ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ. ಹಂಪಿ.

ಬೆಸಗರಹಳ್ಳಿ ರಾಮಣ್ಣನವರ ಕಥೆಗಳಲ್ಲಿ ಶ್ರಮ ಸಂಸ್ಕೃತಿ

ಈ ನಿಂಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ
ಎಂ.ಫಿಲ್. (ಕನ್ನಡ) ಪದವಿಗಾಗಿ ಅರ್ಪಿಸಲಾಗಿದೆ.

ಸಂಶೋಧನಾ ವಿದ್ಯಾರ್ಥಿ
ರಾಜೇಶ್ವರಿ .ಎಸ್.
ರಿ.ನಂ.181201030032

ಮಾರ್ಗದರ್ಶಕರು
ಡಾ॥ ಮಧುಸೂಧನ ಆಚಾರ್ಯ ಜೋಷಿ
ಕನ್ನಡ ಸಹ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಚನ್ನಪಟ್ಟಣ

ಮಾನ್ಯತಾ ಸಂಸ್ಥೆ
ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ
(ಹಂಪಿ ಕನ್ನಡ ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದಿದೆ)
ಕರ್ನಾಟಕ ಸಂಘ, ಮಂಡ್ಯ

ಸಾಹಿತ್ಯ ಅಧ್ಯಯನದ ವಿಭಾಗ
ಕನ್ನಡ ವಿಶ್ವವಿದ್ಯಾಲಯ-ಹಂಪಿ
ವಿದ್ಯಾರಣ್ಯ-583276
2018-19

[illegible] ಗ್ರಂಥಾಲಯ
[illegible] ವಿಶ್ವವಿದ್ಯಾಲಯ

141592

8K0.9
RAJ b

ಮಾರ್ಗದರ್ಶಕರ ದೃಢೀಕರಣ ಪತ್ರ

ಶ್ರೀಮತಿ **ರಾಜೇಶ್ವರಿ .ಎಸ್.** ಅವರು ನೋಂದಣಿ ಸಂಖ್ಯೆ:181201030032 ಎಂ.ಫಿಲ್ ಪದವಿಗಾಗಿ ಬರೆದು ಸಿದ್ಧ ಪಡಿಸಿರುವ **ಬೆಸಗರಹಳ್ಳಿ ರಾಮಣ್ಣ ಅವರ ಕಥೆಗಳಲ್ಲಿ ಶ್ರಮ ಸಂಸ್ಕೃತಿ** ಎಂಬ ಸಂಪ್ರಬಂಧವನ್ನು ಕನ್ನಡ ವಿಶ್ವವಿಧ್ಯಾಲಯ ಹಂಪಿಗೆ, ಮಂಡ್ಯದ ಕರ್ನಾಟಕ ಸಂಘದ ಮೂಲಕ ಸಲ್ಲಿಸಲು ನನ್ನ ಮಾರ್ಗದರ್ಶನದಲ್ಲಿ ಸ್ವತಂತ್ರ ಅಧ್ಯಯನದಿಂದ ಮೂಲಕ ಸಿದ್ಧಪಡಿಸಿರುತ್ತಾರೆ. ಈ ಸಂಪ್ರಬಂಧ ವಿಷಯವನ್ನು ಅಥವಾ ಇವರ ಯಾವುದೇ ಭಾಗವನ್ನು ಇದಕ್ಕೆ ಮೊದಲು ಬೇರೆ ಯಾವುದೇ ಪದವಿಗಾಗಲೀ ಅಥವಾ ಇನ್ನಿತರೆ ಉದ್ದೇಶಗಳಿಗಾಗಲಿ ಸಲ್ಲಿಸಿಲ್ಲವೆಂದು ಈ ಮೂಲಕ ದೃಢೀಕರಿಸಿರುತ್ತೇನೆ.

ಮಾರ್ಗದರ್ಶಕರು

ಡಾ.ಮಧುಸೂಧನಾಚಾರ್ಯ ಜೋಷಿ
ಸಹಪ್ರಾಧ್ಯಾಪಕರು, ಕನ್ನಡ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚನ್ನಪಟ್ಟಣ.

ದಿನಾಂಕ:

ಸ್ಥಳ:

ಡಾ. ಮಧುಸೂದನ ಆಚಾರ್ಯ ಜೋಷಿ
ಕನ್ನಡ ಸಹ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಚನ್ನಪಟ್ಟಣ

[illegible] ಗ್ರಂಥಾಲಯ
[illegible] ವಿಶ್ವವಿದ್ಯಾಲಯ, [illegible]

141592

8K0.9
RAJ b

ಮಾರ್ಗದರ್ಶಕರ ದೃಢೀಕರಣ ಪತ್ರ

ಶ್ರೀಮತಿ **ರಾಜೇಶ್ವರಿ .ಎಸ್.** ಅವರು ನೋಂದಣಿ ಸಂಖ್ಯೆ:181201030032 ಎಂ.ಫಿಲ್ ಪದವಿಗಾಗಿ ಬರೆದು ಸಿದ್ಧ ಪಡಿಸಿರುವ **ಬೆಸಗರಹಳ್ಳಿ ರಾಮಣ್ಣ ಅವರ ಕಥೆಗಳಲ್ಲಿ ಶ್ರಮ ಸಂಸ್ಕೃತಿ** ಎಂಬ ಸಂಪ್ರಬಂಧವನ್ನು ಕನ್ನಡ ವಿಶ್ವವಿಧ್ಯಾಲಯ ಹಂಪಿಗೆ, ಮಂಡ್ಯದ ಕರ್ನಾಟಕ ಸಂಘದ ಮೂಲಕ ಸಲ್ಲಿಸಲು ನನ್ನ ಮಾರ್ಗದರ್ಶನದಲ್ಲಿ ಸ್ವತಂತ್ರ ಅಧ್ಯಯನದಿಂದ ಮೂಲಕ ಸಿದ್ಧಪಡಿಸಿರುತ್ತಾರೆ. ಈ ಸಂಪ್ರಬಂಧ ವಿಷಯವನ್ನು ಅಥವಾ ಇವರ ಯಾವುದೇ ಭಾಗವನ್ನು ಇದಕ್ಕೆ ಮೊದಲು ಬೇರೆ ಯಾವುದೇ ಪದವಿಗಾಗಲೀ ಅಥವಾ ಇನ್ನಿತರೆ ಉದ್ದೇಶಗಳಿಗಾಗಲಿ ಸಲ್ಲಿಸಿಲ್ಲವೆಂದು ಈ ಮೂಲಕ ದೃಢೀಕರಿಸಿರುತ್ತೇನೆ.

ಮಾರ್ಗದರ್ಶಕರು

ಡಾ.ಮಧುಸೂಧನಾಚಾರ್ಯ ಜೋಷಿ
ಸಹಪ್ರಾಧ್ಯಾಪಕರು, ಕನ್ನಡ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚನ್ನಪಟ್ಟಣ.

ದಿನಾಂಕ:

ಸ್ಥಳ:

ಡಾ. ಮಧುಸೂದನ ಆಚಾರ್ಯ ಜೋಷಿ
ಕನ್ನಡ ಸಹ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಚನ್ನಪಟ್ಟಣ

ಪ್ರಮಾಣ ಪತ್ರ

ಬೆಸಗರಹಳ್ಳಿ ರಾಮಣ್ಣ ಅವರ ಕತೆಗಳಲ್ಲಿ ಶ್ರಮ ಸಂಸ್ಕೃತಿ ವಿಷಯದ ಮೇಲೆ ಈ ನಿಬಂಧವನ್ನು **ಡಾ. ಮಧುಸೂಧನ ಆಚಾರ್ಯ ಜೋಷಿ** ಅವರ ಮಾರ್ಗದರ್ಶನದಲ್ಲಿ ನನ್ನ ಸಂಶೋಧನೆಯ ಫಲವಾಗಿ ರಚಿಸಲ್ಪಟ್ಟು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್ (ಕನ್ನಡ) ಪದವಿಗೆ ಅರ್ಪಿಸುತ್ತಿದ್ದೇನೆ. (ರಿ.ಜಿ.ನಂ: 181201030032) ಈ ನಿಬಂಧನೆ ಯನ್ನು ಹಿಂದಿನ ವರ್ಷಗಳಲ್ಲಿ ಯಾರೂ ಇಲ್ಲಿಯವರೆಗೆ ಯಾವುದೇ ವಿಶ್ವವಿದ್ಯಾಲಯಕ್ಕೆ ಒಪ್ಪಿಸಿಲ್ಲವೆಂದು ನಾನು ಇಲ್ಲಿ ಪ್ರಮಾಣೀಕರಿಸುತ್ತಿದ್ದೇನೆ.

Rajeshwari. S

ಇಂತಿ ತಮ್ಮ ವಿಶ್ವಾಸಿ

ರಾಜೇಶ್ವರಿ .ಎಸ್.
ಎಂ.ಫಿಲ್ ವಿದ್ಯಾರ್ಥಿ
(ರಿ.ಜಿ.ನಂ: 181201030032)

ದಿನಾಂಕ:

ಸ್ಥಳ: ಮಂಡ್ಯ

ಕೃತಜ್ಞತೆಗಳು

ಕುಲಸಚಿವರು ಕನ್ನಡ ವಿಶ್ವವಿದ್ಯಾಲಯ ಹಂಪಿ ಮತ್ತು ಕನ್ನಡ ಸಾಹಿತ್ಯ ಅಧ್ಯಯನಾಂಗ ವಿಭಾಗ. ವಿದ್ಯಾರಣ್ಯ ಹಂಪಿ ಇವರಿಗೆ. ಮತ್ತು ಜೊತೆಗೆ ಮಾನ್ಯತಾ ಸಂಸ್ಥೆ ಕರ್ನಾಟಕ ಸಂಘ(ರಿ) ಮಂಡ್ಯದವರಿಗೆ ನನ್ನ ಕೃತಜ್ಞತೆಗಳು. ನನ್ನ ವಿಷಯಕ್ಕೆ ಆತ್ಮೀಯವಾಗಿ ಸ್ಪಂದಿಸಿ ಉತ್ತಮವಾಗಿ ಮಾರ್ಗದರ್ಶನ ಮಾಡಿ ಸೂಕ್ತ ಸಲಹೆಗಳನ್ನು ನೀಡಿ ಜೊತೆಗೆ **ಬೆಸಗರಹಳ್ಳಿ ರಾಮಣ್ಣ ಅವರ ಕಥೆಗಳಲ್ಲಿ ಶ್ರಮ ಸಂಸ್ಕೃತಿ** ಎಂಬ ವಿಷಯಕ್ಕೆ ಸಂಬಂಧಿಸಿದಂತೆ ಸೂಕ್ತ ಮಾರ್ಗದರ್ಶನ ಮಾಡಿದಂತಹ ಡಾ. ಮಧುಸೂದನ ಆಚಾರ್ಯ ಜೋಷಿ. ಕನ್ನಡ ಸಹ ಪ್ರಾಧ್ಯಾಪಕರು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಚನ್ನಪಟ್ಟಣ ಇವರಿಗೆ ತುಂಬು ಹೃದಯದ ಕೃತಜ್ಞತೆಗಳು.

ಸದಾ ನನ್ನ ಏಳ್ಗೆಯನ್ನೇ ಬಯಸುವ ನನ್ನ ತಂದೆಯವರಾದ ಶ್ರೀ ಶಿವರುದ್ರಪ್ಪ ಮತ್ತು ತಾಯಿ ದಾಕ್ಷಾಯಿಣಿ ಅವರಿಗೆ ನನ್ನ ಕೃತಜ್ಞತೆಗಳು.

ಸದಾ ನನಗೆ ಒಳಿತನ್ನೇ ಬಯಸುವ ನನ್ನ ಅಧ್ಯಯನಕ್ಕೆ ಬೆನ್ನೆಲುಬಾಗಿ ನಿಂತು ಪ್ರೋತ್ಸಾಹಿಸುತ್ತಿರುವ ನನ್ನ ಪತಿಯಾದ ಶ್ರೀ ಶಿವಕುಮಾರ ಕೆ.ಬಿ. ಇವರಿಗೆ ನನ್ನ ಕೃತಜ್ಞತೆಗಳು.

ಹಾಗೂ ನನ್ನ ಅಧ್ಯಯನದ ಸಂದರ್ಭದಲ್ಲಿ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಕೃತಜ್ಞತೆಗಳು.

ತಮ್ಮ ವಿಶ್ವಾಸಿ

ದಿನಾಂಕ:

ಸ್ಥಳ: ಶ್ರೀಮತಿ ರಾಜೇಶ್ವರಿ .ಎಸ್.

ಬೆಸಗರಹಳ್ಳಿ ರಾಮಣ್ಣ ಅವರ ಕತೆಗಳಲ್ಲಿ ಶ್ರಮ ಸಂಸ್ಕೃತಿ

ಪರಿವಿಡಿ.

ಅಧ್ಯಾಯ-1

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಬೆಸಗರಹಳ್ಳಿ ರಾಮಣ್ಣರವರು ವೈದ್ಯರಾಗಿ, ಕತೆಗಾರರಾಗಿ ಗಮನಸೆಳೆದ ಸೃಜನಶೀಲ ಚೇತನರಾಗಿದ್ದಾರೆ. ಗ್ರಾಮೀಣ ಸಂಸ್ಕೃತಿಯಲ್ಲಿ ಬೆಳೆದು ಬಂದ ಅವರು ಆ ಸಂಸ್ಕೃತಿಯ ಒಳನೋಟಗಳನ್ನು, ಅಲ್ಲಿನ ಶ್ರಮ ಸಂಸ್ಕೃತಿಯ ವೈವಿಧ್ಯತೆಯನ್ನು, ಮುಗ್ಧತೆ, ಅಪಮಾನ, ಶೋಷಣೆ ಹೀಗೆ ಬಹುಮುಖಿ ಸ್ಥಿತಿಗಳನ್ನು ತಮ್ಮ ಕಥೆಗಳಲ್ಲಿ ಅತ್ಯಂತ ಜೀವಂತವಾಗಿ ಹಿಡಿದಿಟ್ಟದ್ದು, ಮೊದಲಿನಿಂದಲೂ ಆಗಾಗ ಅವರ ಕತೆಗಳನ್ನು ಓದಿಕೊಂಡು ಬರುತ್ತಿದ್ದ ನನ್ನ ಮನಸ್ಸನ್ನು ಸೆಳೆಯುತ್ತಿತ್ತು. ಹಾಗಾಗಿ ಅವರ ಕತೆಗಳನ್ನೇ ನನ್ನ ಸಂಶೋಧನೆಯ ವಸ್ತುವನ್ನಾಗಿ ಆಯ್ಕೆ ಮಾಡಿಕೊಂಡೆ.

1975ರ ನಂತರ ಪ್ರಾರಂಭಗೊಂಡ ದಲಿತ ಬಂಡಾಯ ಸಾಹಿತ್ಯದ ಹಂತದಲ್ಲಿ ಪ್ರಗತಿ ಪರತೆ, ಶೋಷಣಾ ವಿರೋಧಿ ನಿಲುವುಗಳು ಪ್ರಮುಖವಾಗಿ ಕಂಡು ಬರುತ್ತವೆ. ಬೆಸಗರಹಳ್ಳಿಯವರ ನಿಲುವು ಕೂಡಾ ಶೋಷಿತರ ಪರವಾಗಿ ನಿಲ್ಲುವ ಅಂಶ ಗಮನಾರ್ಹವಾಗಿದೆ.

ಅವರ ಕತೆಗಳಲ್ಲಿ ಬಡವರ-ಅನಕ್ಷರಸ್ಥರ ಬದುಕಿನ ಒಳನೋಟಗಳು, ನಿರಂತರವಾಗಿ ಅನಾವರಣಗೊಳ್ಳುತ್ತವೆ..

ಸಾಹಿತ್ಯ ಸಮಾಜದ ಪ್ರತಿಬಿಂಬ ಮತ್ತು ಗತಿಬಿಂಬ ಎಂಬ ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪನವರ ನುಡಿಯಂತೆ ಸಮಾಜ ಬದಲಾದಂತೆ ಸಾಹಿತ್ಯದ ಪ್ರೇರಣೆ-ಧೋರಣೆಗಳು ಬದಲಾಗುತ್ತ ಬಂದದ್ದನ್ನು ಹೊಸಗನ್ನಡದ ಹಂತಗಳುದ್ದಕ್ಕೂ ಕಾಣುತ್ತೇವೆ. ಹಾಗೆಯೇ 1975ರ ನಂತರ ಈ ನಾಡಿನಲ್ಲಿ ರಾಜಕೀಯವಾಗಿ ಸಾಮಾಜಿಕವಾಗಿ ವಿಭಿನ್ನ ಬೆಳವಣಿಗೆಗಳು ಘಟಿಸಿ ರಾಜಕೀಯವಾಗಿ ತುರ್ತು ಪರಿಸ್ಥಿತಿ ಘೋಷಣೆ, ಸಾಮಾಜಿಕವಾಗಿ ದಲಿತರ ಮೇಲೆ ದೌರ್ಜನ್ಯಗಳು, ಆರ್ಥಿಕವಾಗಿ ರೈತ ಕಾರ್ಮಿಕರ ಮೇಲೆ ದಬ್ಬಾಳಿಕೆಗಳು ನಡೆಯುತ್ತ ಬಂದವು. ತುರ್ತು ಪರಿಸ್ಥಿತಿ ನರಗುಂದ ರೈತ ಬಂಡಾಯದಂಥ ಘಟನೆಗಳನ್ನು ಪ್ರಮುಖವಾಗಿ ಉದಾಹರಿಸಬಹುದಾಗಿದೆ. ತತ್ತೂರಿನಲ್ಲಿ ದಲಿತರಿಗೆ ಮಲ ತಿನ್ನಿಸಿದ ಪ್ರಸಂಗ, ಕಂಬಾಲಪಲ್ಲಿಯಲ್ಲಿ ನಡೆದ ದಲಿತರ ಸಾಮೂಹಿಕ ಹತ್ಯೆಯಂಥ ಘಟನೆಗಳು ದಲಿತ ಬಂಡಾಯ ಸಾಹಿತ್ಯಕ್ಕೆ ಪ್ರೇರಣೆಯನ್ನು ಒದಗಿಸಿದವು. ಶೋಷಣಾ ವಿರೋಧಿ ನಿಲುವು ಶೋಷಿತರ ಪರ ಚಿಂತನೆಗಳು ಈ ಹಂತದ ಸಾಹಿತ್ಯದ ಧೋರಣೆಗಳಾದವು.

ಸಮಾಜಮುಖಿಯಾಗಿ, ಜೀವಂತವಾಗಿ ಬೆಳೆದು ಬಂದ ದಲಿತ ಬಂಡಾಯ ಸಾಹಿತ್ಯ ಸಹಜವಾಗಿಯೇ ಬೆಸಗರಹಳ್ಳಿಯವರ ಮೇಲೆ ಪ್ರಭಾವ ಬೀರಿದವು.

ಈ ಎಲ್ಲ ಅಂಶಗಳ ಹಿನ್ನೆಲೆಯಲ್ಲಿ ಬೆಸಗರಹಳ್ಳಿ ರಾಮಣ್ಣನವರ ಆಯ್ದ ಕತೆಗಳಲ್ಲಿ, ಶ್ರಮ ಸಂಸ್ಕೃತಿ ಅನಾವರಣ ಹೊಂದಿರುವ ಬಗೆಯನ್ನು ಇಲ್ಲಿ ಸಂಶೋಧನಾತ್ಮಕ ಅಧ್ಯಯನಕ್ಕೆ ಅಳವಡಿಸಿಕೊಂಡಿದ್ದೇನೆ.

ಶ್ರಮ ಸಂಸ್ಕೃತಿಯ ಚಿತ್ರಣಗಳೇ ಪ್ರಮುಖವಾಗಿರುವ ಕತೆಗಳನ್ನು ಈ ಸಂಶೋಧನೆಗೆ ಆಯ್ಕೆ ಮಾಡಿಕೊಂಡು ಅಧ್ಯಯನವನ್ನು ಕೈಗೊಂಡಿದ್ದೇನೆ.

ಆಧುನಿಕ ಕನ್ನಡ ಸಾಹಿತ್ಯವು ನವೋದಯ, ನವ್ಯ, ಪ್ರಗತಿಶೀಲ ಹಾಗೂ ದಲಿತ ಬಂಡಾಯ ಘಟ್ಟಗಳಲ್ಲಿ ಕವನ, ಕಥೆ, ಕಾದಂಬರಿ, ನಾಟಕ, ವಿಮರ್ಶೆ ಮುಂತಾದ ಪ್ರಕಾರಗಳ ಮೂಲಕ ಬೆಳೆದುಕೊಂಡು ಬಂದಿದೆ. ಇಂತಹ ವಿವಿಧ ಪ್ರಕಾರಗಳಲ್ಲಿ ಸಣ್ಣ ಕಥೆಯು ಪ್ರಮುಖ ಅಭಿವ್ಯಕ್ತಿ ಮಾಧ್ಯಮವಾಗಿರುವುದು ಗಮನಾರ್ಹ ಸಂಗತಿಯಾಗಿದೆ.

ನವೋದಯ, ಪ್ರಗತಿಶೀಲ, ನವ್ಯ ಎಂಬ ಮನೋಧರ್ಮಕ್ಕೆ ಅಂಟಿಕೊಳ್ಳದೆ ತಮ್ಮದೇ ವಿಶಿಷ್ಟ ನೆಲೆ- ನಿಲುವುಗಳ ಮೂಲಕ ಕಥೆ ರಚಿಸಿದ ಸೃಜನಶೀಲ ವ್ಯಕ್ತಿ ಬೆಸಗರಹಳ್ಳಿ ರಾಮಣ್ಣನವರು.

ಬೆಸಗರಹಳ್ಳಿ ರಾಮಣ್ಣನವರು ನವೋದಯಲ್ಲಿ ಹುಟ್ಟಿ ಪ್ರಗತಿ ಶೀಲದಲ್ಲಿ ಬೆಳೆದು ಬಂಡಾಯದ ಗುಣಗಳನ್ನು ರೂಢಿಸಿಕೊಂಡು ಬೆಳೆದವರು, ಅವರು ನೇರ ನಡೆ ನುಡಿಯ ನಿಷ್ಠುರರು ನುಡಿದಂತೆ ಬದುಕಿದವರು ಇವರ ಸಾಹಿತ್ಯ ಕೃಷಿಯಂತೆ ಬದುಕೂ ಕೂಡ ಎಲ್ಲರನ್ನು ಎಲ್ಲವನ್ನೂ ಒಳಗೊಂಡಿತ್ತು. ಸಾಹಿತ್ಯ ಲೋಕದ ಮಿತ್ರರು, ಸಹೃದಯರು ರಾಮಣ್ಣನವರನ್ನು ಸಜ್ಜನ, ಸ್ನೇಹಜೀವಿ, ಹೆಂಗರುಳಿನ ನಿಸ್ವಾರ್ಥ ಹೃದಯ ಹೊಂದಿರುವ ಮನುಷ್ಯ ಎಂದು ಒಪ್ಪಿದ್ದಾರೆ, ಆದರಿಸಿದ್ದಾರೆ.

ರಾಮಣ್ಣನವರ ಜೀವನದಲ್ಲಿ ಕಂಡುಂಡ ಜೀವನಾನುಭವಗಳೇ ಸಾಹಿತ್ಯಕ ಅಭಿವ್ಯಕ್ತಿ ಪಡೆದವು. ತಮ್ಮ ಜೀವನದ ಅನುಭವಗಳನ್ನು ಒಗ್ಗೂಡಿಸಿಕೊಂಡು ಕಥೆಗಳ ಮೂಲಕ ಅಭಿವ್ಯಕ್ತಿಸಿದವರು. ಹಳ್ಳಿಯ ಹಸಿರಿನ ಮಡಿಲಲ್ಲಿ ಹುಟ್ಟಿ ಬೆಳೆದ ರಾಮಣ್ಣ, ಅಲ್ಲಿಯ ಜನರ ಪ್ರೀತಿ-ಸ್ನೇಹ, ಕಷ್ಟ-ಸುಖಗಳನ್ನು, ಉಳ್ಳವರ ದರ್ಪ, ದೌರ್ಜನ್ಯಗಳನ್ನು ಅಮಾಯಕರ, ಕೆಳವರ್ಗದವರ ಅಸಹಾಯಕ ಬದುಕನ್ನು ಹತ್ತಿರದಿಂದ ಕಂಡು ಅವುಗಳನ್ನೇ ತಮ್ಮ ಕಥೆಗಳ ವಸ್ತುಗಳನ್ನಾಗಿ ಆಯ್ದುಕೊಂಡ ಸಮಾಜ ಪರ ಚಿಂತಕರಾಗಿ ಹೊರಹೊಮ್ಮಿದ್ದಾರೆ.

ವೈದ್ಯರಾಗಿದ್ದ ರಾಮಣ್ಣ ವೃತ್ತಿ ಸಹಜ ವರ್ಗಾವಣೆಗಳಿಂದಾಗಿ ಹಲವಾರು ಕಡೆ ನೆಲೆಸಿದ್ದರಿಂದ ಅಲ್ಲಿಯ ಪರಿಸರ, ಜನ ಜೀವನಗಳೇ ಇವರ ಕಥೆಗಳಿಗೆ ಬೀಜಗಳಾದವು. ವೈವಿಧ್ಯಮಯವಾದ ಬದುಕಿನ ಬಹುಮುಖಗಳು ಅನಾವರಣಗೊಂಡವು.

ವ್ಯಕ್ತಿ ಬದುಕಿನ ಅಂತರಾಳದ ತುಡಿತಗಳು, ಅಸ್ಪೃಶ್ಯತೆ ಮತ್ತು ವರ್ಗ ಸಂಘರ್ಷದ ಬೇರೆ ಬೇರೆ ನೆಲೆಗಳು, ಶೋಷಣೆಯ ವ್ಯವಸ್ಥೆ ಕಾಯ್ದುಕೊಂಡಿರುವ ಹಿಡಿತ, ಮೌಢ್ಯಮಯ ಸಂಪ್ರದಾಯದ ನಡುವೆಯೂ ತುಂಬಾ ಜೀವಂತಿಕೆಯಂದಿರುವ ಗ್ರಾಮೀಣ ಜನ ಜೀವನ ಮುಂತಾದ ಅಂಶಗಳನ್ನು ಬೆಸಗರಹಳ್ಳಿ ರಾಮಣ್ಣರವರ ಕಥೆಗಳಲ್ಲಿ ಸ್ಪಷ್ಟವಾಗಿ ಗುರುತಿಸಬಹುದಾಗಿದೆ.

ಜನರ ತುಡಿತ-ಮಿಡಿತಗಳು, ಜೀವನ ಕ್ರಮ, ಸಾಂಸ್ಕೃತಿಕ ಸಂಗತಿಗಳು, ಬಡವರ, ಕೆಳವರ್ಗದವರ ಜೀವನ, ಗ್ರಾಮೀಣರ ಬದುಕು, ಅಸಹಾಯಕತೆ, ವಿದ್ಯಾವಂತ, ಅವಿದ್ಯಾವಂತರ ಮಾನಸಿಕ ತಳ ಮಳ ಮೊದಲಾದ ವಿಚಾರಗಳ ಬಗೆಗೆ ಬೆಸಗರಹಳ್ಳಿ ರಾಮಣ್ಣನವರ ಕಥೆಗಳು ಬೆಳಕು ಚೆಲ್ಲುತ್ತವೆ. ಅಪರೂಪವಾಗುತ್ತಿರುವ ಮಾನವೀಯ ಸಂಬಂಧಗಳಿಗೆ ಒತ್ತುಕೊಡುವ ರಾಮಣ್ಣನವರ ಕಥೆಗಳು ಅಧ್ಯಯನ ಯೋಗ್ಯವಾಗಿವೆ. ಹೀಗಾಗಿ ಪ್ರಸ್ತುತ ಅಧ್ಯಯನದಲ್ಲಿ ಬೆಸಗರಹಳ್ಳಿ ರಾಮಣ್ಣ ಅವರ ಕಥೆಗಳಲ್ಲಿ ಶ್ರಮ ಸಂಸ್ಕೃತಿ ಅನಾವರಣಗೊಂಡಿರುವ ಬಗೆಯನ್ನು ವಿಸ್ತೃತ ಅಧ್ಯಯನಕ್ಕೆ ಒಳಪಡಿಸಲಾಗಿದ್ದು ಆ ಮೂಲಕ ಈ ವಿಷಯದ ಮೇಲೆ ಹೊಸ ಬೆಳಕನ್ನು ಚೆಲ್ಲುವುದು ಅಧ್ಯಯನದ ಪ್ರಮುಖ ಉದ್ದೇಶವಾಗಿದೆ.

ನನ್ನ ಸಂಶೋಧನಾತ್ಮಕ ಅಧ್ಯಯನವನ್ನು ಹೀಗೆ ವಿಂಗಡಿಸಿಕೊಂಡಿದ್ದೇನೆ.

ಅಧ್ಯಾಯ ಒಂದು:-

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿಯನ್ನು ಒಳಗೊಂಡಿರುತ್ತವೆ. ನನ್ನ ಈ ಅಧ್ಯಯನದ ಉದ್ದೇಶ ಹಾಗೂ ಅದರ ಪರಿಧಿಯನ್ನು ಈ ಅಧ್ಯಾಯದಲ್ಲಿ ವಿವರಿಸಲು ಯತ್ನಿಸಿದ್ದೇನೆ. ಮುಂದಿನ ನನ್ನ ಸಂಪ್ರಬಂಧದ ಮುನ್ನೋಟದ ಪರಿಚಯವನ್ನು ಇಲ್ಲಿ ಮಾಡಿ ಕೊಡಲು ಪ್ರಯತ್ನಿಸಿದ್ದೇನೆ.

ಅಧ್ಯಾಯ ಎರಡು:-

ಹೊಸಗನ್ನಡ ಸಾಹಿತ್ಯದ ಸಂಕ್ಷಿಪ್ತ ಇತಿಹಾಸ ಎನ್ನುವ ಶೀರ್ಷಿಕೆಯಡಿಯಲ್ಲಿ 20ನೇ ಶತಮಾನದ ಕನ್ನಡ ಸಾಹಿತ್ಯದ. ಇತಿಹಾಸವನ್ನು ಸಂಕ್ಷಿಪ್ತವಾಗಿ ವಿವರಿಸುವುದು ಈ ಆಧ್ಯಾಯದ ಉದ್ದೇಶವಾಗಿದೆ.

ಅಧ್ಯಾಯ ಮೂರು:-

ಹೊಸಗನ್ನಡ ಸಾಹಿತ್ಯದಲ್ಲಿ ಸಣ್ಣಕಥೆಗಳು ಮತ್ತು ಕನ್ನಡ ಸಣ್ಣಕಥಾ ಪರಂಪರೆಯ ಬಗೆಗೆ ಈ ಅಧ್ಯಾಯದಲ್ಲಿ ಅವಲೋಕಿಸಲಾಗಿದೆ.

ಕನ್ನಡ ಕಥಾ ಸಾಹಿತ್ಯವು ವಿಶಿಷ್ಟವಾದ ಪರಂಪರೆಯನ್ನು ಹೊಂದಿದೆ. ಕತೆಗಾರರು ತಮ್ಮ ಭಾವನೆಗಳನ್ನು, ಅನುಭವಗಳನ್ನು ವ್ಯವಸ್ಥಿತವಾಗಿ, ಚುಟುಕಾಗಿ, ಚುರುಕಾಗಿ ಸರಳವಾಗಿ ನಿರೂಪಿಸಲು

ಇರುವ ಸಮರ್ಥ ಮಾರ್ಗ ಎಂದರೆ ಸಣ್ಣ ಕಥೆ. ಒಂದೇ ಬಾರಿಗೆ ಓದಿ ಮುಗಿಸಲು, ವಿಷಯವನ್ನು ಸಮರ್ಥವಾಗಿ ಅರಿಯಲು ಸಣ್ಣ ಕಥೆಗಳ ಮಾಧ್ಯಮವು ಸಹಾಯಕವಾಗುತ್ತದೆ. ಇದುವರೆಗೂ ನಾನಾ ಪ್ರಕಾರಗಳಲ್ಲಿ ಸಾಹಿತ್ಯವು ಅಭಿವ್ಯಕ್ತಿ ಪಡೆದಿದ್ದರೂ ಸಣ್ಣ ಕಥಾ ಮಾಧ್ಯಮವು ಮಾನವನ ಜೀವನದ ನೋವು, ನಲಿವು, ಸುಖ-ದುಃಖಗಳನ್ನು ಸಮರ್ಥವಾಗಿ ಹಿಡಿದಿಡುವ ಗುಣ ಹೊಂದಿದೆ. ಇಂಥ ಸಣ್ಣ ಕಥೆ ಹುಟ್ಟಿ ಬೆಳೆದ ಬಗೆ, ಅದರ ಸ್ವರೂಪ, ಕಾಲಕಾಲಕ್ಕೆ ಬದಲಾದ ವೈಶಿಷ್ಟ್ಯತೆ ವಿವಿಧ ಕಾಲಘಟ್ಟಗಳಲ್ಲಿ ಅಂದರೆ ನವೋದಯ, ಪ್ರಗತಿಶೀಲ, ನವ್ಯ, ದಲಿತ ಬಂಡಾಯದಲ್ಲಿ ಅದು ಪಡೆದ ವೈವಿದ್ಯತೆಯನ್ನು ಅಧ್ಯಾಯನ ಮಾಡಿ ಸಂಕ್ಷಿಪ್ತವಾಗಿ ವಿವರಿಸಲು ಯತ್ನಿಸಿದ್ದೇನೆ.

ಅಧ್ಯಾಯ ನಾಲ್ಕು:-

ದಲಿತ ಬಂಡಾಯ ಸಾಹಿತ್ಯ ಎಂಬ ಶೀರ್ಷಿಕೆಯಡಿಯಲ್ಲಿ ದಲಿತ ಬಂಡಾಯ ಸಾಹಿತ್ಯದ ಕುರಿತು ಮತ್ತು ಪ್ರಮುಖ ಸಾಹಿತಿಗಳನ್ನು ಕುರಿತು ಸಂಕ್ಷಿಪ್ತವಾಗಿ ವಿಶ್ಲೇಷಿಸಲಾಗಿದೆ.

ಅಧ್ಯಾಯ ಐದು:-

ಈ ಅಧ್ಯಾಯದಲ್ಲಿ ಬೆಸಗರಹಳ್ಳಿ ರಾಮಣ್ಣ ನವರ ಬದುಕು ಮತ್ತು ಸಾಹಿತ್ಯದ ಬಗ್ಗೆ ಅಧ್ಯಯನ ಮಾಡಲಾಗಿದೆ. ಮಂಡ್ಯ ಜಿಲ್ಲೆಯವರಾದ ಬೆಸಗರಹಳ್ಳಿ ರಾಮಣ್ಣ ತಮ್ಮ ಇಡೀ ಕಥನ ಸಾಹಿತ್ಯದಲ್ಲಿ ನೊಂದವರ, ಬಡವರ, ಗ್ರಾಮೀಣ ಜನರ ಚಿತ್ರಣವನ್ನು ಕೊಡುವ, ಸಾಮಾಜಿಕವಾಗಿ ಕಟ್ಟಕಡೆಯ ವ್ಯಕ್ತಿಯನ್ನು ತಮ್ಮ ಕಥೆಗಳ ನಾಯಕನ್ನಾಗಿ ಮಾಡಿಕೊಂಡಿರುವ ಮುಂತಾದ ವಿಷಯಗಳನ್ನು ಇಲ್ಲಿ ವಿವರಿದ್ದೇನೆ.

ರಾಮಣ್ಣ ನವರು ಆಧುನಿಕ ಸಾಹಿತ್ಯದ ಎಲ್ಲಾ ಕಾಲಘಟ್ಟಗಳನ್ನು ಪ್ರತಿನಿಧಿಸುವ ಕಥೆಗಳನ್ನು ಬರೆದಿದ್ದಾರೆ. ಇವರ ಕಥೆಗಳ ಅಧ್ಯಯನವೆಂದರೆ ಜೀವನ ಶೋಧನೆಯ ಅಧ್ಯಯನವೇ ಆಗುತ್ತದೆ.

ಅಧ್ಯಾಯ ಆರು:-

ಇದು ಸಂಶೋಧನೆಯ ಪ್ರಮುಖ ಭಾಗವಾಗುದ್ದು. ಬೆಸಗರಹಳ್ಳಿ ರಾಮಣ್ಣ ನವರ ಕಥೆಗಳಲ್ಲಿ ಶ್ರಮ ಸಂಸ್ಕೃತಿ ಎಂಬ ಶೀರ್ಷಿತೆಯಡಿಯಲ್ಲಿ ರಾಮಣ್ಣ ನವರ ಕಥೆಗಳನ್ನು ಆಳವಾಗಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಪ್ರಧಾನವಾಗಿ ವಸ್ತು, ಭಾಷೆ, ಶೈಲಿ ಎಂಬ ದೃಷ್ಟಿಕೋನಗಳ ಅಡಿಯಲ್ಲಿ ವಿಸ್ತೃತವಾಗಿ ಈ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಪ್ರತಿಯೊಬ್ಬ ಕಥೆಗಾರರು ತಮ್ಮ ಕಥೆಗಳಲ್ಲಿ ಯಾವುದಾದರೊಂದು ವಸ್ತುವನ್ನಿಟ್ಟುಕೊಂಡು ಬರೆಯುವುದು ಸಾಮಾನ್ಯ. ಈ ಹಿನ್ನಲೆಯಲ್ಲಿ ರಾಮಣ್ಣ ನವರ

ಕಥೆಗಳಲ್ಲಿನ ವಸ್ತು, ವೈವಿದ್ಯತೆಗಳನ್ನು ಗುರ್ತಿಸಿ ಅಧ್ಯಯನ ನಡೆಸಿದ್ದೇನೆ ರಾಮಣ್ಣ ಹುಟ್ಟಿ ಬೆಳೆದದ್ದು ಬಹುಪಾಲು ಗ್ರಾಮೀಣ ಪ್ರದೇಶದಲ್ಲಿಯೇ ಹಾಗಾಗಿ ಇವರ ಹೆಚ್ಚಿನ ಕಥೆಗಳು ಗ್ರಾಮೀಣ ಬದುಕಿನ ವಸ್ತುವನ್ನು ಆಯ್ದುಕೊಂಡು, ಅಲ್ಲಿಯ ಸಣ್ಣತನ, ಪ್ರೀತಿ, ಸ್ನೇಹ, ದುರಂತ, ಸ್ವಾರ್ಥ, ಜಮೀನ್ದಾರರ ಧಾರ್ಷ್ಟ್ಯವನ್ನು ತೆರೆದಿಡುತ್ತವೆ. ಈ ಹಿನ್ನಲೆಯಲ್ಲಿ ಸಂಶೋಧನಾತ್ಮಕ ಅಧ್ಯಯನವನ್ನು ಈ ಅಧ್ಯಾಯ ಒಳಗೊಂಡಿದೆ.

ಅಧ್ಯಾಯ ಏಳು:-

ಸಂಪ್ರಬಂಧದ ಫಲಿತಗಳನ್ನು ಕುರಿತು ಇಲ್ಲಿ ಚರ್ಚಿಸಲಾಗಿದೆ. ಹೀಗೆ ಬೆಸಗರಹಳ್ಳಿ ರಾಮಣ್ಣ ನವರ ಕಥೆಗಳಲ್ಲಿ ಶ್ರಮ ಸಂಸ್ಕೃತಿ ಎಂಬ ಈ ಸಂಪ್ರಬಂಧದಲ್ಲಿ ರಾಮಣ್ಣನವರ ಕಥೆಗಳನ್ನು ವಿಸ್ತೃತ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಅಧ್ಯಾಯ-2

ಹೊಸಗನ್ನಡ ಸಾಹಿತ್ಯದ ಇತಿಹಾಸ

ನವೋದಯ ಎಂದರೆ ಹೊಸತರ ಹುಟ್ಟು ಎಂದರ್ಥ ಬ್ರಿಟಿಷ್ ಆಳ್ವಿಕೆಯ ಪ್ರಾರಂಭಿಕ ಹಂತಗಳಲ್ಲಿ 17-18ನೇ ಶತಮಾನಗಳಲ್ಲಿ ಹೆಚ್ಚು ಬೆಳಕು ಕಾಣದೆ ಇದ್ದ ಕನ್ನಡ ಸಾಹಿತ್ಯ 20ನೇ ಶತಮಾನದ ಆರಂಭದಲ್ಲಿ ಹೊಸ ರೂಪಗಳನ್ನು ಪಡೆಯಿತು. ಆಧುನಿಕ ಕನ್ನಡ ಕಾವ್ಯದ ಬೆಳವಣಿಗೆಗೆ ನಾಂದಿ ಹಾಡಲಾಯಿತು.

ಈ ಹಂತದಲ್ಲಿ ಬಿ.ಎಂ.ಶ್ರೀ.ಕುವೆಂಪು, ಬೇಂದ್ರೆ, ಶಿವರಾಮಕಾರಂತ ಮೊದಲಾದ ಕವಿ ಪುಂಗವರು ಕನ್ನಡ ಕಾವ್ಯ ಪರಂಪರೆಯನ್ನು ಶ್ರೀಮಂತಗೊಳಿಸಿದರು.

20ನೇ ಶತಮಾನದ ಆರಂಭದ ಕಾಲದ ಸಾಹಿತ್ಯ ಪ್ರಕಾರಗಳು ಇಂಗ್ಲೀಷಿನ ರೊಮ್ಯಾಂಟಿಕ್ ಕಾವ್ಯ ಮತ್ತು ಗ್ರೀಕ್‌ನ ರುದ್ರ ನಾಟಕಗಳಿಂದ ಪ್ರಭಾವಿತವಾದವು. ಈ ಘಟ್ಟದ ಬೆಳವಣಿಗೆಯನ್ನು ಆರಂಭಿಸಿದವರು ಬಿ.ಎಂ.ಶ್ರೀ ತಮ್ಮ ಇಂಗ್ಲೀಷ್ ಗೀತೆಗಳು ಪುಸ್ತಕ ಪ್ರಕಟಿಸಿ ಅನೇಕ ಸುಶಿಕ್ಷಿತ ಕನ್ನಡಿಗರಿಗೆ ತಮ್ಮ ಮಾತೃ ಭಾಷೆಯಲ್ಲಿ ಬರೆಯುವುದರ ಮಹತ್ವವನ್ನು ಮನಗಾಣಿಸಿಕೊಟ್ಟು ಕನ್ನಡ ಸಾಹಿತ್ಯಕ ಪ್ರೇರಣೆಯನ್ನೊದಗಿಸಿದರು.

ಇದಕ್ಕೆ ಉದಾಹರಣೆಯಾಗಿ ಕುವೆಂಪು ಕಸಿನ್ ಎಂಬ ತಮ್ಮ ಒಬ್ಬ ಶಿಕ್ಷಕರಿಂದ (ಬ್ರಿಟಿಷ್ ಮೂಲದವರು) ಕನ್ನಡದಲ್ಲಿ ಬರೆಯುವುವರ ಮಹತ್ವ ಕಂಡುಕೊಂಡು ಮುಂದೆ ರಾಷ್ಟ್ರ ಕವಿ ಬಿರುದಿಗೆ ಪಾತ್ರರಾದರು. ಕನ್ನಡದ ಮತ್ತೊಬ್ಬ ಅಗ್ರಗಣ್ಯ ಲೇಖಕರಾದ ಶಿವರಾಮ ಕಾರಂತರದು ಅತ್ಯಂತ ಬುದ್ಧಿ ಮತ್ತೆಯ ಆದರ್ಶಗಳುಳ್ಳ ವ್ಯಕ್ತಿತ್ವ ಹಾಗೂ ಅಷ್ಟೇ ಆಳವಾದ ಸಾಮಾಜಿಕ ಕಳಕಳಿಯುಳ್ಳವರು. ಈ ಕಾಲದ ಪ್ರಸಿದ್ಧ ಕವಿಗಳಾದ ಕುವೆಂಪು, ಬಿ.ಎಂ.ಶ್ರೀ, ದ.ರಾ.ಬೇಂದ್ರೆ, ಪು.ತಿ.ನ. ಗೋವಿಂದ ಪೈ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ತೀ.ನಂ.ಶ್ರೀ ಮುಂತಾದವರು ನವೋದಯ ಕಾವ್ಯವವನ್ನು ಬೆಳೆಸಿದರು.

ಹೊಸಗನ್ನಡ ಸಾಹಿತ್ಯ ಸಮೃದ್ದವಾಗಿ ಬೆಳೆದದ್ದು ಕಾವ್ಯ ಕ್ಷೇತ್ರದಲ್ಲಿ ಮತ್ತು ಸಣ್ಣ ಕಥೆಗಳ ಕ್ಷೇತ್ರದಲ್ಲಿ.

ರಂ.ಶ್ರೀ.ಮುಗಳಿಯವರು 1820 ರಿಂದ 1920ರ ಅವಧಿಯನ್ನು ಹೊಸಗನ್ನಡ ಸಾಹಿತ್ಯದ ಮೊದಲ ಹಂತ ಎಂದು ಕರೆದಿದ್ದಾರೆ. ಇದು ತೀರಾ ಹೆಚ್ಚಿನ ಕಾಲ ಎಂದು ಕಾಣುತ್ತದೆ. 1921 ರಿಂದ

1958ರ ಅವಧಿಯಲ್ಲಿ ವಿಫುಲವಾಗಿ, ವೈವಿಧ್ಯಮಯವಾಗಿ ಸಾಹಿತ್ಯದ ಸುಗ್ಗಿ ಕಂಡಿತು. 1823 ರಲ್ಲಿ ಬಂದ ಕೆಂಪು ನಾರಾಯಣನ ಮುದ್ರಾಮಂಜೂಷದಲ್ಲಿ ಹಳೆಯದರೊಡನೆ ಹೊಸಗನ್ನಡ ನುಡಿಗಟ್ಟು ಸೇರಿದೆ ಎನ್ನುವುದು ಮುಗುಳಿಯವರ ಈ ನಿರ್ಧಾರಕ್ಕೆ ಮುಖ್ಯ ಕಾರಣ.

1869 ರಲ್ಲಿ ಚುರುಮುರಿ ಶೇಷಗಿರಿರಾಯರು, 1883ರಲ್ಲಿ ಬಸವಪ್ಪ ಶಾಸ್ತ್ರಿಗಳು ಕಾಳಿದಾಸನ ಶಾಕುಂತಳ ನಾಟಕವನ್ನು ಕನ್ನಡಕ್ಕೆ ಅನುವಾದಿಸಿದರು. 1885ರಲ್ಲಿ ಬಿ.ವೆಂಕಟಾ ಚಾರ್ಯರು ಬಂಕಿಮರ ದುರ್ಗೇಶ ನಂದಿನಿ ಕಾದಂಬರಿಯನ್ನು ಅನುವಾದಿಸಿದರು. 1896ರಲ್ಲಿ ಮುರುಗಾರಾಧ್ಯರ ಕಾದಂಬರಿ ಶೃಂಗಾರ ಚಾತುರ್ಯೋಲ್ಲಾಸಿನಿ ಪ್ರಕಟವಾಯಿತು, 1890ರಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘದ ಸ್ಥಾಪನೆಯಾಯಿತು. ಇದೆಲ್ಲವನ್ನೂ ಗಮನಿಸಿ ಹೊಸಗನ್ನಡ ಸಾಹಿತ್ಯದ ಮೊದಲ ಹಂತ 1870 ರಿಂದ 1920 ರವರೆಗೆ ಎನ್ನಬಹುದು. ಇದನ್ನು ನವೋದಯ ಪೂರ್ವಯುಗ ಎನ್ನುತ್ತಾರೆ.

ಈ ಐವತ್ತು ವರ್ಷಗಳು (1870-1920) ಉತ್ಸಾಹದ ಪ್ರಯತ್ನಗಳ, ಪ್ರಯೋಗಗಳ ಕಾಲ. ಪಾಶ್ಚಾತ್ಯರ ನಿಕಟ ಸಂಪರ್ಕ, ಅವರ ವಿದ್ಯಾಭ್ಯಾಸದ ರೀತಿ ಸಾಹಿತ್ಯ ಸಂಸ್ಕೃತಿಗಳ ಪರಿಚಯ ಇವು ಕನ್ನಡ ನಾಡಿನಲ್ಲಿ ಹೊಸ ವಿಚಾರ ರೀತಿಯನ್ನೂ ಸಂವೇದನೆಗಳನ್ನು ಹರಿತಗೊಳಿಸಿದವು.

ಈ ಕಾಲದಲ್ಲಿ ಹೊಸ ಸಾಹಿತ್ಯವನ್ನು ನಿರ್ಮಿಸ ಹೊರಟವರಿಗೆ ಎದುರಾದ ಸಮಸ್ಯೆಗಳು ಹಲವು.

ಇಂಗ್ಲೀಷ್ ಸಾಹಿತ್ಯದ ಆಕರ್ಷಣೆ ಸಹಜವಾಗಿ ಭಾಷಾಂತರ ರೂಪಗಳಲ್ಲಿ ವ್ಯಕ್ತವಾಯಿತು. ಹಲವು ಕವನಗಳು ಅನುವಾದವಾದಂತೆ ನಾಟಕಗಳೂ ಅನುವಾದವು. ಇಂಗ್ಲೀಷ್ ಸಾಹಿತ್ಯದ ಆಕರ್ಷಣೆ ಎಷ್ಟೇ ದೂರ ಹೋಯಿತೆಂದರೆ ಇಂಗ್ಲಿಷ್ ತಿಳಿಯದ ಬಸವಪ್ಪ ಶಾಸ್ತ್ರಿಗಳು ಇಂಗ್ಲೀಷ್ ತಿಳಿದವರಿಂದ ಷೇಕ್ಸ್‌ಪಿಯನರ ಒಥೆಲೊ ನಾಟಕವನ್ನು ಓದಿಸಿ ಅರ್ಥ ತಿಳಿದುಕೊಂಡು ಶೂರಸೇನ ಚರಿತ್ರೆ ಎಂದು ರೂಪಾಂತರ ಮಾಡಿದರು.

ಸಮೃದ್ಧಿಯಾಗಿ ಅನುವಾದಗಳು ಪ್ರಕಟವಾದ ಕಾಲ ಇದು ಮುಖ್ಯವಾಗಿ ಇಂಗ್ಲೀಷ್ ಮತ್ತು ಸಂಸ್ಕೃತ ಭಾಷೆಗಳ ಕೃತಿಗಳು ಅನುವಾದವಾದವು. ಈ ಅನುವಾದಗಳೊಂದಿಗೆ ಹೊಸ ಯುಗದ ಸೊಗಡನ್ನು ಹೊತ್ತ ಗಾಳಿ ಕೆಲವು ಸ್ವತಂತ್ರ ಕೃತಿಗಳಲ್ಲಿಯೂ ಸುಳಿಯಿತು. ಎಸ್.ಜಿ. ನರಸಿಂಹಾಚಾರ್ಯರ ಗೋವಿನ ಬಾಳು ಜಯರಾಮಾಚಾರ್ಯರ ಬೆಕ್ಕಿಗೆ ಹೇಳುವ ಹಾಡು 35-40 ವರ್ಷದ ಕೆಳಗೆ ಶಾಲೆಗೆ ಹೋಗುತ್ತಿದ್ದ ಎಲ್ಲ ಬಾಲಕ ಬಾಲಕಿಯರಿಗೆ ಪರಿಚಿತವಾಗಿದೆ. ಅಯ್ಯ ಶಾಸ್ತ್ರಿಗಳ ಸ್ವಾಮಿದೇವನೆ ಲೋಕಪಾಲನೆ ಇಂತಹ ಕವನಗಳಲ್ಲಿ ನಿಸ್ಸಂಶಯವಾಗಿ ಹೊಸಗನ್ನಡ ಸಾಹಿತ್ಯದ ಚೇತನ ರೂಪ ತಾಳಿತ್ತು.

ಈ ಕಾಲದಲ್ಲಿ ಕನ್ನಡ ಕಾವ್ಯ ಇಟ್ಟ ಒಂದು ಮುಖ್ಯ ಹೆಜ್ಜೆ ಪ್ರಾಸವನ್ನು ಬಿಟ್ಟಿದ್ದು.

1988-1900ರಲ್ಲಿ ಗೋವಿಂದ ಪೈ ರವರು ಈ ಯೋಚನೆ ಮಾಡಿದರು. ಪ್ರಾಸವಿಲ್ಲದ ಹೊಲೆಯನು ಯಾರು ಎಂಬ ಕವನವನ್ನು ಅವರು ಸ್ವದೇಶಾಭಿಮಾನಿ ಪತ್ರಿಕೆಯಲ್ಲಿ ಪ್ರಕಟಿಸಿದರು. ಪ್ರಾಸವನ್ನು ಬಿಟ್ಟು ಬರೆದದ್ದು ಆಗಿನ ಕಾಲದಲ್ಲಿ ಸಾಹಿತ್ಯ ಕ್ಷೇತ್ರದಲ್ಲಿ ಒಂದು ಕ್ರಾಂತಿಯಾಯಿತು. ಅನೇಕರು ಗೋವಿಂದಪೈಗಳ ಪ್ರಯೋಗವನ್ನು ಖಂಡಿಸಿದರು. ಗೋವಿಂದ ಪೈಗಳ ಇಂದು ಒಬ್ಬನೇ ನಡೆದ ಮೇಕೆ ದಾರಿಯೇ ಮುಂದೆ ತೇರೆಳೆವ ಹೆದ್ದಾರಿ ಎಂದು ಉತ್ತರ ಕೊಟ್ಟರು.

ಕಾವ್ಯದಾಚೆಗೆ ಕೂಡಾ ಈ ಕಾಲದಲ್ಲಿ ಗಮನಾರ್ಹವಾದ ಕೆಲಸ ನಡೆಯಿತು. ಸಂಸ್ಕೃತದಿಂದ ಇಂಗ್ಲೀಷ್‌ನಿಂದ ನಾಟಕಗಳ ಅನುವಾದ ಸಮೃದ್ಧವಾಗಿ ನಡೆಯಿತು. ಬಸವಪ್ಪ ಶಾಸ್ತ್ರಿಗಳ ಶಾಕುಂತಳದಂತಹ ಅನುವಾದ ಇದಕ್ಕೆ ಉದಾಹರಣೆ. ಸಂಸ್ಕೃತ ನಾಟಕಗಳ ಅನುವಾದ ಸಂಸ್ಕೃತ ನಾಟಕದ ಪರಂಪರೆ ಕನ್ನಡ ನಾಟಕದಲ್ಲಿ ಉಳಿದು ಬರುವುದನ್ನು ಸಾಧ್ಯ ಮಾಡಿತು. ವೃತ್ತಿ ಕಂಪನಿಗಳವರು ಈ ಪರಂಪರೆಯನ್ನು ಬೆಳೆಸಿದರು. ನಾಟಕಗಳು ಸಾಮಾನ್ಯವಾಗಿ ಪೌರಾಣಿಕ ವಸ್ತುವನ್ನು ಬಳಸಿಕೊಂಡವು.

ನವೋದಯ ಪೂರ್ವ ಅಥವಾ ನವೋದಯದ ಪ್ರಥಮ ಘಟ್ಟದಲ್ಲಿಯೇ ಸಣ್ಣ ಕಥೆ ಮತ್ತು ಕಾದಂಬರಿ ಕನ್ನಡದಲ್ಲಿ ಮೊಳಕೆಯೊಡೆದವು. ಸಣ್ಣ ಕಥೆ ನಮಗೆ ಹೊಸದು ಎಂಬ ಮಾತು ನಿಜ. ಪಂಚತಂತ್ರದ ಕಥೆಗಳು ಈ ನಾಡಿನವರಿಗೆ ಸುಪರಿಚಿತ. ಆದರೆ ಸಾಹಿತ್ಯದ ಒಂದು ವಿಶಿಷ್ಟ ರೂಪವಾಗಿ ಸಣ್ಣ ಕಥೆಗಳು ಅರಳಿದ್ದು, ಪಾಶ್ಚಾತ್ಯರಲ್ಲಿ, ಪ್ರಾಯಶಃ ಕನ್ನಡದಲ್ಲಿ ಮೊದಲು ಸಣ್ಣ ಕಥೆಗಳನ್ನು ಬರೆದವರು ಪಂಜೆ ಮಂಗೇಶರಾಯರು. ಮಾಸ್ತಿಯವರ ಸಣ್ಣಕಥೆಗಳು 1918-1919ರ ಹೊತ್ತಿಗೆ ಪ್ರಕಟವಾಗಲು ಪ್ರಾರಂಭವಾದವು.

ಕಾದಂಬರಿ ಕನ್ನಡಕ್ಕೆ ಬಂದದ್ದು ಈ ಕಾಲದಲ್ಲಿ ಬಂಗಾಳದ ಬಂಕಿಮರ ದುರ್ಗೇಶ ನಂದಿನಿ ಯನ್ನು 1885ರಲ್ಲಿ ವೆಂಕಟಾಚಾರ್ಯರು ಕನ್ನಡಕ್ಕೆ ಅನುವಾದಿಸಿದರು. 1886ರಲ್ಲಿ ಗುಬ್ಬಿ ಮುರುಗಾರಾಧ್ಯರ ಸ್ವತಂತ್ರ ಕೃತಿ ಶೃಂಗಾರ ಚಾತುರ್ಯೋಲ್ಲಾಸಿನಿ ಪ್ರಕಟವಾಯಿತು. 1899ರಲ್ಲಿ ಗುಲ್ವಾಡಿ ವೆಂಕಟರಾಯರ ಇಂದಿರಾ ಕಾದಂಬರಿ ರಚಿತವಾಯಿತು. ಇದು ಕನ್ನಡದಲ್ಲಿ ಮೊಟ್ಟ ಮೊದಲನೆಯ ಸ್ವತಂತ್ರ ಸಾಮಾಜಿಕ ಕಾದಂಬರಿ ಎಂದು ಕರೆಸಿಕೊಂಡಿತು. ಇದರಲ್ಲಿ ಸಾಮಾಜಿಕ ಜೀವನದ ಮತ್ತು ಅದರ ನೀತಿಗೋಲುಗಳ ವಿಮರ್ಶೆ ಇದೆ. 1905ರಲ್ಲಿ ಬಾಬುರಾಯರು ವಾಗ್ದೇವಿ ಎಂಬ ಕಾದಂಬರಿಯನ್ನು ಹೊರತಂದರು.

ಕನ್ನಡದಲ್ಲಿ ಸಾಹಿತ್ಯ ವಿಮರ್ಶೆ ಬೆಳೆದದ್ದು ನವೋದಯ ಕಾಲದಲ್ಲಿ 1895ರಲ್ಲಿ ಒಂದು ವಿಮರ್ಶಾ ಕೃತಿ ಪ್ರಕಟವಾಯಿತು ಎನ್ನುತ್ತ ಪ್ರಭುಶಂಕರರು ಹೀಗೆ ಹೇಳುತ್ತಾರೆ. ಕನ್ನಡ ವಿಮರ್ಶೆ ಬೆಳೆಯಲು ಪ್ರಾರಂಭಿಸಿದ್ದು ಸಹಜವಾಗಿಯೇ ಸಂಸ್ಕೃತ ಕೃತಿಗಳನ್ನು ಪ್ರಾಚೀನ ಕನ್ನಡ ಗ್ರಂಥಗಳನ್ನು ಪರಿಚಯ ಮಾಡಿ ಕೊಡಲು ಪ್ರಾರಂಭ ಮಾಡಿದ್ದರಿಂದ ಈ ದಿಕ್ಕಿನಲ್ಲಿ ಬಹುಶಃ ಮೊಟ್ಟ ಮೊದಲ ಕೃತಿ ಮಂ.ಆ.ರಾಮಾನುಜ ಅಯ್ಯಂಗಾರ್ ಅವರ ಕವಿ ಚಕ್ರವರ್ತಿ ರನ್ನನ ಜೀವನ ಚರಿತ್ರೆ ಗ್ರಂಥ ವಿಮರ್ಶೆ ಇತ್ಯಾದಿ ಗ್ರಂಥಗಳು ಹೊರಬಂದವು. ಈ ಗ್ರಂಥದಲ್ಲಿ ಲೇಖಕರು ರನ್ನನ ಜೀವನ ಚರಿತ್ರೆಯ ಜೊತೆಗೆ ಅವನ ಕೃತಿಗಳ ಪರಿಚಯಾತ್ಮಕ ವಿಮರ್ಶೆಯನ್ನು ಒದಗಿಸಿದ್ದಾರೆ. ಪ್ರಭುಶಂಕರರು ಹೇಳುವಂತೆ ಇದರಿಂದ ಕನ್ನಡ ವಿಮರ್ಶೆಯ ಉಗಮ ಹತ್ತೊಂಭತ್ತನೆ ಶತಮಾನದ ಕೊನೆಯಲ್ಲಿ ಎನ್ನಬಹುದು.

ಹೀಗೆ 1870-1920ನೇ ಕಾಲಮಾನವನ್ನು ಪ್ರಯೋಗಗಳ ಕಾಲ ಎನ್ನುತ್ತಾರೆ. ಎಸ್.ಜಿ. ನರಸಿಂಹಾಚಾರ್ಯರು ಹಟ್ಟಿಯಂಗಡಿ ನಾರಾಯಣರಾಯರು ಮೊದಲಾದವರ ಕವನಗಳಲ್ಲಿ ಹೊಸ ಹೊಸ ಭಾವನೆಗಳು ಸರಳವಾದ ಕನ್ನಡದಲ್ಲಿ ಅಭಿವ್ಯಕ್ತಿ ಪಡೆದಿದ್ದವು. ನವೋದಯದ ಪ್ರಥಮ ಘಟ್ಟದಲ್ಲಿ ಅನೇಕ ಕವನಗಳನ್ನು ಇಂಗ್ಲೀಷಿನಿಂದ ಕನ್ನಡಕ್ಕೆ ಅನುವಾದಿಸಿದ ಹಟ್ಟಿಯಂಗಡಿ ನಾರಾಯಣರಾಯರು 1918ರ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಕನ್ನಡ ಕವಿತೆಯ ಭವಿಷ್ಯವನ್ನು ಕುರಿತು ಒಂದು ಪ್ರಬಂಧವನ್ನು ಕಳುಹಿಸಿದರು.

ಕನ್ನಡ ಸಾಹಿತ್ಯಕ್ಕೆ ಶ್ರೀ ಅವರಲ್ಲಿ ಹೊಸ ಶಕ್ತಿ ದೊರೆತಂತಾಯಿತು.

ಹೊಸಗನ್ನಡ ಸಾಹಿತ್ಯದ ಇತಿಹಾಸ 1920ರಲ್ಲಿ ಬಂದ ಬಿ.ಎಂ. ಶ್ರೀಯವರ ಇಂಗ್ಲೀಷ್ ಗೀತೆಗಳ ಮೂಲಕ ಆರಂಭಗೊಳ್ಳುತ್ತದೆ. 1920ರಿಂದ 1945ರ ಅವಧಿಯನ್ನು ನವೋದಯ ಸಾಹಿತ್ಯವೆಂದು ಗುರ್ತಿಸುತ್ತಾರೆ. ನಿಸರ್ಗ-ಸೌಂದರ್ಯ, ಅಧ್ಯಾತ್ಮ ರಾಷ್ಟ್ರೀಯತೆಗಳು ಈ ಹಂತದ ಸಾಹಿತ್ಯದ ಪ್ರಮುಖ ವಸ್ತು ವಿಷಯಗಳಾಗಿವೆ.

ಇಂಗ್ಲೀಷಿನ ರೊಮ್ಯಾಂಟಿಸಿಜಂ ಸಾಹಿತ್ಯದಿಂದ ಪ್ರೇರಣೆ ಪಡೆದ ನವೋದಯ ಸಾಹಿತ್ಯ ಕನ್ನಡಕ್ಕೆ ಬಂದ ಎಂಟು ಜ್ಞಾನಪೀಠ ಪ್ರಶಸ್ತಿಗಳಲ್ಲಿ ಐದನ್ನು ತನ್ನದಾಗಿಸಿಕೊಂಡಿದೆ.

1911ರಲ್ಲಿಯೇ ಬಿ.ಎಂ. ಶ್ರೀ ಕಂಠಯ್ಯ ರವರು ಧಾರವಾಡದ ವಿದ್ಯಾವರ್ಧಕ ಸಂಘದಲ್ಲಿ ಕನ್ನಡ ಮಾತು ತಲೆ ಎತ್ತುವ ಬಗೆ ಎಂಬ ವಿಷಯವನ್ನು ಕುರಿತು ಭಾಷಣ ಮಾಡಿದ್ದರು.

ಇಂಗ್ಲೀಷ್ ಗೀತೆಗಳು ಕವನ ಸಂಕಲನದ ಮೊದಲನೆಯ ಕವನ ಶ್ರೀ ಯವರ ಸ್ವತಂತ್ರ ಕವನ ಕಾಣಿಕೆ ಲವಲವಿಕೆಯಿಂದ ನರ್ತಿಸುವ ಉಲ್ಲಾಸದ ಈ ಕವನದೊಡನೆ ಆಧುನಿಕ ಕನ್ನಡ ಕಾವ್ಯಕನ್ನಿಕೆ ಓದುಗರ ಬಳಿ ಬಂದಳು. ಕವಿ, ಓದುಗರ ಸಂಬಂಧದಲ್ಲಿ ಇಂಗ್ಲೀಷ್ ಗೀತೆಗಳು

ಒಂದು ಕ್ರಾಂತಿಯನ್ನೇ ಉಂಟು ಮಾಡಿತು ಎಂಬುದು ಮುಖ್ಯ ನವೋದಯಕ್ಕೆ ಭದ್ರಬುನಾದಿ ಹಾಕಿದ ಕೃತಿ ಇದಾಗಿದೆ.

ಇಂಗ್ಲೀಷ್ ಭಾಷೆಯಲ್ಲಿ ರೊಮ್ಯಾಂಟಿಕ್ ಸಾಹಿತ್ಯದ ಒಂದು ಲಕ್ಷಣ ಕನ್ನಡದ ನವೋದಯ ಸಾಹಿತ್ಯದಲ್ಲಿಯೂ ಕಂಡಿತು. ಇಂಗ್ಲೀಷ್ ಸಾಹಿತ್ಯಕ್ಕೆ ಇದ್ದ ಹಿನ್ನೆಲೆ ಇಲ್ಲದಿದ್ದರೂ ಸಹ ಇಂಗ್ಲೆಂಡಿನಲ್ಲಿ ರೊಮ್ಯಾಂಟಿಕ್ ಯುಗದ ಹಿಂದಿನ ನಿಯೋಕ್ಲಾಸಿಕ್ ಯುಗ ಬುದ್ಧಿಶಕ್ತಿಗೆ ಪ್ರಾಧ್ಯಾನ್ಯ ದೊರೆತ ಯುಗ. ಕುವೆಂಪು ಅವರ ರಾಮಾಯಣ ದರ್ಶನಂದಲ್ಲಿ ಸ್ವಪ್ನಗಳ ಮತ್ತು ಒಳಗಣ್ಣಿಗೆ ಕಾಣುವ ದೃಶ್ಯಗಳ ಮಹತ್ವ ಎದ್ದು ಕಾಣುವಂತಹುದು. ಬೇಂದ್ರೆಯವರ ಕವನಗಳಲ್ಲಿ ಇಂದ್ರಿಯಗಳ ಜಗತ್ತಿನಿಂದ ಅತೀಂದ್ರಿಯ ಜಗತ್ತಿಗೆ ಸಾಗುವುದನ್ನು ಕಾಣುತ್ತವೆ.

ನವೋದಯ ಸಾಹಿತ್ಯದಲ್ಲಿ ದಟ್ಟ ನಿರಾಸೆ, ಸಿನಿಸಿಸಂ, ಎಲ್ಲಿಯೂ ಕಾಣುವುದಿಲ್ಲ. ಭಾವುಕ ಸಾಹಿತ್ಯ ಎಂದೂ ಕರೆಯುತ್ತಾರೆ.

ನವೋದಯ ಸಾಹಿತ್ಯದ ಒಂದು ಬಹುಮುಖ್ಯ ಆಯಾಮವನ್ನು ಇಲ್ಲಿ ಗುರುತಿಸಬೇಕು. ಈ ಸಾಹಿತ್ಯ ರೂಪ ತಾಳಿದ್ದು ಎರಡು ಸಂಸ್ಕೃತಿಗಳು ಮುಖಾಮುಖಿಯಾದದ್ದರ ಪರಿಣಾಮವಾಗಿ ಹೊಸ ಸಂಸ್ಕೃತಿಯ ಹಲವು ಅಂಶಗಳು ಕ್ರಮೇಣ ದೇಶೀಯ ಸಂಸ್ಕೃತಿ ಮತ್ತು ಜೀವನ ವಿಧಾನಗಳಲ್ಲಿ ಸೇರಿಕೊಳ್ಳುವುದು, ವಿದೇಶಿ ಸಂಸ್ಕೃತಿಗೆ ವಿರೋಧ, ದೇಶಿಯ ಸಂಸ್ಥೆಗಳು ಮತ್ತು ಪದ್ದತಿಗಳು ಮಾಯವಾಗುವುದು ಅಥವಾ ಬದಲಾಗುವುದು ಈ ಎಲ್ಲಾ ಪ್ರಕ್ರಿಯೆಗಳನ್ನು ಈ ಸಾಹಿತ್ಯ ಯುಗದಲ್ಲಿ ಗುರ್ತಿಸಬಹುದು.

1945ರ ಸುಮಾರಿಗೆ ಹೊಸದೊಂದು ಗಾಳಿ ಬೀಸಲಾರಂಭಿಸಿತು. ಇದರಿಂದ ಚೇತನ ಪಡೆದವರು ತಮ್ಮನ್ನು ಪ್ರಗತಿಶೀಲರು ಎಂದು ಕರೆದುಕೊಂಡರು. ಇದು ಪ್ರಗತಿಶೀಲ ಚಳುವಳಿಗೆ ನಾಂದಿಯಾಯಿತು.

ಈ ಚಳುವಳಿಯ ನಾಯಕತ್ವ ವಹಿಸಿದವರು ಅ.ನ. ಕೃಷ್ಣರಾಯರು, ಕನ್ನಡ ಕಾದಂಬರಿ ಸಾರ್ವಭೌಮರೆಂದೆ ಖ್ಯಾತರಾದವರು.

ಸುಮಾರು 1940 ರಿಂದ 1950ರವರೆಗೆ ಅ.ನ.ಕೃ, ತ.ರಾ.ಸು ಅರ್ಚಕ ವೆಂಕಟೇಶ, ಕುಮಾರ ವೆಂಕಣ್ಣ, ಬಸವರಾಜ ಕಟ್ಟಿಮನಿ, ಎಸ್. ಅನಂತನಾರಾಯಣ್ಣ ನಿರಂಜನರಂತಹವರು ಪ್ರಗತಿಶೀಲ ಸಾಹಿತ್ಯವನ್ನು ಮುನ್ನಡೆಸಿದರು.

ಈ ಸಾಹಿತ್ಯ ಬಹುಮಟ್ಟಿಗೆ ಕಾದಂಬರಿ ಸಣ್ಣಕಥೆಗಳಿಗೆ ಸೀಮಿತವಾಯಿತು. ಈ ಸಾಹಿತ್ಯದ ಬಹುತೇಕರು ಸಣ್ಣಕಥೆಗಳಿಂದ ಸಾಹಿತ್ಯಕ್ಕೆ ಪ್ರವೇಶ ಮಾಡಿ ಕಾದಂಬರಿಕಾರರಾಗಿ ಬೆಳೆದರು.

ಕನ್ನಡದ ಗಮನಾರ್ಹ ಕಾದಂಬರಿ ಎಂ.ಎಸ್. ಪುಟ್ಟಣ್ಣರವರ ಮಾಡಿದ್ದುಣ್ಣೋ ಮಹರಾಯ ಹಳ್ಳಿಯ ಜೀವನವನ್ನು ಸ್ಫುಟವಾಗಿ ನಿರೂಪಿಸಿದ್ದರೂ ಅನಂತರದ ಸಾಹಿತ್ಯ ನಗರದ ಮಧ್ಯಮವರ್ಗದ ಜೀವನಕ್ಕೆ ಅಂಟಿ ಕೊಂಡಿತು.

ಪ್ರಗತಿಶೀಲ ಚಳುವಳಿಯಿಂದ ಆಧುನಿಕ ಕನ್ನಡ ಸಾಹಿತ್ಯಕ್ಕೆ ವೈಶಾಲ್ಯ ಬಂದಿತು. ಹಲವು ಸಣ್ಣಕಥೆಗಳು ಈ ಶತಮಾನದ ಐದನೆಯ ದಶಕದಲ್ಲಿ ಸ್ವಾತಂತ್ರ್ಯದ ಹೋರಾಟವನ್ನು ಚಿತ್ರಿಸಿದವು. ಮುಂಜಾವು , ಜ್ವಾಲಾಮುಖಿಯ ಮೇಲೆ , ಮೋಹದ ಬಲೆಯಲ್ಲಿ ಚಿರಸ್ಮರಣೆ ಇಂತಹ ಕಾದಂಬರಿಗಳು ಮತ್ತು ಪ್ರಗತಿಶೀಲರ ಹತ್ತಾರು ಕಥೆಗಳಲ್ಲಿ ಓದುಗರಿಗೆ ದಕ್ಕಿದ ಅನುಭವ ಹೊಚ್ಚ ಹೊಸದು. ಪ್ರಗತಿಶೀಲರಿಂದ ಸಾಹಿತ್ಯದ ಭಾಷೆಗೆ ಹೊಸ ಕಸುವು ಬಂದಿತು. ಪ್ರಗತಿಶೀಲ ಸಾಹಿತ್ಯದ ಸಾಧನೆಗೆ ಮಿತಿಯನ್ನು ಕಲ್ಪಿಸಿದ ಎರಡು ಅಂಶಗಳೆಂದರೆ ಕಲಾಸೃಷ್ಟಿಯ ಅಂತರದ ನಷ್ಟ ಮತ್ತು ಅನುಭವದ ಸರಳೀಕರಣ.

ಪ್ರಗತಿಶೀಲ ಚಳುವಳಿಯು ಆರೆಂಟು ವರ್ಷಗಳಿಗೆ ಪರಿಮಿತವಾದದ್ದು. 1950ರಾಚೆ ಪ್ರಗತಿಶೀಲ ಲೇಖಕರು ಬಹುಮಟ್ಟಿಗೆ ನವೋದಯ ರೀತಿಯನ್ನೇ, ಮೌಲ್ಯಗಳನ್ನೇ ಮನೋಧರ್ಮವನ್ನೇ ಅನುಸರಿಸಿದರು. ಅ.ನ.ಕೃ. ಭಾರತೀಯ ಸಂಸ್ಕೃತಿಯನ್ನೂ ಭಾರತದ ಮಹಿಳೆಯ ಉಜ್ವಲ ಪರಂಪರೆಯನ್ನೂ ಚಿತ್ರಿಸುವ ಹಲವಾರು ಕಾದಂಬರಿಗಳನ್ನು ಬರೆದರು. ಬಸವರಾಜ ಕಟ್ಟೀಮನಿಯವರೂ, ತ.ರಾ. ಸುಬ್ಬರಾಯರೂ, ಹಲವು ಐತಿಹಾಸಿಕ ಕಾದಂಬರಿಗಳಲ್ಲಿ ಭಾರತದ ಮಹಾಪುರುಷರನ್ನು ಭಾರತೀಯ ಸಂಸ್ಕೃತಿಯ ಮೌಲ್ಯಗಳನ್ನು ಚಿತ್ರಿಸಿದರು. ಇದು ಅಪರಾಧ ಎಂದಲ್ಲ ಆದರೆ ಪ್ರಗತಿಶೀಲ ಸಾಹಿತ್ಯದ ಕಾವು ಎಷ್ಟು ಬೇಗ ಆರಿತು ಎಂಬುದಕ್ಕೆ ಸಾಕ್ಷಿ. ಆದರೂ ಗರ್ಜನೆ ಯಂತಹ ಸಣ್ಣ ಕಥೆಗಳ ಸಂಕಲನವನ್ನು ಓದಿದಾಗ ಕಟ್ಟೀಮನಿ, ತ.ರಾ.ಸು, ನಿರಂಜನರವರ ಸಾಹಿತ್ಯ ಸೃಷ್ಟಿಯ ನೆನಪಾಗದೆ ಇರುವುದಿಲ್ಲ.

ಸುಮಾರು 1950ರ ಹೊತ್ತಿಗೆ ಕನ್ನಡ ಸಾಹಿತ್ಯದಲ್ಲಿ ಹೊಸಗಾಳಿ ಬೀಸಲಾರಂಭಿಸಿತು. 1947ರಲ್ಲಿ ಸ್ವಾತಂತ್ರ್ಯ ಬಂದದ್ದು, ಇದಕ್ಕೆ ಮುಖ್ಯ ಕಾರಣ ಎನ್ನಬಹುದು. ಸ್ವಾತಂತ್ರ್ಯ ಬರುವವರೆಗೆ ಜನತೆ ಎರಡು ಭಾಗವಾಗಿತ್ತು. ಸ್ವಾತಂತ್ರ್ಯಕ್ಕಾಗಿ ಹಂಬಲಿಸುವವರು, ಮತ್ತು ಆಳರಸರ ಕೃಪಾಕಟಾಕ್ಷಕ್ಕಾಗಿ ಹಂಬಲಿಸುವವರು. ನಾಯಕರೆಲ್ಲ ತ್ಯಾಗ ಮೂರ್ತಿಗಳಾಗಿ, ದೇವ ಮಾನವರಾಗಿ ಕಾಣುತ್ತಿದ್ದರು. ದೇಶದ ದಾರಿದ್ರ್ಯ, ಅಜ್ಞಾನ ಕಷ್ಟಗಳೆಲ್ಲ ಸ್ವಾತಂತ್ರ್ಯ ಬಂದ ನಂತರ ದೌಡಾಯಿಸುತ್ತವೆ ಎಂಬ ವಿಶ್ವಾಸ ಎಲ್ಲರಲ್ಲಿ ದೃಢವಾಗಿತ್ತು.

ಪ್ರಗತಿಶೀಲ ಸಾಹಿತ್ಯ ಹೆಸರೇ ಹೇಳುವಂತೆ ಪ್ರಗತಿಪರತೆಯನ್ನು ಮೈಗೂಡಿಸಿಕೊಂಡ ಸಾಹಿತ್ಯವಾಗಿದೆ. ಸಾಮಾಜಿಕ, ಧಾರ್ಮಿಕ, ಆರ್ಥಿಕ ಕ್ಷೇತ್ರಗಳಲ್ಲಿನ ಸಮಸ್ಯೆಗಳಿಗೆ ವಿಶೇಷ ಒತ್ತು ಕೊಟ್ಟು ಆ ಸಮಸ್ಯೆಗಳನ್ನೇ ಸಾಹಿತ್ಯಕ್ಕೆ ವಸ್ತುವಾಗಿಸಿಕೊಂಡ ಹಂತ ಇದಾಗಿದೆ.

ಅನಕೃ ರವರು ಸಾಮಾಜಿಕ ಸಮಸ್ಯೆಗಳಲ್ಲಿ ಒಂದಾದ ವೇಶ್ಯಾ ಸಮಸ್ಯೆ ಕುರಿತು ಹಲವು ಕಾದಂಬರಿಗಳನ್ನು ರಚಿಸಿದರು. ಶನಿಸಂತಾನ, ಸಂಜೆಗತ್ತಲೆ ಮುಂತಾದ ಕೃತಿಗಳು ಇದಕ್ಕೆ ಉದಾಹರಣೆಗಳಾಗಿವೆ.

ಬಸವರಾಜ ಕಟ್ಟೀಮನಿಯವರ ಜರತಾರಿ ಜಗದ್ಗುರು, ಶಿವದಾರ, ಜನಿವಾರದಂತಹ ಕೃತಿಗಳು ಧಾರ್ಮಿಕ ಕ್ಷೇತ್ರದ ಅನಾವರಣಕ್ಕೆ ಮೀಸಲಾದರೆ ಜ್ವಾಲಾಮುಖಿಯ ಮೇಲೆ ಕಾರ್ಮಿಕ ಲೋಕದ ಕಥನವಸ್ತುವನ್ನು ಒಳಗೊಂಡಿದೆ.

ಪ್ರಗತಿಶೀಲರಂತೆ 1950ರಿಂದ ಪ್ರಾರಂಭಗೊಂಡ ನವ್ಯ ಸಾಹಿತ್ಯ ಪ್ರತಿಭಟನೆಯ ಮನೋಭಾವವನ್ನೇ ತೋರಿತು. ನವೋದಯ ಸಾಹಿತ್ಯದ ಆದರ ಸತ್ವ ತೀರಿತು ಎಂದು ಪ್ರಗತಿಶೀಲರು ಘೋಷಿಸಿದಂತೆ ನವೋದಯ ಪ್ರಗತಿಶೀಲ ಎರಡೂ ಸಾಹಿತ್ಯಗಳೂ ತಮ್ಮ ಪಾತ್ರವನ್ನು ಮುಗಿಸಿವೆ, ಅವುಗಳ ಸತ್ವ ತೀರಿತು ಎಂದು ನವ್ಯರು ಘೋಷಿಸಿದರು. 1952ರಲ್ಲಿ ತಮ್ಮ ನಡೆದು ಬಂದ ದಾರಿ ಸಂಕಲನಕ್ಕೆ ಬರೆದ ಮುನ್ನುಡಿಯಲ್ಲಿ ಅಡಿಗರು ಹೀಗೆಂದರು. ಪ್ರತಿ ತಲೆಮಾರಿನಲ್ಲೂ ಕವಿ ತನ್ನದೇ ಆದ ಒಂದು ಹೊಸ ಭಾಷೆಯನ್ನು ರೂಪಿಸಿಕೊಳ್ಳದೆ, ಉತ್ತಮ ಅಭಿವ್ಯಕ್ತಿಯನ್ನು ಪಡೆಯಲಾರ, ಭಾಷೆ ಹೀಗೆ ಪುನಃ ಸೃಷ್ಟಿಯಾದಾಗಲೇ ಅದು ಭಾವ ವಿಚಾರಗಳನ್ನು ಯಥಾವತ್ತಾಗಿ ಪ್ರತಿಬಿಂಬಿಸಲು ಸಮರ್ಥವಾಗುತ್ತದೆ. ಗತಕಾಲದ ಭಾಷೆ ಭಾವವನ್ನು ಕೊಲ್ಲುತ್ತದೆ. ಮನಸ್ಸನ್ನು ಮಂಕಾಗಿಸುತ್ತದೆ. ಅರ್ಥಕ್ಕಿಂತ ಶಬ್ದಗಳ ಹಾರಾಟವೇ ಹೆಚ್ಚಿ ಅರ್ಥ ಮರೆಯಾಗುತ್ತದೆ. ಉತ್ಸವ ಮೂರ್ತಿ ತಾನೆ ಮೂಲ ವಿಗ್ರಹವೆಂದು ವಿಜೃಂಭಿಸುತ್ತದೆ. ಆದ ಕಾರಣವೇ ಹೊಸ ಜೀವನ ಭಾವನೆಗಳಿಗೆ ತಕ್ಕ ರೀತಿ ರೂಪುಗೊಳ್ಳಬೇಕಾದ ಕಾಲ ಈಗ ಸಾಹಿತಿಗಳನ್ನು ಎದುರಿಸಿ ನಿಂತಿವೆ .

ನವೋದಯ ಪ್ರಗತಿಶೀಲ ಸಾಹಿತಿಗಳು ಸಾಹಿತ್ಯವನ್ನು ಕಂಡ ರೀತಿ ಒಂದಾದರೆ ನವ್ಯದವರು ಕಂಡ ರೀತಿ ಇನ್ನೊಂದು. ಹಿಂದಿನ ಪಂಥಗಳ ಸಾಹಿತಿಗಳು ಸಾಮಾನ್ಯವಾಗಿ ಸಾಹಿತ್ಯವನ್ನು ಸಾಹಿತ್ಯದಾಚೆ ಸ್ವೀಕರಿಸಿದ ನಿರ್ಧಾರ ಮತ್ತು ಮೌಲ್ಯಗಳ ವಾಹಕವನ್ನಾಗಿ ಮಾಡಿದರು.

ಪ್ರಾಯಶಃ ನವ್ಯ ಸಾಹಿತ್ಯದ ಘೋಷಿತ ದೃಷ್ಟಿಯಿಂದಲೂ ಸಾಹಿತ್ಯದಾಚೆಯ ಜೀವನದ ದೃಷ್ಟಿಯಿಂದಲೂ ಈ ಸಾಹಿತ್ಯವನ್ನು ಕುರಿತು ಮಾಡಬಹುದಾದ ಮತ್ತೊಂದು ಆಕ್ಷೇಪಣೆ ಇದೆ. ನವೋದಯ ಸಾಹಿತ್ಯ ಸಮಗ್ರವಾಗಿ ಮಾನವ ಸ್ವಭಾವವನ್ನು ಚಿತ್ರಿಸಲಿಲ್ಲ ಎಂಬುದು ನವ್ಯದ ಆಕ್ಷೇಪಣೆ,

ಆದರೆ ನವ್ಯ ಸಾಹಿತ್ಯವನ್ನೆಲ್ಲ ಓದಿದರೂ, ಮಾನವ ಕೋಟಿಯಲ್ಲಿ ಯೇಸು, ವಿವೇಕಾನಂದ, ಸಾಕ್ರೆಟೀಸ್, ಬುದ್ಧ, ಥೋಂಡೋ ಕೇಶವ ಕರ್ವೆ, ಭಗತ್ ಸಿಂಗ್, ಆಶ್ಫಾಕ್ ಉಲ್ಲಾಖಾನ್, ಅಂಬೇಡ್ಕರ್, ಗಾಂಧೀಜಿ, ಸರ್ದಾರ್ ಪಟೇಲ್, ಮದರ್‌ಥೆರೆಸ ಇಂತಹ ವ್ಯಕ್ತಿಗಳಿರುವುದು ಸಾಧ್ಯ ಎಂಬ ಕಲ್ಪನೆ ಬರುವುದಿಲ್ಲ. ಫ್ರಾಯ್ಡ್‌ನ ಸಿದ್ಧಾಂತಗಳೇನೇ ಇರಲಿ, ಈ ಮಾನವ ಹಿರಿಮೆಯ ಶಿಖರಗಳು ಕಡೆಗಣಿಸಲಾಗದ ವಾಸ್ತವಿಕತೆಗಳು ಇಂತಹವರು ಇರುವುದು ಸಾಧ್ಯ ಎಂಬ ಕಲ್ಪನೆಯೂ ಬಾರದಂತೆ ಮನಸ್ಸನ್ನು ವಿಶ್ಲೇಷಿಸುವ, ಮನಸ್ಸಿನ ಪದರ ಪದರಗಳಲ್ಲಿ ಸುಡುವ ಕಾಮದ ಕೆಂಪನ್ನೇ ತೋರಿಸುವ, ಮಾನವ ದೌರ್ಬಲ್ಯದ ಮೇಲೆಯೇ ಒತ್ತನ್ನು ಹಾಕುವ ಸಾಹಿತ್ಯ ವಾಸ್ತವಿಕತೆಯನ್ನು ಕಡೆಗಣಿಸಿದೆ. ಮಾನವ ಸ್ವಭಾವವನ್ನು ಸಮಗ್ರವಾಗಿ ಚಿತ್ರಿಸಲಿಲ್ಲ ಎಂಬುದು ಸ್ಪಷ್ಟ.

ನವ್ಯ ಸಾಹಿತ್ಯ ಬೇರೊಂದು ಸಾಹಿತ್ಯದ ಅನುಕರಣೆಯಷ್ಟೆ. ಆಗಿದ್ದರೆ ಅದು ಇಷ್ಟು ಶ್ರೀಮಂತವಾದ ಫಲವನ್ನು ಸಾಧಿಸುವುದು ಸಾಧ್ಯವಾಗುತ್ತಿರಲಿಲ್ಲ.

1950ರಿಂದ 75ರವರೆಗೆ ಸಾಗಿ ಬಂದ ನವ್ಯ ಸಾಹಿತ್ಯ ಅಡಿಗರಿಂದ ಗೋಕಾಕರಿಂದ ಭದ್ರಬುನಾದಿಯನ್ನು ಪಡೆದುಕೊಂಡು ಬೆಳೆದ ಸಾಹಿತ್ಯ. ಇಂಗ್ಲೀಷಿನ ಮಾರ್ಡನಿಸಜಂ ದಿಂದ ಸ್ಫೂರ್ತಿ ಪಡೆದ ನವ್ಯ ಸಾಹಿತ್ಯ ವಿಮರ್ಶೆ ಮತ್ತು ಸಣ್ಣಕತೆಗಳನ್ನು ವಿಶಿಷ್ಟ ಕಾಣಿಕೆಗಳಾಗಿ ನೀಡಿದೆ. ಆತ್ಮರತಿ, ಕೇಂದ್ರಿತ ಲೇಖನಗಳು ನವ್ಯದಲ್ಲಿ ಕಂಡು ಬರುತ್ತವೆ. ಯು.ಆರ್. ಅನಂತಮೂರ್ತಿ, ಗಿರೀಶ್ ಕಾರ್ನಾಡ್, ಚಂದ್ರಶೇಖರ ಕಂಬಾರ ಜ್ಞಾನಪೀಠ ಪಡೆದ ನವ್ಯ ಪಂಥಧ ಸಾಹಿತಿಗಳಾಗಿದ್ದಾರೆ.

ಯಶವಂತ ಚಿತ್ತಾಲ (ಕತೆಯಾದಳು ಹುಡುಗಿ) ಬಿ.ಸಿ.ರಾಮಚಂದ್ರ ಶರ್ಮರ(ಏಳು ಸುತ್ತಿನ ಕೋಟೆ) ಚಂಪಾರಂಥ ಬಹುಮುಖ ಪ್ರತಿಭೆಯ ಕತೆಗಾರರು, ಕವಿಗಳು, ನಾಟಕಕಾರರು ನವ್ಯ ಸಾಹಿತ್ಯದ ವೈವಿಧ್ಯತೆಗೆ ಕಾರಣರಾಗಿದ್ದಾರೆ. ಎ.ಕೆ. ರಾಮಾನುಜನ್, ಚಂದ್ರಕಾಂತ, ಕುಸನೂರ, ಜಿ.ಎಸ್. ನಾಯಕ, ಗಿರಡ್ಡಿ ಗೋವಿಂದ ರಾಜರಂಥ ಸಾಹಿತಿಗಳು, ಜಿ.ಎಸ್. ಆಮೂರ, ಸಿ.ಎನ್. ರಾಮಚಂದ್ರನ್, ಕೀರ್ತಿನಾಥ ಕುರ್ತುಕೋಟಿ ಯಂತಹ ವಿಮರ್ಶಕರು ನವ್ಯ ಪಂಥಕ್ಕೆ ಸೇರಿದವರಾಗಿದ್ದಾರೆ.

ಸಣ್ಣಕತೆ, ವಿಮರ್ಶೆಗಳೊಂದಿಗೆ ನವ್ಯ ಸಾಹಿತ್ಯ ನೀಡಿದ ಗಮನಾರ್ಹ ಕೃತಿಗಳೆಂದರೆ ಅಸಂಗತ ನಾಟಕಗಳು, ಬದುಕಿನ ಅಸಹಜತೆಯನ್ನು ಅಸಹಜವಾಗಿ ಚಿತ್ರಿಸುತ್ತಲೇ ಪ್ರಶ್ನಿಸುವ ಪ್ರಯತ್ನ ಇಲ್ಲಿದೆ. ಚಂಪಾರವರ ಟಿಂಗರ ಬುಡ್ಡಣ್ಣ, ಕಂಬಾರರ ಚಾಳೇಶಗಳನ್ನು ಈ ಮಾತಿಗೆ ಉದಾಹರಿಸಬಹುದಾಗಿದೆ.

ದಲಿತ ಬಂಡಾಯ ಸಾಹಿತ್ಯಕ್ಕೆ ಪ್ರತ್ಯೇಕ ಅಧ್ಯಾಯ ಮಾಡಿಕೊಂಡಿರುವುದರಿಂದ ಆ ಕುರಿತು ಇಲ್ಲಿ ಪ್ರಸ್ತಾಪಿಸುತ್ತಿಲ್ಲ.

ಅಧ್ಯಾಯ-3

ಹೊಸ ಗನ್ನಡ ಸಾಹಿತ್ಯದಲ್ಲಿ ಸಣ್ಣಕಥೆಗಳ ಇತಿಹಾಸ

ವಿಶ್ವ ಸಾಹಿತ್ಯದಲ್ಲಿ ಸಣ್ಣ ಕತೆಗಳ ಜನಕ ಎಂದು ಹೆಸರಾದ ಎಡ್ಗರ್ ಅಲೆನ್ ಪೋ ಹೇಳುವಂತೆ ಸಣ್ಣಕಥೆ 10 ರಿಂದ 15 ನಿಮಿಷಗಳಲ್ಲಿ ಓದಿಮುಗಿಸಬಹುದಾದ ಕಥಾನಕವಾಗಿರಬೇಕು. ಅನಿರೀಕ್ಷಿತ ಅಂತ್ಯ, ಆಕರ್ಷಕ ಆರಂಭ. ಕುತೂಹಲಕಾರಿ ನಿರೂಪಣೆ ಹೊಂದಿ 5 ರಿಂದ 10 ಪಾತ್ರಗಳಿರಬೇಕು.

ಕಥೆ ಕಾದಂಬರಿಗಳಿಗೆ ಭಾರತೀಯ ಸಾಹಿತ್ಯದಲ್ಲಿ ಪರಂಪರೆಯೇ ಇದೆ. ಆದರೆ ಸಣ್ಣಕತೆ ಮತ್ತು ವಿಮರ್ಶೆಗಳು ಪಾಶ್ಚಾತ್ಯ ಸಾಹಿತ್ಯದ ಪ್ರೇರಣೆಯಿಂದ ಕನ್ನಡ ಸಾಹಿತ್ಯವನ್ನು ಪ್ರವೇಶಿಸಿದ ಸಾಹಿತ್ಯದ ರೂಪಗಳಾಗಿವೆ.

ಪಂಜೆ ಮಂಗೇಶರಾಯರು ಸಣ್ಣಕಥೆಗಳ ಆದ್ಯರಾದರೆ ಮಾಸ್ತಿ ಆಸ್ತಿಯಾಗಿದ್ದಾರೆ. ನನ್ನ ಚಿಕ್ಕ ತಾಯಿ,ನನ್ನ ಚಿಕ್ಕತಂದೆ ಎಂಬ ಪಂಜೆಯವರ ಸಣ್ಣಕಥೆಗಳು 1900 ರಲ್ಲಿ ಸುವಾಸಿನಿ ಎಂಬ ಸಾಹಿತ್ಯಕ ವಾರ ಪತ್ರಿಕೆಯಲ್ಲಿ ಪ್ರಕಟವಾಗುವುದರೊಂದಿಗೆ ಕನ್ನಡದಲ್ಲಿ ಸಣ್ಣಕತೆಗಳ ವಾಹಿನಿ ಪ್ರಾರಂಭಗೊಳ್ಳುತ್ತದೆ.

ಕಥೆ ಸಾಮಾನ್ಯವಾಗಿ ಕುತೂಹಲದ ಕೇಂದ್ರ ವಾಗಿ, ರಂಜನೆಯ ಪ್ರಮುಖ ಸಾಧನವಾಗಿ ಹೆಸರಾಗಿದೆ. ನಿರೂಪಣೆ ಪ್ರಧಾನವಾದ ಕಥಾನಕ ಕಥೆ ಕಾದಂಬರಿಯಾದರೆ ಸಂಭಾಷಣೆ ಪ್ರಧಾನವಾದ ಕಥಾನಕ ನಾಟಕವಾಗುತ್ತದೆ.

ಅಬಾಲ ವೃದ್ದರಾಧಿಯಾಗಿ ಎಲ್ಲರನ್ನು ಸೆಳೆಯುವ ಶಕ್ತಿ ಇರುವ ಕಥಾಪ್ರಕಾರ ವಿಶ್ವದಾದ್ಯಂತ ಹೆಚ್ಚು ಮನ್ನಣೆಗೆ ಪಾತ್ರವಾಗಿದೆ. ಜನಪದ ಕಥೆಗಳು ಪಂಚತಂತ್ರದ ಕಥೆಗಳು ಇಂದಿಗೂ ಜನಪ್ರಿಯವಾಗಿ ಉಳಿದು ಬೆಳೆದುಕೊಂಡು ಬಂದಿವೆ.

ಕಾದಂಬರಿಯ ತರುವಾಯ ಸಣ್ಣಕಥೆಯೇ ಅತ್ಯಂತ ಜನಪ್ರಿಯವಾದ ಪ್ರಕಾರ ಕನ್ನಡದಲ್ಲಿ ಸಣ್ಣಕಥೆ ಒಂದು ವಿಶಿಷ್ಟ ರೂಪವಾಗಿ ಜನ್ಮ ತಾಳಿದುದು. ಸುಮಾರು ನೂರು ವರ್ಷಗಳ ಹಿಂದೆ ಹೊಸಗನ್ನಡದಲ್ಲಿ ಈವರೆಗೆ ಬಂದಿರುವ ಕಥೆಗಾರರ ಸಣ್ಣಕಥೆಗಳ ಸಂಖ್ಯೆಯನ್ನು ಪಟ್ಟಿ ಮಾಡುವುದು ಪ್ರಯಾಸದ ಕೆಲಸ, ವಾರಪತ್ರಿಕೆ, ದಿನಪತ್ರಿಕೆ, ಮಾಸಪತ್ರಿಕೆಗಳಲ್ಲಿ ಹೊಸ ಹೊಸ ಕಥೆಗಳು ಪ್ರಕಟವಾಗುತ್ತಲೇ ಇವೆ.

ಕನ್ನಡದಲ್ಲಿ ಸಣ್ಣಕಥೆಗೆ ವಿಶಿಷ್ಠ ರೂಪ ಕೊಟ್ಟವರು, ಚಾರಿತ್ರಿಕವಾಗಿ ಮೊಟ್ಟಮೊದಲು ಕಥೆಗಳನ್ನು ಬರೆದವರು ಪಂಜೆ ಮಂಗೇಶರಾಯರು. ನಂತರ ಕೆರೂರ ವಾಸುದೇವಾಚಾರ್ಯರು ಎಂ.ಎನ್. ಕಾಮತರು ಇವರೆಲ್ಲ ಆರಂಭದಲ್ಲಿ ಸಣ್ಣ ಕಥೆಗಳನ್ನು ಬರೆದವರು. ಸುವಾಸಿನಿ ಪತ್ರಿಕೆಯಲ್ಲಿ ಪ್ರಕಟವಾದ ಪಂಜೆಮಂಗೇಶರಾಯರ ನನ್ನ ಚಿಕ್ಕತಾಯಿ ಕನ್ನಡದ ಮೊದಲ ಸಣ್ಣ ಕಥೆ ಎಂದು ಹೇಳಲಾಗುತ್ತದೆ. ಅನಂತರದಲ್ಲಿ ಅವರು ನನ್ನ ಚಿಕ್ಕತಂದೆ, ಭಾರತ ಶ್ರವಣ, ಕಮಲಪುರದ ಹೋಟ್ಲಿನಲ್ಲಿ ಮೊದಲಾದ ಕಥೆಗಳನ್ನು ಪ್ರಕಟಿಸಿದರು. ಸಣ್ಣಕಥೆಗಳನ್ನು ಸಾಹಿತ್ಯಿಕ ಮಾಧ್ಯಮವನ್ನಾಗಿ ಬಳಸಿದವರಲ್ಲಿ ಶ್ರೀನಿವಾಸರು (ಮಾಸ್ತಿ) ಮೊದಲಿಗರು. ಇವರು ಮಾಸ್ತಿ ಕನ್ನಡದ ಆಸ್ತಿ ಎಂದೇ ಪ್ರಖ್ಯಾತರಾದರು. ಇವರ ವಸ್ತುವಿನ ಆಯ್ಕೆ, ತಿಳಿಹಾಸ್ಯ, ಸರಳ ಶೈಲಿ ಕನ್ನಡ ಕಥಾಲೋಕಕ್ಕೆ ಮಾರ್ಗದರ್ಶಕವಾಗಿವೆ. ಇವರ ಕಥೆಗಳು ಅನೇಕ ಸಂಪುಟಗಳಲ್ಲಿವೆ. ರಂಗಪ್ಪನ ದೀಪಾವಳಿಯಿಂದ ಹಿಡಿದು ಇವರ ಎಲ್ಲಾ ಕಥೆಗಳಲ್ಲಿ ಕಾಣುವುದು ಸಾಮಾನ್ಯ ಘಟನೆಗಳನ್ನು ಉತ್ಪ್ರೇಕ್ಷೆಯಿಲ್ಲದೆ ಹೇಳುವ ಕಲೆ ಇವರ ಇಂದಿರೆಯೋ ಅಲ್ಲವೋ? ಬೀದಿಯಲ್ಲಿ ಹೋಗುವ ನಾರಿ, ನಮ್ಮ ಮೇಷ್ಟ್ರು, ರಂಗಸ್ವಾಮಿಯ ಅವಿವೇಕ. ಇವುಗಳಲ್ಲಿ ಸಣ್ಣ ಕಥೆಯ ಎಲ್ಲ ಮುಖಗಳನ್ನು ಕಾಣಬಹುದು. ಇವರ ಸಾಮಾಜಿಕ ಕಥೆಗಳಲ್ಲಿ ಜೀವನ ಶ್ರದ್ದೆ ಕಂಡರೆ ಐತಿಹಾಸಿಕ, ಪೌರಾಣಿಕ ಕಥೆಗಳಲ್ಲಿ ಗುಪ್ತಗಾಮಿನಿಯಾಗಿ ಹರಿಯುವ ಸಂಸ್ಕೃತಿ ಪ್ರವಾಹವನ್ನು ಕಾಣಬಹುದು. ಬಾದಷಹನ ದಂಡನೆ, ಪಂಡಿತನ ಮರಣಶಾಸನ ಇವುಗಳಲ್ಲಿ ರಾಜಕೀಯ ಜೀವನ ಕಂಡರೆ ನಿಜಗಲ್ಲಿನ ರಾಣಿ, ಗೋಡೆಯ ಕೃಷ್ಣಮೂರ್ತಿ ಕಥೆಗಳಲ್ಲಿ ನಾಡಿನ ಹೆಣ್ಣು ಮಕ್ಕಳ ಧೀರೋದಾತ್ತ ಚಿತ್ರಗಳನ್ನು ಕಾಣಬಹುದು. ಆಚಾರ್ಯರ ಪತ್ನಿ, ಹೇಮಕೂಟದಿಂದ ಬಂದ ಮೇಲೆ, ವಸುಮತಿ, ಗೌತಮಿ ಹೇಳಿದ ಕಥೆ ಇವುಗಳಲ್ಲಿ ವಸ್ತುವಿನ ಆಯ್ಕೆಯ ಅನನ್ಯತೆಯನ್ನು ಕಾಣಬಹುದು.

ಆಧುನಿಕ ಕನ್ನಡ ಸಣ್ಣ ಕಥೆಯ ಚರಿತ್ರೆಯು ಆಧುನಿಕ ಕನ್ನಡ ಕಾದಂಬರಿಯ ಚರಿತ್ರೆಯನ್ನೇ ಬಹುಮಟ್ಟಿಗೆ ಹೋಲುತ್ತದೆ. ಸಣ್ಣ ಕಥೆ ವಿಶಿಷ್ಟ ಸಾಹಿತ್ಯ ಪ್ರಕಾರವಾಗಿ ಕನ್ನಡದಲ್ಲಿ ಮೂಡಿ ಬಂದದ್ದು ಪಾಶ್ಚಾತ್ಯ ಸಾಹಿತ್ಯದ ಪ್ರಭಾವದಿಂದ ಎನ್ನಬಹುದು.

ಭಾವಗೀತೆಯಂತೆ ಸಣ್ಣ ಕಥೆಯೂ ಸಮೃದ್ಧಿಯಾದ ಬೆಳೆಯನ್ನು ಕಂಡಿತು. ಸಾಮಾನ್ಯವಾಗಿ ಕಥೆಗಾರರಲ್ಲಿ ಮನುಷ್ಯನ ಹಿರಿಮೆಯನ್ನು ಬಾಳಿನ ಮೌಲ್ಯಗಳನ್ನು ಬೆಳಗಿಸಲು ಈ ಮಾಧ್ಯಮವನ್ನು ಬಳಸಿದರು. ಶ್ರೀಪತಿಯ ಕಥೆಗಳು ಬರೆದ ಎ.ಆರ್. ಕೃಷ್ಣಶಾಸ್ತ್ರಿಗಳು ಸ್ವಲ್ಪ ಭಿನ್ನವಾದ ದಾರಿ ತುಳಿದರು. ಜೀವನದ ಕಹಿಯನ್ನು ಕಥೆಗಳಲ್ಲಿ ಕಾಣಿಸಿದರು. ಅವರ ಗುರುಗಳ ಮಹಿಮೆ ತಂತ್ರದ ದೃಷ್ಟಿಯಿಂದಲೂ ಜೀವನವನ್ನು ಕಾಣುವ ದೃಷ್ಟಿಯಿಂದಲೂ ವಿಶಿಷ್ಟವಾದ ಕಥೆ, ಆದರ್ಶಮಯ, ದೃಷ್ಟಿಯಿಂದ ಕಥೆಗಳನ್ನು ಬರೆದ ಕುವೆಂಪು ಧನ್ವಂತರಿಯ ಚಿಕಿತ್ಸೆ ಯಂತಹ ಬಡವನ ಘೋರ ಕಷ್ಟವನ್ನು ಚಿತ್ರಿಸುವ ಕಥೆಯನ್ನು ಬರೆದರು. ಬೇಂದ್ರೆ ಆನಂದ ಕಂದ ದೇವುಡು ನರಸಿಂಹಶಾಸ್ತ್ರಿ,

ಸಿ.ಕೆ. ವೆಂಕಟರಾಮಯ್ಯ, ಟೇಂಗ್ಸೆ ಗೋವಿಂದರಾವ್, ರಂ.ಶ್ರೀ ಮುಗುಳಿ ಇವರೆಲ್ಲ ಒಳ್ಳೆಯ ಕಥೆಗಳನ್ನು ಬರೆದ ಕಥೆಗಾರರಾಗಿದ್ದಾರೆ.

ನವ್ಯ ಕಾದಂಬರಿಯಂತೆ ನವ್ಯ ಸಣ್ಣ ಕಥೆಗೂ ಮನುಷ್ಯನ ಮನಸ್ಸಿನ ಬಗ್ಗೆಯೇ ಆಸಕ್ತಿ, ಮನಸ್ಸಿನ ಮತ್ತು ಅನುಭವದ ವಿಶ್ಲೇಷಣೆಗೆ ಪ್ರಯತ್ನಿಸಿದೆ.

ತೇಜಸ್ವಿಯವರ ಅಬಚೂರಿನ ಪೋಸ್ಟಾಫೀಸಿನಲ್ಲಿ ಹಳ್ಳಿಯಲ್ಲಿ ಹೊಸದಾಗಿ ಪೋಸ್ಟಾಫೀಸ್ ತೆರೆಯುತ್ತಾರೆ. ಇದರಿಂದ ಹಳ್ಳಿಯ ಜೀವನದಲ್ಲಿ ಬದಲಾವಣೆಗಳಾಗುತ್ತವೆ. ಅಸಮಾಧಾನ ಮನಸ್ತಾಪಗಳು ಬೆಳೆಯುತ್ತವೆ. ನಾಗರೀಕತೆ ಕಾಲಿಟ್ಟಾಗ ಅಂತಹ ನಾಗರಿಕತೆಯಿಂದ ದೂರವಾಗಿದ್ದ ಸಮಾಜದಲ್ಲಿ ಆಗುವ ಗೊಂದಲವನ್ನು ಸೂಕ್ಷ್ಮವಾಗಿ ನಿರೂಪಿಸಿದ್ದಾರೆ. ಕಥಾ ಸಾಹಿತ್ಯ ಮುಂದೆ ಯಾವ ದಾರಿಯನ್ನು ಹಿಡಿಯಬಹುದು ಎಂಬುದು ಪ್ರಾಯಶಃ ತೇಜಸ್ವಿಯವರಂತಹ ಕಥೆಗಾರರಲ್ಲಿ ಸೂಚಿತವಾಗಿದೆ. ಬೆಸಗರಹಳ್ಳಿ ರಾಮಣ್ಣ, ದೇವನೂರು ಮಹಾದೇವ ಇವರು ಇಂತಹ ತಿರುವನ್ನು ಕೊಡಬಲ್ಲವರು ಎಂದು ವಿಮರ್ಶಕರು ಅಭಿಪ್ರಾಯ ಪಡುತ್ತಾರೆ.

ಹಾಸ್ಯದ ವಸ್ತುವುಳ್ಳ ಕಥೆಗಳನ್ನೂ ಅನೇಕರು ಬರೆದಿದ್ದಾರೆ. ತಿಳಿಹಾಸ್ಯ ಬೇರೆ, ವಿಡಂಬನೆ ಬೇರೆ, ಟೀಕೆ, ಆಕ್ಷೇಪಣೆಗಳಿಲ್ಲದ ಮಮತೆಯ ತೆಳುಲೇಪವೂ ಇರುವ ಕಥೆಗಳನ್ನು ಶ್ರೀನಿವಾಸರು ಬರೆದರು. ರಂಗಪ್ಪನ ದೀಪಾವಳಿ , ರಂಗಪ್ಪನ ಕೋರ್ಟ್‌ಷಿಪ್ ತಿಳಿಹಾಸ್ಯದ ಕಥೆಗಳಾಗಿ ಹೆಸರಾಗಿವೆ.

ವ್ಯಂಗ , ವಿಡಂಬನೆ ಮಾಸ್ತಿಯವರ ಸಾಹಿತ್ಯದಲ್ಲೆಲ್ಲೂ ಕಾಣುವುದಿಲ್ಲ. ಪ್ರಾಯಶಃ ಸಣ್ಣ ಕಥೆಯ ಕ್ಷೇತ್ರದಲ್ಲಿ ವಿಡಂಬನೆಗೆ ಹೆಸರಾದವರು ಬೀಚಿ. ವಿಡಂಬನೆಯ ಅಲುಗನ್ನು ತೀರ ಮೊನಚು ಮಾಡದೆ, ಬೀಚಿ ಸಾರ್ಥಕವಾದ ಸಣ್ಣಕತೆಗಳನ್ನು ಹನಿಗತೆಗಳನ್ನು ಕೊಟ್ಟರು.

ಸಣ್ಣ ಕಥೆಯಲ್ಲಿ ಮಾತಿನ ಬಳಕೆ ಅತ್ಯಂತ ಮಿತವಾಗಿರಬೇಕು. ಇದು ಮಿಂಚು ಒಮ್ಮೆ ಹೊಳೆದು ನಮ್ಮ ಸುತ್ತಮುತ್ತಲಿನ ಪ್ರವೇಶವನ್ನು ಕ್ಷಣ ಕಾಣಿಸಿ ಮರೆಯಾದಂತೆ, ಹೊಳೆಯುವ ನೀರಿನ ಹನಿ ಸೂರ್ಯನ ಕಲ್ಪನೆ ಮಾಡಿ ಕೊಡುವಂತೆ ಕಥೆ ಜೀವನವನ್ನು ಕಾಣುವ ಒಂದು ರೀತಿಯನ್ನೇ ಪ್ರತಿಬಿಂಬಸಬಲ್ಲದು ಎಂಬುದನ್ನು ಮಾಸ್ತಿ, ಕೃಷ್ಣಶಾಸ್ತ್ರಿಗಳು ಮೊದಲಾದವರು ತೋರಿಸಿದ್ದಾರೆ.

ಇತ್ತೀಚಿನ ಮಹಿಳಾ ಕಥೆಗಾರರಲ್ಲಿ ಎದ್ದುಕಾಣುವ ಹೆಸರು ವೈದೇಹಿ, ಬದುಕಿನ ಉತ್ಸಾಹ, ಲವಲವಿಕೆ ಪುಟಿಯುವ ಕಥೆಗಳನ್ನು ಅವರು ಹೇಳುತ್ತಾರೆ. ಧ್ವನಿ ಗಟ್ಟಿ ಮಾಡದೆ ಬದುಕಿನ ಸಂತೋಷವನ್ನು ಉತ್ಸಾಹವನ್ನು ನಮ್ಮ ಅನುಭವಕ್ಕೆ ತರಬಲ್ಲರು.

ವೀಣಾ ಶಾಂತೇಶ್ವರ, ವೈದೇಹಿ, ಗಂಗಾ ಪಾದೇಕಲ್, ಕೆ.ಎಂ. ವಿಜಯಲಕ್ಷ್ಮೀ ಗೀತಾನಾಗಭೂಷಣ ಮೊದಲಾದವರು ಸ್ತ್ರೀ ಸಂವೇದನೆಯನ್ನು ವಿಶಿಷ್ಟವಾಗಿ ಕಥಾ ಸಾಹಿತ್ಯಕ್ಕೆ ತಂದು ಕೊಟ್ಟಿದ್ದಾರೆ. ಅತ್ಯಂತ ಗಮನಾರ್ಹ ಬೆಳವಣಿಗೆಯನ್ನು ಕಂಡ ಸಾಹಿತ್ಯ ಪ್ರಕಾರ ಎಂದರೆ ಅದು ಸಣ್ಣಕಥೆ.

ಹೀಗೆ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಸುದೀರ್ಘ ಮತ್ತು ಶ್ರೀಮಂತ ಪರಂಪರೆಯನ್ನು ಹೊಂದಿದ ಸಣ್ಣ ಕಥೆಗಳ ದೊಡ್ಡ ಇತಿಹಾಸ ಗಮನಾರ್ಹವಾಗಿದೆ.

ಅಧ್ಯಾಯ-4

ದಲಿತ ಬಂಡಾಯ ಸಾಹಿತ್ಯ

ದಲ್ ಎಂದರೆ ತುಳಿತ ಎಂದರ್ಥ. ದಲಿತ ಎಂದರೆ ತುಳಿತಕ್ಕೆ ಒಳಪಟ್ಟವರು ಎಂದು ಅತಿಹೆಚ್ಚು ತುಳಿತಕ್ಕೆ ಒಳಗಾದ ಜನಾಂಗವನ್ನು ದಲಿತ ಎಂದು ಗುರುತಿಸಲಾಯಿತು. ಹರಿಜನ, ಪಂಚಮ, ಹೊಲೆಯ , ಮಾದಿಗ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮುಂತಾದ ಹೆಸರುಗಳಿಂದ ಈ ದಲಿತ ಜನಾಂಗವನ್ನು ಗುರುತಿಸಲಾಗುತ್ತದೆ.

ತಮ್ಮ ಮೇಲಾದ ದೌರ್ಜನ್ಯವನ್ನು ಪ್ರತಿಭಟಿಸುವುದೇ ಬಂಡಾಯ. ಹೀಗೆ ದಲಿತ ಬಂಡಾಯ ಎಂದರೆ ತುಳಿತ ಮತ್ತು ತುಳಿತಕ್ಕೆ ಪ್ರತಿಭಟನೆ ಎಂಬ ಅರ್ಥವನ್ನು ಕೊಡುತ್ತದೆ.

ಸಿದ್ಧಲಿಂಗಯ್ಯನವರ ಹೊಲೆಮಾದಿಗರ ಹಾಡು ದಲಿತ ಸಾಹಿತ್ಯದ ಮೊದಲ ಕೃತಿಯಾಗಿದೆ. ಶೋಷಣೆ ಕೇವಲ ದಲಿತರಿಗೆ ಮಾತ್ರವಲ್ಲ ಬಡವರು ಮಹಿಳೆಯರು ಕೂಡಾ ಶೋಷಣೆಗೆ ಒಳಗಾಗುತ್ತಿದ್ದಾರೆ. ಅದರ ವಿರುದ್ಧ ಕೂಡಾ ಸಾಹಿತ್ಯ ಮಾತನಾಡಬೇಕು. ಪ್ರತಿಭಟಿಸಬೇಕು ಎಂಬ ಒತ್ತಾಸೆಗಳ ಫಲವಾಗಿ 1979ರಲ್ಲಿ ಬರಗೂರು ರಾಮಚಂದ್ರಪ್ಪ ನವರ ಅಧ್ಯಕ್ಷತೆಯಲ್ಲಿ ಬಂಡಾಯ ಸಾಹಿತ್ಯ ಸಂಘಟನೆ ಅಸ್ತಿತ್ವಕ್ಕೆ ಬಂತು.

ಅಲ್ಲಿಯವರೆಗೆ ದಲಿತ ಸಾಹಿತ್ಯ ಎಂದು ಗುರುತಿಸಲ್ಪಡುತ್ತಿದ್ದ ಈ ಹಂತ 1979ರಿಂದ ದಲಿತ ಬಂಡಾಯ ಸಾಹಿತ್ಯ ಎಂದು ಮರು ನಾಮಕರಣ ಪಡೆಯಿತು.

1975ರಿಂದ ಆರಂಭವಾಗುವ ದಲಿತ ಬಂಡಾಯ ಸಾಹಿತ್ಯಕ್ಕೆ ದಲಿತ ಪ್ಯಾಂಥರ್ಸ್ ಸಾಹಿತ್ಯ, ತೆಲುಗಿನ ದಿಗಂಬರ ಸಾಹಿತ್ಯ, ಆಫ್ರಿಕಾದ ಕಪ್ಪು ಸಾಹಿತ್ಯದ ಪ್ರಭಾವ ಆಗಿರುವುದರ ಜೊತೆಗೆ ಅಂಬೇಡ್ಕರ್‌ವಾದ, ಲೋಹಿಯಾವಾದಗಳು ಪ್ರೇರಣೆಗಳನ್ನೊದಗಿಸಿವೆ.

ದಲಿತ ಸಾಹಿತ್ಯ ಮತ್ತು ಚಳುವಳಿಗೆ ಉಸಿರೇ ಇಲ್ಲದ ಕಾಲದಲ್ಲಿ ಬಿ. ಶ್ಯಾಮಸುಂದರ್ ಗುಲ್ಬರ್ಗದಲ್ಲಿ 1968ರಲ್ಲಿ ಭೀಮಸೇನೆಯನ್ನು ಕಟ್ಟುವ ಮೂಲಕ ನಾಡಿನ ದಲಿತ ಚಳುವಳಿಗೆ ನಾಂದಿಹಾಡಿದರು. ದೇವರುಗಳ ಪಟಗಳನ್ನು ಸುಡುವುದರ ಮೂಲಕ ನಾಡಿನಾದ್ಯಂತ ಹೊಸ ಸಂಚಲನವನ್ನುಂಟು ಮಾಡಿದರು. ರಾಯಚೂರಿನ ಸೋಮಯ್ಯ, ವಲ್ಲಭ, ಗುಲ್ಬಾರ್ಗದ ವಿಠ್ಠಲ , ಚಂಬಾಲರು ಮತ್ತಿತರರು ತಮ್ಮದೇ ಆದ ರೀತಿಯಲ್ಲಿ ದಲಿತರಲ್ಲಿ ಕ್ರಾಂತಿಕಾರಕ ವಿಚಾರಗಳನ್ನು ತುಂಬಿದರು. ಡಾ. ಸಿದ್ದಲಿಂಗಯ್ಯ, ದೇವನೂರು ಮಹದೇವ, ಮಾಲಗತ್ತಿಯಂಥವರು ದಲಿತ ಸಾಹಿತ್ಯ ಬೆಳೆಸಿದರು.

ಎರಡನೇ ತಲೆಮಾರಿನ ಲೇಖಕರಲ್ಲಿ ಎಸ್.ಪಿ.ಸುಳ್ಳದ ಪ್ರಮುಖರು ಇದೇ ಸಾಲಿಗೆ ಸೇರುವ ಡಾ. ಹನಮಂತರಾವ್ ದೊಡ್ಡಮನಿ, ಡಾ. ಟಿ.ಎಂ. ಭಾಸ್ಕರ್, ಡಾ. ಎಚ್.ಟಿ. ಪೋತೆ ಮುಂತಾದವರು ಅಂಬೇಡ್ಕರ್ ಚಿಂತನೆಗೆ ಸಂಬಂಧಿಸಿದ ಮತ್ತು ದಲಿತ ಜನಾಂಗದ ಒಳನೋಟಗಳನ್ನು ತಮ್ಮ ಹಲವಾರು ಕೃತಿಗಳ ಮೂಲಕ ಸಾಬೀತು ಪಡಿಸಿದ್ದಾರೆ.

ಕ್ರಿ.ಶ. 1920ರಲ್ಲಿ ಬಿ.ಎಂ. ಶ್ರೀಯವರಿಂದ ಪ್ರಾರಂಭಗೊಂಡ ಹೊಸಗನ್ನಡ ಸಾಹಿತ್ಯ ನವೋದಯ ಪ್ರಗತಿಶೀಲ, ನವ್ಯ ಬಂಡಾಯ ಎಂದು ನಾಲ್ಕು ಘಟ್ಟಗಳ ಮೂಲಕವಾಗಿ ಬಂದಿದೆ. ಈ ನವ್ಯೋತ್ತರದ ಹಂತವನ್ನು ಬಂಡಾಯ ಸಾಹಿತ್ಯ ಎಂದು ಗುರ್ತಿಸಲಾಗಿದೆ.

ದಲಿತ ಬರಹಗಾರರು ಸಂವೇದನೆಯ ಮೂಲಕ ಪ್ರತಿಭಟನೆಯ ಧ್ವನಿಯನ್ನು ಪ್ರಗತಿಪರ ಲಕ್ಷಣಗಳನ್ನು ಕಾಣಿಸಿದಾಗ ಮಾತ್ರ ಅವನ್ನು ಬಂಡಾಯದ ಪರಿಧಿಯಲ್ಲಿ ತರಲಾಗುತ್ತದೆ. ಪ್ರತಿಭಟನೆ ಶೋಷಿತ ಪರ ನಿಲುವು ಇಲ್ಲದ ಸಾಹಿತ್ಯವನ್ನು ರಚಿಸಿದವರು. ದಲಿತ ಸಾಹಿತಿಗಳಾದಾಗ್ಯೂ ಅದನ್ನು ಪ್ರಗತಿಪರ ಸಾಹಿತ್ಯದಾಚೆಯೇ ಗುರುತಿಸಲಾಗುತ್ತದೆ.

ದಲಿತರಲ್ಲದವರು ತಮ್ಮ ಸಾಹಿತ್ಯದಲ್ಲಿ ಶೋಷಿತ ಪರ ನಿಲುವನ್ನು ತೋರಿಸಿದಾಗ, ದಲಿತೇತರೂ ಶೋಷಣೆಗೆ ಒಳಗಾಗುವ ಕುರಿತು ಆಲೋಚನೆ ಮಾಡಿದಾಗ ಒಟ್ಟಾರೆ ಶೋಷಣೆಯ ವಿರುದ್ಧ ಧ್ವನಿ ಎತ್ತಿದಾಗ ಅಂಥ ಸಾಹಿತ್ಯ ಬಂಡಾಯ ಸಾಹಿತ್ಯದ ವ್ಯಾಪ್ತಿಗೆ ಒಳಪಡುತ್ತದೆ.

ಕ್ರಿ.ಶ. 1975ರಿಂದ ಸಾಹಿತ್ಯ ಪ್ರತಿಭಟನೆಯ ಧ್ವನಿಯನ್ನು ಮುಖ್ಯವಾಗಿ ಹೊಂದುತ್ತ ಬಂದಿದೆ. ಅಕ್ಷರ ಲೋಕದಿಂದ ವಂಚಿತರಾದ ಜನ, ಅಕ್ಷರಸ್ಥರಾಗಿ ಆ ಮೂಲಕ ವೈಚಾರಿಕ ಜಾಗೃತಿ ಹೊಂದಿ ತಮ್ಮ ಬದುಕಿನ ನೋವು, ನೋವಿಗೆ ಕಾರಣ, ನೋವಿನ ಪರಿಹಾರದ ಅಂಶಗಳತ್ತ ಚಿಂತನೆ ನಡೆಸುತ್ತ ಸಾಹಿತ್ಯಕವಾಗಿ ಅಭಿವ್ಯಕ್ತಿ ಸುತ್ತ, ಪ್ರಶ್ನಿಸುತ್ತ ಹೊರಟ ಹಂತವೇ ಬಂಡಾಯ ಸಾಹಿತ್ಯ.

ವರ್ಣ, ವರ್ಗ, ಲಿಂಗಭೇದಗಳು, ಧಾರ್ಮಿಕ ಸಂಪ್ರದಾಯಗಳು, ಅಂಧ ನಂಬಿಕೆಗಳು, ಮೂಢಾಚರಣೆಗಳು, ಬಡವರ, ದಲಿತರ, ಸ್ತ್ರೀಯರ, ಮುಗ್ಧರ , ದುರ್ಬಲರ ಬದುಕನ್ನು ನುಂಗಿ ನೀರು ಕುಡಿಯುತ್ತಿರುವುದನ್ನು ಅರಿತು ಎಚ್ಚೆತ್ತು ಇಂಥಾ ಅಮಾನವೀಯ ಅಂಶಗಳನ್ನು ತೊಡೆಯುವ ನಿಟ್ಟಿನತ್ತ ಯತ್ನಿಸುವ ಒಂದು ಸಾಹಿತ್ಯಕ ಯತ್ನವಾಗಿ ಬಂಡಾಯ ಸಾಹಿತ್ಯ ಮೂಡಿ ಬಂತು. ತುರ್ತು ಪರಿಸ್ಥಿತಿ, ಕುದುರೆ ಮೋತಿ ಹಗರಣ, ತತ್ತೂರಿನಲ್ಲಿ ದಲಿತರಿಗೆ ಮಲ ತಿನ್ನಿಸಿದ ಘಟನೆ, ಬೂಸಾ ಪ್ರಕರಣ ಇವೆಲ್ಲ ಈ ಸಾಹಿತ್ಯದ ಹುಟ್ಟು ಬೆಳವಣಿಗೆಗಳಲ್ಲಿ ಪ್ರಮುಖ ಪಾತ್ರ ವಹಿಸಿದೆ.

ಈ ನಾಡಿನ ದೌರ್ಜನ್ಯಗಳನ್ನು ವಿರೋಧಿಸುವ ಉದ್ದೇಶ, ಶೋಷಣಾ ರಹಿತ ಸಮಾಜ ನಿರ್ಮಾಣದ ಕನಸು. ಈ ಸಾಹಿತ್ಯದ ಪ್ರೇರಣೆಗಳಾಗಿ ನಿಂತರೆ, ಶೋಷಿತ ಪರ ನಿಲುವು, ಸಮಾನತೆ

ಸ್ಥಾಪನೆಯ ಕಾಳಜಿಗಳಿಲ್ಲಿ ಮುಖ್ಯ ಧೋರಣೆಗಳಾಗಿ ನಿಂತವು. ಹೀಗೆ ಭಿನ್ನ, ನಿಷ್ಠತೆ, ವಿಭಿನ್ನ ಆಲೋಚನೆ, ಜನಪರ ಕಾಳಜಿಗಳನ್ನು ಹೊತ್ತು ತಂದ ದಲಿತ ಬಂಡಾಯ ಸಾಹಿತ್ಯ ಕನ್ನಡ ಸಾಹಿತ್ಯಕ್ಕೆ ಅಪರಿಚಿತವಾಗಿದ್ದ ಅನೇಕ ಮುಖಗಳನ್ನು ತೆರೆದು ತೋರಿಸುತ್ತ ತನ್ನ ವ್ಯಾಪ್ತಿಯನ್ನು ವಿಸ್ತರಿಸಲು ಯತ್ನಿಸಿದೆ. ಬದುಕಿನ ಹಲವಾರು ಮುಖಗಳು, ಬದುಕಿನ ಕಪ್ಪು ಕಲೆಗಳು ಇಲ್ಲಿ ಚಿತ್ರಣಗೊಂಡಿವೆ.

ಬಂಡಾಯ ಸಾಹಿತ್ಯದ ಆರಂಭಿಕ ಹಂತದಲ್ಲಿ ಬಂದಂಥ ದೇವನೂರರ ದ್ಯಾವನೂರು ಕಥಾ ಸಂಕಲನ ಸಾಹಿತ್ಯದಲ್ಲಿ ಆವರೆಗೆ ಕಾಣದಿದ್ದಂತಹ ಅನೇಕ ವಸ್ತು ಪಾತ್ರಗಳನ್ನು ವಿಭಿನ್ನ ವಿನೂತನ ಅಭಿವ್ಯಕ್ತಿಯ ಮೂಲಕ ಸಾಹಿತ್ಯ ಲೋಕಕ್ಕೆ ಪರಿಚಯಿಸುವ ಪ್ರಯತ್ನ ಮಾಡಿತು.

ಅಸ್ಪೃಶ್ಯ ಎಂದು ದಲಿತರು, ಅಬಲೆ ಎಂದು ಹೆಣ್ಣು ಸಮಾಜದ ಮುಖ್ಯವಾಹಿನಿಯಿಂದ ದೂರವೇ ಉಳಿಯಲ್ಪಟ್ಟರು. ಇವರಿಬ್ಬರೂ ಇಲ್ಲಿ ಸಾಹಿತ್ಯಿಕವಾಗಿ ತಮ್ಮ ಸ್ಥಿತಿಯನ್ನು ಚಿತ್ರಿಸುತ್ತ ಪ್ರಶ್ನಿಸಿ ಆ ಮೂಲಕ ಸಮಾನತೆಗಾಗಿ ಹಂಬಲಿಸತೊಡಗಿದರು.

ದೇವನೂರ, ಸಿದ್ದಲಿಂಗಯ್ಯರಂತಹ ದಲಿತರು, ಕಟ್ಪಾಡಿ, ಸಾರಾರಂಥ ಮುಸ್ಲಿಂ ಬರಹಗಾರರು, ಸುಕನ್ಯಾ ಮಾರುತಿ, ಹೇಮಾ ಪಟ್ಟಣ ಶೆಟ್ಟಿಯಂಥ ಮಹಿಳೆಯರು ಇಲ್ಲಿ ವಿಶೇಷವಾಗಿ ನಿಲ್ಲಲು ಕಾರಣ ಸಂವೇದನೆಗಳು. ದಲಿತರ ಬದುಕು ಬೆಳಕಿಗೆ ಬರಲು ದೇವನೂರ, ಸಿದ್ದಲಿಂಗಯ್ಯನಂಥವರು, ಮುಸ್ಲಿಂ ರಲ್ಲಿನ ಮೌಢ್ಯತೆಯ ನಿವಾರಣೆಗೆ ಕಟ್ಪಾಡಿ ಸಾರಾರಂಥವರು, ಮಹಿಳೆಗೂ ಸಮಾನತೆ, ಬದುಕುವ ಹಕ್ಕು ಬೇಕೆಂದು ಸುಕನ್ಯಾ, ಮುಕ್ತಾಯಕ್ಕ ರಂಥವರು ಸಾಹಿತ್ಯದ ಮೂಲಕ ಧ್ವನಿ ಎತ್ತುವುದು ಮಹತ್ತದ್ದಾಗುತ್ತದೆ. ಹೀಗೆ ಬಂಡಾಯ ಸಾಹಿತ್ಯ ಶೋಷಿತರ, ನಿರ್ಲಕ್ಷಿತರ ದುರ್ಬಲರ, ಮುಗ್ದರ, ಅನಕ್ಷರಸ್ಥರ ಪರವಾದ ಸಾಹಿತ್ಯವಾಗಿ ಬರಲು ಹಂಬಲಿಸುತ್ತದೆ.

ಗ್ರಾಮೀಣ ಬದುಕು ಇಲ್ಲಿನಷ್ಟು ದಟ್ಟವಾಗಿ ಹಿಂದಿನ ಸಾಹಿತ್ಯಿಕ ಹಂತಗಳಲ್ಲಿ ಕಂಡು ಬಂದಿಲ್ಲ. ಭಾರತದ ಬೆನ್ನುಲುಬಾದ ಹಳ್ಳಿಗಳ ಬದುಕಿನ ಅನಾವರಣ ಇಲ್ಲಿ ಎದ್ದು ಕಾಣುತ್ತದೆ. ಜಮೀನ್ದಾರಿ ವ್ಯವಸ್ಥೆ ಇಲ್ಲಿ ತನ್ನ ಕ್ರೌರ್ಯವನ್ನು ಮೆರೆಯುತ್ತದೆ. ಬಡವರ ದುರ್ಬಲರ, ಮಹಿಳೆಯರ ಬದುಕನ್ನು ಕಾಲು ಕಸ ಮಾಡುತ್ತದೆ. ಈ ಕ್ರೌರ್ಯ ಇಲ್ಲಿನ ಈ ಸಾಹಿತ್ಯದಲ್ಲಿ ಪ್ರಶ್ನಿಸಲ್ಪಡುತ್ತದೆ. ಸಾಮಾಜಿಕ ಕಾಳಜಿಯನ್ನು ರಾಜಕೀಯ ಪ್ರಜ್ಞೆಯನ್ನು ಅಪೇಕ್ಷಿಸುವ ಬಂಡಾಯ ಸಾಹಿತ್ಯ ಸಮಾಜದೊಂದಿಗೆ ಜೀವಂತ ಸಂಬಂಧ ಹೊಂದಲು ಹಂಬಲಿಸುತ್ತದೆ.

ಅಧ್ಯಾಯ-5

ಬೆಸಗರಹಳ್ಳಿ ರಾಮಣ್ಣ ಅವರ ಬದುಕು ಮತ್ತು ಸಾಹಿತ್ಯ

ನವೋದಯ ಸಾಹಿತ್ಯ. ಭಾವುಕ ಸಾಹಿತ್ಯವಾಗಿ ಗುರುತಿಸಿಕೊಂಡರೆ, ಪ್ರಗತಿಶೀಲ ಸಾಹಿತ್ಯ ಪ್ರಗತಿಪರತೆಯನ್ನು ಮುಖ್ಯವಾಗಿ ಮೈಗೂಡಿಸಿಕೊಂಡು ಬರುತ್ತದೆ. ನವ್ಯ ಸಾಹಿತ್ಯ ವಿಮರ್ಶೆಯನ್ನು ಪ್ರಮುಖ ಕಾಣಿಕೆಯಾಗಿ ನೀಡಿದರೆ, 1975ರಿಂದ ಪ್ರಾರಂಭಗೊಳ್ಳುವ ದಲಿತ ಬಂಡಾಯ ಸಾಹಿತ್ಯ ಶೋಷಿತಪರ ನಿಲುವನ್ನು ಹೊತ್ತು ಬಂದಂತಹ ಸಾಹಿತ್ಯವಾಗಿದೆ.

ದಲಿತ, ಬಡವ, ಮಹಿಳೆ ಈ ಮೂರು ಗುಂಪುಗಳೇ ಪ್ರಮುಖ ಪಾತ್ರ ವಹಿಸುವ ಈ ಹಂತದ ಸಾಹಿತ್ಯದಲ್ಲಿ ಇವರೊಂದಿಗೆ ಮುಸ್ಲಿಂ ಜನಾಂಗಕ್ಕೆ ಸೇರಿದವರೂ ಮುಖ್ಯ ವಾಹಿನಿಯಲ್ಲಿ ಗುರ್ತಿಸಿಕೊಂಡಿದ್ದು ವಿಶೇಷ. ಸಾರಾ ಅಬೂಬಕರ್, ಬಾನು ಮುಶ್ತಾಕ್, ಕೆ.ಷರಿಫ ರಂಜಾನ್ ದರ್ಗಾ ರಂಥವರು ಪ್ರಮುಖ ಬರಹಗಾರರಾಗಿ ಬೆಳೆದ ಹಂತ ಇದಾಗಿದೆ.

ಸಮಾಜದ ಎಲ್ಲಾ ಕ್ಷೇತ್ರಗಳ ಜನರು ಈ ಸಾಹಿತ್ಯದ ಮೂಲಕ ಪ್ರೇರಣೆ ಪಡೆದದ್ದು ತಾವೂ ಸಾಹಿತಿಗಳಾಗಲು ಹಂಬಲಿಸಿದ್ದು, ಓದುಗ ವಲಯ ವಿಸ್ತಾರಗೊಂಡದ್ದು ಮಹತ್ವ ಅಂಶಗಳಾಗಿವೆ. ಸಮಾಜದ ಅಂಚಿಗೆ ತಳ್ಳಲ್ಪಟ್ಟವರನ್ನು ಕೇಂದ್ರಕ್ಕೆ ತರುವ ಸಾಹಿತ್ಯಕ ಪ್ರಯತ್ನ ಈ ಹಂತದಲ್ಲಿ ಕಂಡು ಬರುತ್ತದೆ.

ಹಾಗೆ ಮಂಡ್ಯ ಜಿಲ್ಲೆ ಮದ್ದೂರು ತಾಲೋಕಿನ ಬೆಸಗರಹಳ್ಳಿಯವರಾದ ರಾಮಣ್ಣ ನವರು ವೈದ್ಯರಾಗಿ ಗಳಿಸಿದಷ್ಟೇ ಜನಪ್ರಿಯತೆಯನ್ನು ಕಥೆಗಾರರಾಗಿಯೂ ಗಳಿಸಿಕೊಂಡಿದ್ದಾರೆ, ಗುರುತಿಸಿಕೊಂಡಿದ್ದಾರೆ.

ಸಣ್ಣಕಥಾ ಕ್ಷೇತ್ರಕ್ಕೆ ದಲಿತ-ಬಂಡಾಯ ಸಂವೇದನೆಯ ಉತ್ತಮ ಕಥೆಗಳನ್ನು ನೀಡಿದ ಮಹತ್ವದ ಕಥೆಗಾರರಾದ ಬೆಸಗರಹಳ್ಳಿ ರಾಮಣ್ಣ 1938ರಲ್ಲಿ ಮಂಡ್ಯ ಜಿಲ್ಲೆಯ ಮದ್ದೂರು ತಾಲೋಕಿನ ಬೆಸಗರ ಹಳ್ಳಿಯಲ್ಲಿ ಜನಿಸಿದರು. ತಂದೆ ಚಿಕ್ಕ ಎಲ್ಲೇಗೌಡ ತಾಯಿ ದೊಡ್ಡ ತಾಯಮ್ಮ ಮದ್ದೂರು, ಮೈಸೂರುಗಳಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿದರು. 1968ರಲ್ಲಿ ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ಎಂ.ಬಿ.ಬಿ.ಎಸ್. ಪದವಿ ಪಡೆದು ಸರ್ಕಾರಿ ವೈದ್ಯರಾಗಿ ವೃತ್ತಿ ಜೀವನವನ್ನು ಆರಂಭಿಸಿದರು. ತಮ್ಮ ಸೇವಾವಧಿಯಲ್ಲಿ ಬಹುಪಾಲು ಹಳ್ಳಿಗಳಲ್ಲಿ ವೈದ್ಯರಾಗಿ ಸೇವೆ ಸಲ್ಲಿಸಿದ್ದು ಇವರ ವಿಶೇಷ.

ರಾಮಣ್ಣ ವೃತ್ತಿಯಲ್ಲಿ ವೈದ್ಯರಾಗಿದ್ದೂ ಪ್ರವೃತ್ತಿಯಲ್ಲಿ ಸಾಹಿತಿಗಳಾಗಿ ಸೃಜನ ಶೀಲರಾಗಿದ್ದರು. ವೈದ್ಯ ವೃತ್ತಿಗೆ ಕಾಲಿಡುತ್ತಿರುವಾಗಲೇ 1967ರಲ್ಲಿ ನೆಲದ ಒಡಲ ಕಥಾ ಸಂಕಲವನ್ನು ಪ್ರಕಟಿಸಿದ್ದರು. ಈ

ಕಥಾ ಸಂಕಲನಕ್ಕೆ ಹಾ.ಮಾ ನಾಯಕರು ಮುನ್ನುಡಿಯನ್ನು ಬರೆಯುವ ಮೂಲಕ ರಾಮಣ್ಣ ಅವರನ್ನು ಸಾಹಿತ್ಯ ಕ್ಷೇತ್ರಕ್ಕೆ ಸ್ವಾಗತಿಸಿ, ಶುಭ ಹಾರೈಸಿದರು. ರಾಮಣ್ಣ ಮೈಸೂರಿನ ವೈದ್ಯಕೀಯ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದಾಗಲೇ ಕತೆಗಳನ್ನು ಬರೆಯತೊಡಗಿದ್ದರು. ಇವರು ಪ್ರಜಾವಾಣಿ ಪತ್ರಿಕೆಯ ದೀಪಾವಳಿ ಕಥಾ ಸ್ಪರ್ಧೆಯಲ್ಲಿ ಭಾಗವಹಿಸಿ ಸುಗ್ಗಿ ಕಥೆಗೆ ಪ್ರಥಮ ಬಹುಮಾನ ಪಡೆಯುವುದರೊಂದಿಗೆ ಸಣ್ಣಕಥೆಗಾರರಾಗಿ ನಾಡಿನ ಗಮನ ಸೆಳೆದರು. ಮುಂದೆ ರಾಮಣ್ಣ ಮದ್ದೂರು ತಾಲ್ಲೂಕಿನ ದೇಸಹಳ್ಳಿಯ ರಾಜಮ್ಮ ಅವರನ್ನು ಬಾಳ ಸಂಗಾತಿಯಾಗಿ ಆಯ್ಕೆ ಮಾಡಿಕೊಳ್ಳುತ್ತಾರೆ. ಈ ದಂಪತಿಗಳಿಗೆ ಮೂರು ಮಕ್ಕಳು ಇಬ್ಬರು ಗಂಡು ಮಕ್ಕಳು ರವಿಕಾಂತೇಗೌಡ, ಅಣ್ಣಾ ದೊರೆ ಮಗಳು ಪೂರ್ಣಿಮಾ, ರವಿಕಾಂತೇಗೌಡರು. ಐ.ಪಿ.ಸ್ ಅಧಿಕಾರಿಗಳಾಗಿದ್ದು, ಪ್ರಸ್ತುತ ಬೆಂಗಳೂರಿನ ಸಂಚಾರಿ ವಿಭಾಗದ ಜಂಟಿಆಯುಕ್ತರಾಗಿದ್ದಾರೆ.

ರಾಮಣ್ಣ ಅವರು ಸಾಹಿತ್ಯ ಕೃಷಿಯನ್ನು ಮಾಡುವುದರೊಂದಿಗೆ ಸಾಮಾಜಿಕ ಅಂದೋಲನಗಳಲ್ಲಿಯೂ ತಮ್ಮನ್ನು ತೊಡಗಿಸಿಕೊಂಡವರು ಬಂಡಾಯದ ನೆಲೆಯಲ್ಲಿ ಬರವಣಿಗೆಯನ್ನು ರೂಪಿಸಿದ ಇವರು ಮುಂಚಿನಿಂದಲೂ ಅನ್ಯಾಯ ಅಕ್ರಮಗಳನ್ನು ಪ್ರತಿಭಟಿಸುವ ಮನೋಧರ್ಮದವರು. ಕರ್ನಾಟಕ ಬರಹಗಾರರು ಮತ್ತು ಕಲಾವಿದರ ಒಕ್ಕೂಟದ ಚಟುವಟಿಕೆಗಳು, ಜಾತಿ ವಿನಾಶ ಸಮ್ಮೇಳನ, ಜಯ ಪ್ರಕಾಶ ನಾರಾಯಣ ಅಂದೋಲನ, ಅಲ್ಲದೆ ದಲಿತ ಮತ್ತು ಬಂಡಾಯ ಸಾಹಿತ್ಯ ಚಳುವಳಿಗಳಲ್ಲಿಯೂ ಭಾಗವಹಿಸಿದರು. ಈ ಎಲ್ಲ ಹೋರಾಟಗಳ ದಟ್ಟವಾದ ಪ್ರಭಾವ ಇವರ ಬದುಕು ಸಾಹಿತ್ಯ ಎರಡರಲ್ಲೂ ಇರುವುದನ್ನು ಕಾಣಬಹುದು.

ರಾಮಣ್ಣ ವಾಸ್ತವವಾದಿ ಕಥೆಗಾರರಾಗಿ ಬೆಳೆದವರು. ಅವರು ಕಥೆಗಳನ್ನೇ ಹೆಚ್ಚಾಗಿ ಬರೆದರು. ಅವರೊಳಗಿನ ಕಥೆಗಾರ ಜಾಗೃತ ಗೊಂಡು, ಕಥಾ ಪ್ರಜ್ಞೆ ಅನಾವರಣಗೊಂಡಿತು. ಇದರ ಹಿಂದೆ ಪ್ರೇರಕಶಕ್ತಿಯಾಗಿ ಕೆಲಸ ಮಾಡಿದವರು ಯಾರು? ಬದುಕಿನ ಸಂದರ್ಭಗಳು ಹೇಗೆ ಒಂದಕ್ಕೊಂದು ಹೆಣೆದುಕೊಂಡು ಅವರನ್ನೇ ಬರವಣಿಗೆ ಮಾಡುವಂತೆ ಪ್ರೇರೇಪಿಸಿದವು ಎಂಬುದನ್ನು ಗಮನಿಸುವ ಅಗತ್ಯವಿದೆ.

ರಾಮಣ್ಣನವರು ಗ್ರಾಮೀಣ ಸಂಸ್ಕೃತಿಯೊಂದಿಗೆ ಹುಟ್ಟಿದ್ದು, ಬೆಳದದ್ದೂ ಗ್ರಾಮೀಣ ಪರಿಸರದಲ್ಲಿ ಹಾಗಾಗಿ ಅವರಿಗೆ ಸಹಜವಾದ ಒಡನಾಟವಿತ್ತು. ಬಾಲ್ಯದಲ್ಲಿ ತನ್ನ ತಂದೆಯ ಸೋದರ ಮಾವನ ಹೆಂಡತಿಯಾದ ದೇಸಳ್ಳಿ ಅಮ್ಮ ಎಂದೇ ಕರೆಯುವ ಅಮ್ಮನಿಂದೇ ಸಾಕಷ್ಟು ಕಥೆಗಳನ್ನು ಕೇಳಿ ಬೆಳೆದರು. ರಾಮಣ್ಣ ಮತ್ತು ಇನ್ನಿತರ ಮಕ್ಕಳನ್ನು ಮನೆಯ ಮುಂದಿನ ಜಗಲಿಯ ಮೇಲೆ ಕೂರಿಸಿಕೊಂಡು ದೇಸಳ್ಳಿ ಅಮ್ಮ ಪಾತಾಳ ಲೋಕದ ಸುರಸುಂದರಿಯರನ್ನು ಮಂತ್ರಗಾರರನ್ನು ಕುರಿತು ಕಣ್ಣಿಗೆ ಕಟ್ಟುವಂತೆ ಕಥೆಗಳನ್ನು ಹೇಳುತ್ತಿದ್ದರು. ಮಕ್ಕಳ ಮನಸ್ಸಿಗೆ ತನ್ನ ಕಲ್ಪನೆಯ ಲೋಕದ

ಪರಿಚಯವನ್ನು ಮಾಡಿಸುತ್ತಿದ್ದಳು. ಓದು-ಬರಹ ತಿಳಿಯದ ಈ ಅಮ್ಮ ಅಜ್ಞಾತ ಕಥೆಗಾರ್ತಿ ಎಂದು ರಾಮಣ್ಣ ಹೇಳಿಕೊಂಡಿದ್ದಾರೆ. ಚಿಕ್ಕ ವಯಸ್ಸಿನಲ್ಲಿ ಕಥೆಗಳನ್ನು ಕೇಳಿ ಕಲ್ಪನೆಯ ಅದ್ಭುತ ಲೋಕದ ಪ್ರವೇಶವನ್ನು ಪಡೆದಿದ್ದ ರಾಮಣ್ಣ ಮುಂದೊಂದು ದಿನ ಕಥೆಗಾರರಾಗಿ ಬೆಳೆದದ್ದು, ಕಥೆಗಳು ಬಹುಮಾನ ಪಡೆದ ಸುದ್ದಿಯನ್ನು ದೇಸಹಳ್ಳಿ ಅಮ್ಮನಿಗೆ ತಿಳಿಸಿದಾಗ ತಲೆಸವರಿ ನಟಿಗೆ ಮುರಿದು ದೃಷ್ಟಿ ನಿವಾಳಿಸಿ ತನ್ನ ಸಂತಸವನ್ನು ವ್ಯಕ್ತಪಡಿಸಿದಳು. ದೇಸಳ್ಳಿ ಅಮ್ಮ ರಾಮಣ್ಣ ಅವರ ತಂದೆಯನ್ನು ತನ್ನ ಮಗನೊಂದಿಗೆ ಸಾಕಿ ಸಲಹಿ ಜೀವನಕ್ಕೆ ಒಂದು ದಾರಿ ಮಾಡಿದ್ದಲ್ಲದೆ, ರಾಮಣ್ಣ ಅವರನ್ನು ಮೊಮ್ಮಗನಂತೆ ಕಂಡು ಅಜ್ಜಿಯ ಪ್ರೀತಿ, ವಿಶ್ವಾಸಗಳನ್ನು ನೀಡುವುದರೊಂದಿಗೆ ಅವರೊಬ್ಬ ಕಥೆಗಾರರಾಗಿ ರೂಪುಗೊಳ್ಳಲು ಪ್ರೇರಣಶಕ್ತಿಯಾಗಿದ್ದರು.

ರಾಮಣ್ಣ ಅವರಿಗೆ ಸಾಹಿತ್ಯದಲ್ಲಿ ಆಸಕ್ತಿ ಉಂಟಾಗಲು ಅವರ ಸೋದರ ಮಾವ ಮತ್ತು ಅವರ ದಿವಂಗತ ಅಣ್ಣ ಪುಟ್ಟಸ್ವಾಮಿಗೌಡ ಕಾರಣಕರ್ತರು. ರಾಮಣ್ಣನವರ ಮಾವ ತಮ್ಮ ಎಪ್ಪತ್ತು ವರ್ಷದ ವಯಸ್ಸಿನಲ್ಲೂ ಇಂಗ್ಲೀಷ್ ಎಂ.ಎ. ಮಾಡಲು ಪ್ರಯತ್ನಿಸಿದ್ದರು. ಇವರು ತಮ್ಮ ಜ್ಞಾನದ ದಾಹವನ್ನು ನೀಗಿಸಿಕೊಳ್ಳಲು ಸಾಹಿತ್ಯದ ವಿವಿಧ ಮುಖಗಳನ್ನು ಅರಸುತ್ತ ಹೊರಟವರು. ತನ್ನ ಬದುಕು ವಿಷಮ ಪರಿಸ್ಥಿತಿಯಲ್ಲಿ ಸಿಕ್ಕಿಕೊಂಡಾಗಲೂ ವಿಚಲಿತರಾಗದೆ ಇದ್ದರು. ಇದು ರಾಮಣ್ಣ ಅವರಿಗೆ ವಿಚಿತ್ರವಾಗಿ ಕಂಡರೂ ಮುಂದೆ ಅವರಲ್ಲಿ ಸಾಹಿತ್ಯ ಆಸಕ್ತಿ ಬೆಳೆಸಲು ಕಾರಣವಾಗಿತ್ತು.

ರಾಮಣ್ಣ ಅವರ ಅಣ್ಣ ಓದಿದ್ದು, ಎಸ್.ಎಸ್.ಎಲ್.ಸಿ. ಯವರೆಗೆ ಕುಮಾರವ್ಯಾಸ ಭಾರತ ಪದ್ಯಗಳನ್ನು, ಕುವೆಂಪು ಅವರ ಗೀತೆಗಳನ್ನು ಸೊಗಸಾಗಿ ಹಾಡುತ್ತಿದ್ದರು. ಬುದ್ಧ ಮಗ, ಹೆಂಡತಿಯನ್ನು ಬಿಟ್ಟು ಹೋಗುವ ಸಂದರ್ಭವನ್ನು, ರನ್ನನು ಬಣ್ಣಿಸಿರುವ ದುರ್ಯೋಧನ ಪ್ರಲಾಪ ವನ್ನು ಬಣ್ಣ ಕಟ್ಟಿ ಹಾಡಿ ರಾಮಣ್ಣ ಅವರನ್ನು ವಿಸ್ಮಿತಗೊಳಿಸುತ್ತಿದ್ದರು. ರಾಮಣ್ಣ ಅವರನ್ನು ಕರ್ಣನ ದೇಹವೆಂದು ತಾನೇ ದುರ್ಯೋಧನನೆಂದು ಭಾವಿಸಿ, ಆನುಂ ನೀನುಂ ದುಶ್ಯಾಸನಂ ಎಂದು ಪ್ರಾರಂಭಿಸಿ ಕೆನ್ನೆಗಲ್ಲಗಳನ್ನು ಪರಿಪರಿಯಾಗಿ ಚುಂಬಿಸಿ ಕಣ್ಣೀರ್‌ಗರೆದುದ್ದನ್ನು ಕಂಡು ರಾಮಣ್ಣ ಬೆರಗುಗೊಂಡಿದ್ದರು. ಒಮ್ಮೆ ತನ್ನಣ್ಣನ ಪ್ರತಿಭೆಯ ಬಗ್ಗೆ ಸಂಶಯ ವ್ಯಕ್ತಪಡಿಸಿದಾಗ ಅವರಣ್ಣ ನಿನ್ನಣ್ಣನ ಪ್ರತಿಭೆಯ ಬಗೆಗೆ ನಿನಗೆ ಸಂಶಯವೇಕೆ ಸೋದರ, ನಿನ್ನಣ್ಣ ಈ ಲೋಕದೊಳ್ ಧೀರ ಶೂರನೈ ಎಂದು ಕಂದ ರೂಪದಲ್ಲಿ ಹಾಡಿ ನಗಿಸಿದ್ದನಂತೆ. 1954ರ ಸಂದರ್ಭದಲ್ಲಿ ಕೆ. ಹನುಮಂತಯ್ಯನವರ ಸರ್ಕಾರ ಕುಮಾರವ್ಯಾಸ ವಿರಚಿತ ಕರ್ಣಾಟಕ ಭಾರತ ಕಥಾಮಂಜರಿ ಯನ್ನು ಎರಡು ರೂ. ಮೌಲ್ಯಕ್ಕೆ ಜನಸಾಮಾನ್ಯರಿಗೆ ತಲುಪಿಸಿತ್ತು. ರಾಮಣ್ಣ ಅವರ ಅಣ್ಣ ಈ ಪುಸ್ತಕವನ್ನು ಮನೆಗೆ ತಂದು ಕುವೆಂಪು ಅವರು ಇದಕ್ಕೆ ಬರೆದಿದ್ದ ಮುನ್ನುಡಿಯನ್ನು ಭಾವುಕನಾಗಿ ಓದಿ ರಾಮಣ್ಣ ಅವರ ಎಳೆಯ ಮನಸ್ಸನ್ನು ಭಾರತದ ಕಥೆಯ

ಕಡೆಗೆ ಸೆಳೆದಿದ್ದನು. ಹಾಗೆಯೇ ಕುವೆಂಪು ಅವರ ಸಾಹಿತ್ಯದ ಕಡೆಗೆ ರಾಮಣ್ಣ ಅವರಿಗೆ ಒಲವು ಮೂಡಲು ಕಾರಣನಾಗಿದ್ದನು.

ಹೀಗೆ ಈ ವ್ಯಕ್ತಿಗಳು ಮತ್ತು ಸಂದರ್ಭಗಳು ರಾಮಣ್ಣ ಅವರಲ್ಲಿ ಸಾಹಿತ್ಯಾಸಕ್ತಿ ಬೆಳೆಯಲು ಪ್ರೇರಣೆಯಾಗಿದ್ದರು. ಇದನ್ನು ಸ್ವತಃ ರಾಮಣ್ಣ ಅವರೇ ಮೆಚ್ಚುಗೆಯಿಂದ ಹೇಳಿಕೊಂಡಿದ್ದರೆ.

1957-58ರಲ್ಲಿ ರಾಮಣ್ಣ ಮೈಸೂರು ಯುವರಾಜ ಕಾಲೇಜಿನ ವಿದ್ಯಾರ್ಥಿ. ಆಗ ಯುವರಾಜ ಕಾಲೇಜಿನ ವಿದ್ಯಾರ್ಥಿಗಳು ಲಲಿತಾ ಕಲಾ ಸಂಘದ ಮೂಲಕ ವಸಂತ ಎಂಬ ವಾರ್ಷಿಕ ಪತ್ರಿಕೆಯನ್ನು ತರಬೇಕೆಂದು ಜಿ.ಎಸ್.ಎಸ್. ಅವರು ವಿದ್ಯಾರ್ಥಿಗಳಿಂದ ಕಥೆ, ಕವನಗಳನ್ನು ಪ್ರಬಂಧಗಳನ್ನು ಆಹ್ವಾನಿಸಿ ಪ್ರಕಟನೆ ಹೊರಡಿಸಿದ್ದರು. ಇದನ್ನು ಕಂಡು ಹಸಿವಿನ ಕಹಳೆ ಎಂಬ ಕತೆಯನ್ನು ಬರೆದು ರಾಮಣ್ಣ ಕೊಡಲು ಹೋದಾಗ ಜಿ.ಎಸ್. ಎಸ್. ಅವರು ಖುಷಿ ಪಟ್ಟು ಕಥೆಯನ್ನು ಪರಿಶೀಲಿಸುವುದಾಗಿ ಆಶ್ವಾಸನೆ ನೀಡುತ್ತಾರೆ. ಆದರೆ ವಸಂತ ಪತ್ರಿಕೆ ಕಾರಣಾಂತರಗಳಿಂದ ಪ್ರಕಟಣೆಯನ್ನು ಕಾಣುವುದಿಲ್ಲ. ಜಿ.ಎಸ್.ಎಸ್. ಅವರು ರಾಮಣ್ಣ ಅವರ ಕಥೆಯನ್ನು ಹಿಂದಿರುಗಿಸುತ್ತಾ ಪತ್ರಿಕೆ ಪ್ರಕಟವಾಗಲಿಲ್ಲ. ಹೀಗಾಯ್ತು ಅಂತ ಬೇಜಾರು ಮಾಡಿಕೊಳ್ಳದೇ ಸಾಹಿತ್ಯವನ್ನು ಓದುವುದನ್ನು ಬರೆಯಬೇಕೆಂಬ ಇಚ್ಛೆಯನ್ನು ಮುಂದುವರೆಸಿಕೊಂಡು ಹೋಗು ಎಂದು ಸಲಹೆ ನೀಡಿದರು.

ಪಕ್ಕದಲ್ಲೇ ಇವು ಮಹಾರಾಜ ಕಾಲೇಜಿನ ಕನ್ನಡ ವಿಭಾಗದ ದಿಗ್ಗಜರಾದ ಡಿ.ಎಲ್.ಎನ್. ಹಾಗೂ ತೀ.ನಂ.ಶ್ರೀ ಅವರನ್ನ ಭೇಟಿ ಮಡುವ ಮತ್ತು ಮಹಾರಾಜ ಕಾಲೇಜಿನ ಕರ್ನಾಟಕ ಸಂಘವು ಏರ್ಪಡಿಸುತ್ತಿದ್ದ ಸಾಹಿತ್ಯ ಸಂಜ್ಞೆಗಳಲ್ಲಿ ಅವರ ಭಾಷಣಗಳನ್ನು ಕೇಳುವ ಅವಕಾಶ ಲಭಿಸಿತ್ತು. ಹೀಗೆ ರಾಮಣ್ಣ ಅವರನ್ನ ಮೈಸೂರಿನ ಸಾಹಿತ್ಯದ ವಾತಾವರಣ, ಸಾಹಿತ್ಯವನ್ನು ಓದುವ ಮತ್ತು ಬರೆಯುವ ಚಟುವಟಿಕೆಗಳತ್ತ ಗಮನ ಹರಿಸುವಂತೆ ಮಾಡಿತು.

ರಾಮಣ್ಣ ಪ್ರಜಾವಾಣಿ ದೀಪಾವಳಿ ಕಥಾಸ್ಪರ್ಧೆಗೆಂದು 1967ರಲ್ಲಿ ಬರೆದ ಹಾವಿಲ್ಲದ ಹುತ್ತ ಕಥೆ ಅವರ ಮೊದಲ ಕಥೆ. ಈ ಕಥೆ ತೀರ್ಪುಗಾರರ ಮೆಚ್ಚುಗೆಯನ್ನು ಗಳಿಸಿತು. ಖ್ಯಾತ ಲೇಖಕರಾದ ನಿರಂಜನ ಅವರು ಕಥೆಯನ್ನು ಕುರಿತು ವಿಮರ್ಶೆ ಮಾಡಿದ್ದು ಮತ್ತೊಂದು ವಿಶೇಷ.

ಮಂಡ್ಯ ಜಿಲ್ಲೆಯ ವಿದ್ಯಾರ್ಥಿ ಸಂಘ ಹೊರತಂದ ಲೋಕಪಾವನಿ ಗಾಗಿ ಮಳಗರೆಯಿತಿ ಬಾನು , ಹಸುರಾಯಿತು ಮನ ಕತೆಯನ್ನು ರಾಮಣ್ಣ ಬರೆಯುತ್ತಾರೆ. ಲೋಕಪಾವನಿ ಬಿಡುಗಡೆಯ ಸಂದರ್ಭದಲ್ಲಿ ದೇ.ಜ.ಗೌ. ಅವರು ಅಭಿಮಾನದಿಂದ ಇವರ ಕತೆಗಳ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತ ಪಡಿಸುತ್ತಾರೆ. ಈ ಕತೆಯನ್ನು ಸುಧಾ ವಾರ ಪತ್ರಿಕೆ ಪ್ರಕರಟಿಸುವುದರೊಂದಿಗೆ

ಐವತ್ತು ರೂಪಾಯಿ ಗೌರವ ಧನವನ್ನು ನೀಡಿದ್ದು, ರಾಮಣ್ಣ ಅವರಲ್ಲಿ ಬರವಣಿಗೆಯ ಬಗೆಗೆ ಆತ್ಮ ವಿಶ್ವಾಸವನ್ನು ಮೂಡಿಸುತ್ತದೆ. ಕತೆಗಾರರಾಗಿ ಬೆಳೆಯುವಂತೆ ಪ್ರೇರೇಪಿಸುತ್ತವೆ.

ರಾಮಣ್ಣ ಅವರ ಸುಗ್ಗಿ ಕಥೆಗೆ 1965ರಲ್ಲಿ ಪ್ರಜಾವಣಿ ದೀಪಾವಳಿ ಕಥಾ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಲಭಿಸಿತ್ತು. ಲಂಕೇಶರ ನಾನಲ್ಲ ಕತೆಗೆ ದ್ವಿತೀಯ ಬಹುಮಾನ ಬಂದಿತ್ತು. ಈ ಒಂದು ಸಂದರ್ಭ ರಾಮಣ್ಣ ಅವರ ಸಾಹಿತ್ಯ ಬದುಕಿನಲ್ಲಿ ಮಹತ್ವ ಪಡೆದ ಸಂದರ್ಭವಾಗಿದೆ.

ರಾಮಣ್ಣ ಅವರ ಸ್ನೇಹ ಬಳಗ ಸಾಹಿತಿಗಳಿಂದ ಕೂಡಿತ್ತು. ಶ್ರೀ ಕೃಷ್ಣ ಆಲನಹಳ್ಳಿ, ಕೆ.ಎನ್. ಶಿವತೀರ್ಥನ್, ಸೂ. ರಮಾಕಾಂತ, ವೀರಭದ್ರ, ಕೆ.ಶಿವರಾಮ ಐತಾಳ ಇವರುಗಳ ಒಡನಾಟ ಅವರಲ್ಲಿ ಸಾಹಿತ್ಯ ಕೃಷಿಗೆ ಪೂರಕವಾಗಿ ಕೆಲಸ ಮಾಡುತ್ತ ಬಂತು.

ರಾಮಣ್ಣ ಅವರ ನೆಲದ ಸಿರಿ ಸಂಕಲನವನ್ನು ಬೆಂಗಳೂರು ವಿ.ವಿ.ಯು ಐ.ಯು.ಸಿ. ವಿಭಾಗಕ್ಕೆ ಪಠ್ಯವನ್ನಾಗಿ ಮಾಡಿದ್ದು, ಅವರಲ್ಲಿ ಬರೆಯಬೇಕೆಂಬ ಅಭ್ಯಾಸ ಮಾಡಬೇಕೆಂಬ ಆಸೆಯನ್ನು ಸದಾ ಎಚ್ಚರವಾಗಿಟ್ಟಿದ್ದಿತು.

ನನ್ನ ಮೇಲೆ ನಿಸ್ಸಂದೇಹವಾಗಿ ಕುವೆಂಪು ಟಾಲ್‌ಸ್ಟಾಯ್, ದೊಸ್ತೋವೆಯಸ್ಕಿ, ಮೈಕೆಲ್ ಶೂಲ್‌ಕೊವ್, ಚೆ ರಾವ್, ಪ್ರೇಮಚಂದ್, ಪ್ರಭಾವ ಬೀರಿದ್ದಾರೆ. ಈ ಮಹಾಚೇತನಗಳಿಗೆ ಇದೋ ನನ್ನ ನಮಸ್ಕಾರಗಳು ಎಂದು ತಮಗೆ ಸ್ಫೂರ್ತಿಯಾದ ಸಾಹಿತಿಗಳಿಗೆ ರಾಮಣ್ಣ ಹೃದಯ ತುಂಬಿ ನಮನ ಸಲ್ಲಿಸುತ್ತಾರೆ.

ಅಧ್ಯಾಯ-6

ಬೆಸಗರಹಳ್ಳಿ ರಾಮಣ್ಣ ಅವರ ಕಥೆಗಳಲ್ಲಿ ಶ್ರಮ ಸಂಸ್ಕೃತಿ

ದಲಿತ ಬಂಡಾಯಸಾಹಿತ್ಯ ಸಂದರ್ಭದ ಮಹತ್ವದ ಕತೆಗಾರರಾದ ಬೆಸಗರಹಳ್ಳಿ ರಾಮಣ್ಣ ಅವರ ಮೊದಲ ಕಥಾ ಸಂಕಲನ ನೆಲದ ಒಡಲಿನಲ್ಲಿ ಏಳು ಕಥೆಗಳಿವೆ. ಇದಕ್ಕೆ ಹಾ. ಮಾ ನಾಯಕರು ಮುನ್ನುಡಿ ಬರೆಯುತ್ತ ಇಲ್ಲಿನ ಕಥೆಗಳಲ್ಲಿ ಒಡೆದು ಹೋದ ಮನಸ್ಸುಗಳು, ಕೌಟುಂಬಿಕ ಸಂಬಂಧಗಳು, ಒಂದಾಗಿ ಮತ್ತೆ ಬೆಸೆದುಕೊಳ್ಳುವ ಚಿತ್ರಣ ನೀಡಿದ ರೀತಿಯನ್ನು ಪ್ರಶಂಸಿಸುತ್ತಾರೆ.

ಅವರ ಗರ್ಜನೆ ಕಥಾ ಸಂಕಲನದಲ್ಲಿ ಒಂಭತ್ತು ಕಥೆಗಳಿವೆ. ಇಲ್ಲಿನ ಕಥೆಗಳಲ್ಲಿ ಬಂಡಾಯ ಝಳಪಿಸುತ್ತದೆ. ವರ್ಣ ಹಾಗೂ ವರ್ಗಗಳ ನಡುವಿನ ಸಂಘರ್ಷದ ಚಿತ್ರಗಳೂ ಇವೆ. ದಲಿತರ ಜೊತೆಗೆ ಮಹಿಳೆಯರೂ ಶೋಷಣೆಗೆ ಒಳಗಾಗುವ ಚಿತ್ರಣಗಳು ಚಿಂತನೆಗೆ ಹಚ್ಚುತ್ತವೆ.

ಅವರ ಹರಕೆಯ ಹಣ ಕಥಾ ಸಂಕಲನದಲ್ಲಿನ ಐದೂ ಕಥೆಗಳು ಗ್ರಾಮೀಣ ಬದುಕನ್ನು ಪರಿಣಾಮಕಾರಿಯಾಗಿ ಚಿತ್ರಿಸಿವೆ. ಅಲಕ್ಷ್ಯಕ್ಕೀಡಾದ ಜನಾಂಗದ ಬದುಕಿನ ಸಾಂಸ್ಕೃತಿಕ ಶೋಷಣೆಯ ಸೂಕ್ಷ್ಮಗಳು ಪಟ್ಟಭದ್ರ ಹಾಗೂ ಅಧಿಕಾರ ಶಾಹಿಯ ವಿರುದ್ಧ ನಡೆದು ನಿಲ್ಲುವ ಪ್ರಾಮಾಣಿಕ ವ್ಯಕ್ತಿತ್ವಗಳ ಚಿತ್ರಣವಿದೆ.

ಅವರ ಒಂದು ಹುಡುಗನಿಗೆ ಬಿದ್ದ ಕನಸು ಕಥಾ ಸಂಕಲನದಲ್ಲಿ ಏಳು ಕಥೆಗಳಿವೆ, ಇಲ್ಲಿನ ಕಥೆಗಳಲ್ಲಿ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿನ ಭಯಾನಕ ದಿನಗಳ ಚಿತ್ರಣವಿದೆ ದೇಶದ ಹಲವು ಸಮಸ್ಯೆಗಳಿಗೆ ಕನ್ನಡಿ ಹಿಡಿಯುತ್ತದೆ.

ರಾಮಣ್ಣ ಅವರ ನೆಲದ ಸಿರಿ ಯ ಕಥೆಗಳಲ್ಲಿ ಸ್ತ್ರೀ ಸಂವೇದನೆಯ ನೆಲೆಗಳನ್ನು ಗುರುತಿಸ ಬಹುದಾಗಿದೆ.

ಮೃಗವನ್ನು
ಮನುಷ್ಯನನ್ನಾಗಿಸುತ್ತದೆ
ಸಾಹಿತ್ಯ
ಮಾನವನ ಅಂತರಾಳದಲ್ಲಿ
ಅಡಗಿರುವ ಮೃಗಗಳ ಪರಿಚಯಿಸುತ್ತದೆ

(ಸಾಹಿತ್ಯ, ಶೋಕಚಕ್ರ

2)

ಇದು ರಾಮಣ್ಣ ನವರ ಸಾಹಿತ್ಯಾಭಿಮಾನ, ಶ್ರದ್ದೆ ಮತ್ತು ಪ್ರೀತಿಯನ್ನು ತೋರಿಸುತ್ತವೆ. ತನ್ನಲ್ಲಿ ಪ್ರಾಮಾಣಿಕತೆ ಏನಾದರೂ ಇದ್ದದ್ದೇ ಆದರೆ ಅದು ಸಾಹಿತ್ಯದ ಓದಿನಿಂದ ಬಂದದ್ದು, ಅದು ನನ್ನನ್ನು ಮನುಷ್ಯನನ್ನಾಗಿ ಮಾಡಿ ಈ ನೆಲದಲ್ಲಿ ಬದುಕಲು ಅವಕಾಶ ಮಾಡಿಕೊಟ್ಟಿದೆ. ಎಂಬ ನಂಬಿಕೆಯಿದ್ದದ್ದು. ರಾಮಣ್ಣ ನವರು ವೈದ್ಯಕೀಯ ವಿದ್ಯಾರ್ಥಿಯಾಗಿಯೂ ಹೊಸ ಹೊಸ ಗ್ರಂಥಗಳನ್ನು ಓದುವುದರ ಜೊತೆಗೆ ಓದಿದ್ದರ ಬಗ್ಗೆ ಚರ್ಚೆ ಕೈಗೊಳ್ಳುತ್ತಾ ಸಾಹಿತ್ಯದ ಬಗ್ಗೆ ಅಪಾರ ಶ್ರದ್ದೆ ಮತ್ತು ಪ್ರೀತಿಗಳಿಸಿ ಕೊಂಡರು. ಶ್ರೇಷ್ಠ ಸಾಹಿತ್ಯ ಕೃತಿಗಳನ್ನು ಕೊಂಡು ಅಧ್ಯಯನ ಮಾಡುವ ಪ್ರವೃತ್ತಿಯುಳ್ಳವರಾಗಿದ್ದರು. ಇವರು ವೈದ್ಯರಾಗಿ ವೈದ್ಯಕೀಯ ಪುಸ್ತಕಗಳಷ್ಟೇ ಸಾಹಿತ್ಯದ ಪುಸ್ತಕಗಳನಗನು ಪ್ರೀತಿಸುತ್ತಿದ್ದರು .

ಅವರ 18 ಕತೆಗಳ ಕೊಳಲು ಮತ್ತು ಖಡ್ಗ ಕಥಾ ಸಂಕಲನದಲ್ಲಿ ಜೀವನದಲ್ಲಿ ಸಂಭವಿಸುತ್ತಿರುವ ಮೌಲ್ಯ ಪಲ್ಲಟಗಳ ಬಗೆಗೆ ರಾಮಣ್ಣ ವಿಷಾದ ವ್ಯಕ್ತಪಡಿಸುತ್ತಾರೆ. ಸಾಮಾಜಿಕ ಸಂಬಂಧಗಳನ್ನು ಕಟ್ಟುವ ತವಕವುಳ್ಳ ಅವರ ಮನುಸ್ಸು ಹತಾಶೆಗೆ ಒಳಗಾಗಿ ಎರಡು ವಿರುದ್ಧ ನೆಲೆಗಳ ಹೊಂದಾಣಿಕೆಯ ಆತಂಕವನ್ನು ಅನುಭವಿಸುತ್ತಿದ್ದಂತೆ ಕಾಣುತ್ತದೆ. ಬಂಡಾಯ ಮನೋಭಾವದ ರಾಮಣ್ಣ ಅವರು ಬದುಕಿನ ವಿವಿಧ ಮಗ್ಗುಲುಗಳನ್ನು ಕತೆಗಳಲ್ಲಿ ಅನಾವರಣಗೊಳಿಸಿದ್ದಾರೆ. ದಲಿತರ, ಒಕ್ಕಲಿಗರ, ಬದುಕಿನ ಶಕ್ತಿ, ಸತ್ವ, ಪ್ರೇಮ,ಕಾಮ, ದಬ್ಬಾಳಿಕೆ, ದ್ವೇಷ, ಸಣ್ಣತನ, ಢೋಂಗಿತನ, ಇವರ ಕತೆಗಳಲ್ಲಿ ಪ್ರಧಾನ ವಸ್ತುಗಳಾಗಿವೆ. ರಾಮಣ್ಣನವರು ಸಮಾಜದಲ್ಲಿ ನಡೆಯುವ ದಲಿತರ ಶೋಷಣೆಗಳನ್ನು ಕುರಿತು ತಮ್ಮ ಕತೆಗಳಲ್ಲಿ ತೀವ್ರವಾಗಿ ಪ್ರತಿಕ್ರಿಯಿಸಿದ್ದಾರೆ. ಗ್ರಾಮೀಣ ಜಗತ್ತಿನಲ್ಲಿ ಜನಪದರಿಂದ ಪ್ರೇರಣೆ ಪಡೆದು ಬರೆಯುವ ಇವರ ಪ್ರತಿಭೆ ದೇಸಿ ಮೂಲದ್ದಾಗಿದೆ, ಕತೆಗಳನ್ನು ಕಟ್ಟುವಲ್ಲಿ ನಿಪುಣತೆ ಮತ್ತು ಕೌಶಲ ಎದ್ದುಕಾಣುತ್ತದೆ. ಇವರ ಕಥೆಗಳು ಮಾನವೀಯ ಸಂಬಂಧಗಳನ್ನು ಅನ್ವೇಷಿಸುತ್ತ ಗ್ರಾಮೀಣ ಸಂಸ್ಕೃತಿಯ ಚಿತ್ರಗಳಾಗಿ ರಚನೆಗೊಂಡಿವೆ.

ನವ್ಯ ಸಾಹಿತ್ಯ ಉಚ್ಚ್ರಾಯ ಸ್ಥಿತಿಯಲ್ಲಿರುವಾಗಲೇ ಬರವಣಿಗೆಯನ್ನು ಆರಂಭಿಸಿದ ರಾಮಣ್ಣ ಗ್ರಾಮೀಣ ಪರಿಸರವನ್ನು ಆಯ್ಕೆಮಾಡಿಕೊಂಡವರು. ದಲಿತ ಬಂಡಾಯದ ಸಂವೇದನೆಗಳು ಅವರ ಕತೆಗಳ ವಸ್ತು ಭಾಷೆಯ ಮೇಲೆ ಪ್ರಭಾವ ಬೀರಿದೆ ಬಂಡಾಯದ ನೆಲೆಯ ಅವರ ಕಥೆಗಳಾದ ಜೀತ, ಸ್ವಾರ್ಥ ಗರ್ಜನೆ ಕತೆಗಳಲ್ಲಿ ಜೀತಪದ್ಧತಿ, ಯಜಮಾನಿಕೆಯ ಕ್ರೌರ್ಯ, ಅನೈತಿಕ ಸಂಬಂಧಗಳ ಚಿತ್ರಣಗಳು ವಾಸ್ತವ ನೆಲೆಗಟ್ಟಿನ ಮೇಲೆ ನಿಂತಿವೆ ಇವರ ಕತೆಗಳಲ್ಲಿ ರೋಗಿ,ಪ್ರಕೃತಿ ಮುಂತಾದ ವಿವರಗಳು ಒಂದು ವಿಶಿಷ್ಟ ಬಗೆಯ ರೂಪಕಗಳಾಗಿ ಕಾಣಿಸಿಕೊಳ್ಳುತ್ತವೆ.

ರಾಮಣ್ಣ ತಮ್ಮದೇ ಆದ ನೈತಿಕ ನೆಲೆಯಲ್ಲಿ ಲೋಕವನ್ನು ನೋಡುತ್ತಾರೆ. ಕತೆಯಲ್ಲಿ ಆ ಲೋಕವನ್ನು ಕಾಣಿಸುವಾಗ ಘಟನೆ ಮತ್ತು ಪಾತ್ರಗಳನ್ನು ನೈತಿಕ ನೆಲೆಗಟ್ಟಿನಲ್ಲಿ ವಿಶ್ಲೇಷಿಸುತ್ತಾರೆ. ತಾವು

ಓದಿದನ್ನು, ಕಂಡಿದ್ದನ್ನು ಕುತೂಹಲದಿಂದ ಅರಿಯುವುದರಿಂದ ಅವರು ಇಷ್ಟೊಂದು ಕತೆಗಳನ್ನು ಬರೆಯುವುದಕ್ಕೆ ಸಾಧ್ಯವಾಯಿತು.

ರಾಮಣ್ಣ ಸಾಹಿತ್ಯದ ಮೂಲಕ ಸಾಮಾಜಿಕ ವ್ಯಕ್ತಿತ್ವವನ್ನು ರೂಪಿಸಿಕೊಂಡವರು, ಹಾಗೂ ವ್ಯಕ್ತಿತ್ವದ ಹೊಣೆಗಾರಿಕೆಯನ್ನು ನಿಭಾಯಿಸುವ ಬಗ್ಗೆ ವಿಭಿನ್ನವಾಗಿ ಆಲೋಚಿಸಿದವರು. ಅವರ ಹೆಸರಿನ ಜೊತೆಗಿರುವ ಬೆಸಗರಹಳ್ಳಿ ಅವರ ಕತೆಯ ಜಗತ್ತಿನಲ್ಲಿ ಆವರಣವಾಗಿ ಸದಾ ನೆಲೆನಿಂತಿದೆ.

ಹೀಗೆ ನವ್ಯೋತ್ತರ ಹಂತದ ಪ್ರಮುಖ ಕತೆಗಾರರಾದ ರಾಮಣ್ಣ ಗ್ರಾಮೀಣ ಸಂಸ್ಕೃತಿ ಅಲ್ಲಿನ ಶೋಷಣೆ ಅಮಾನವೀಯತೆಗಳ ಅನಾವರಣವನ್ನು ಮಾಡಿರುವ ಪರಿ ಗಮನಾರ್ಹವಾಗಿದೆ.

ಕಥೆಯ ವಸ್ತು:-

ಬೆಸಗರಹಳ್ಳಿ ರಾಮಣ್ಣ ಅವರ ಮಳೆಗರೆಯಿತು ಭಾನು ಹಸುರಾಯಿತು ಮನ ಕಥೆಯ ಪ್ರಮುಖ ಕಥಾ ವಸ್ತು ಕೃಷಿ, ಭಾರತದ ಕೃಷಿಯು ಮಾನ್ಸೂನ್ ಮಳೆಯೊಡನೆ ಆಡುವ ಜೂಜಾಟವಾಗಿದ್ದು, ಈ ಮಾನ್ಸೂನ್ ಮಳೆಯನ್ನು ನಂಬಿಯೇ ಕೃಷಿ ಚಟುವಟಿಕೆ ಮಾಡಬೇಕಾಗುತ್ತದೆ. ಅಂತೆಯೇ ಹಳ್ಳಿಗಾಡಿನ ರೈತನ ಬದುಕಿನ ಸಂದಿಗ್ಧ ಪರಿಸ್ಥಿತಿಯನ್ನು ಈ ಕತೆಯಲ್ಲಿ ರಾಮಣ್ಣ ಅವರು ಮನೋಜ್ಞವಾಗಿ ಚಿತ್ರಿಸಿರುವುದು ಬಿಂಬಿತವಾಗುತ್ತದೆ, ರೈತರ ಜೀವನದಲ್ಲಿ ರಾಜಕೀಯ ಬಿರುಗಾಳಿ ಬೀಸಿದಾಗ ಅವರಲ್ಲಿರುವ ಒಗ್ಗಟ್ಟು ಛಿದ್ರವಾಗುವ ರೀತಿ, ರಾಜಕೀಯ ಪ್ರೇರಿತ ದ್ವೇಷದ ಜ್ವಾಲೆಗೆ ಸಿಕ್ಕಿ ಪುಡಿ ಪುಡಿಯಾಗುವ ಸ್ನೇಹದ ಬಂದನ ಈ ಎಲ್ಲ ಘಟನೆಗಳನ್ನು ಈ ಕಥೆಯಲ್ಲಿ ಕಾಣಬಹುದಾಗಿದೆ.

ಒಟ್ಟು ಕುಟುಂಬದ ಸಾರ್ಥಕತೆಯನ್ನು ಬಿಂಬಿಸುವ ಕಥೆ ಸುಗ್ಗಿ ಈ ಕಥೆಯ ಪ್ರಮುಖ ಆಶಯ ತುಂಬು ಕುಟುಂಬದ ಮಹತ್ವ, ಹಳ್ಳಿಯ ಸಮಾಜದಲ್ಲಿ ಅವಿಭಕ್ತ ಕುಟುಂಬಕ್ಕಿರುವ ಮಹತ್ವವನ್ನು ಚಿತ್ರಿಸುವುದು

ಹುಟ್ಟುತ್ತಾ ಅಣ್ಣ ತಮ್ಮಂದಿರು ಬೆಳೆಯುತ್ತಾ ದಾಯಾದಿಗಳು ಎನ್ನುವ ಗಾದೆಯ ಮಾತು ಈ ಕಥೆಗೆ ಅನ್ವಯಿಸುತ್ತದೆ.

ತನ್ನ ಬಯಕೆ ಚಿಗುರಿ, ಕಾಯಾಗಿ ಹಣ್ಣಾಗಿ ಭಾಗ್ಯ ನೀಡುವ ಕಾಲದಲ್ಲಿ ಉತ್ತು ಬಿತ್ತು ನಾಟಿ ಹಾಕಿದವನ ಎದೆಯಲ್ಲಿ ಹೇಳಲಾರದಂಥ ಸುಖ ಮನೆಮಾಡುತ್ತದೆ ಫಲದ ಭಾರದಿಂದ ಭೂಮಿಗೆ ಕುಸಿದು ಮುಗಿಲು ನೋಡುವ ನಸು ಹಳದಿ ಬಣ್ಣದ ಬತ್ತದ ಬೆಳೆಯನ್ನು ಕೊಯ್ದು ಹೊರೆ ಕಟ್ಟಿ ಸಾಗಿಸುವಾಗ ಆನಂದದ ಅಲೆಗಳೇಳುತ್ತವೆ. ವರ್ಷವಿಡೀ ದುಡಿದುದರ ಫಲ ಎದುರು ಮೂಡಿ ನಿಂತಾಗ ಒಕ್ಕಲು ಮಕ್ಕಳು ಹೂವಾಗುತ್ತಾರೆ.

ಮುಟ್ಟಸ್ವಾಮಣ್ಣನ ಅತಂತ್ರ ನಿರ್ಧಾರದಿಂದ ಉಂಟಾಗುವ ಘೋರ ಪರಿಣಾಮವನ್ನು ಕಥೆಯು ಒಳಗೊಂಡಿದೆ.

ರಾಮಣ್ಣ ಅವರ ಬಂಡಾಯದ ನೆಲೆಯಲ್ಲಿ ರಚಿತವಾಗಿರುವ ಮತ್ತೊಂದು ಕಥೆ ಜೀತ ಈ ಕಥೆಯು ಜೀತ ಪದ್ಧತಿಯು ಕ್ರೌರ್ಯ, ಸಾಹುಕಾರರು, ಜಮೀನ್ದಾರರ ದಬ್ಬಾಳಿಕೆ, ದಲಿತರ ಮೇಲಿನ ದೌರ್ಜನ್ಯ ಮತ್ತು ಅವರಿಗಾಗುವ ಅವಮಾನ ಸೇಡಿನ ಕಿಚ್ಚು ಮತ್ತು ದಲಿತರು ಜೀತ ಪದ್ಧತಿಯಿಂದ ಹೊರಬರಬೇಕು ಎಂದು ಯೋಚಿಸಿದಾಗ ಇದನ್ನು ಬಿಟ್ಟು ಬೇರೆಯಾವ ದಾರಿಯು ಕಾಣದೆ. ಆಕಾಶವೇ ಕಳಚಿ ಬೀಳುವಂತೆ ಚಿಂತಿಸುವ ಅಣ್ಣ ತಮ್ಮಂದಿರ ಚಿಂತಾಜನಕ ಪರಿಸ್ಥಿತಿಯ ಜೀತ ಪದ್ದತಿಯು ಓದುಗರಿಗೆ ಕನಿಕರ ಹುಟ್ಟುವಂತೆ ಮಾಡುತ್ತದೆ.

ಕೆಂಪಕ್ಕ ತನ್ನ ಬದುಕು ಕಟ್ಟಿಕೊಳ್ಳಲು ಪಟ್ಟ ಪರಿಶ್ರಮ ಯೋಚನೆಗೆ ನಿಲುಕದ್ದು. ತನ್ನ ಮಗನನ್ನು ಜೀತ ಎನ್ನುವ ದುಷ್ಟ ಪದ್ಧತಿಗೆ ದೂಡಬಾರದು ತಾನು ಎಷ್ಟೇ ಕಷ್ಟ ಅನುಭವಿಸಿದರೂ ಸರಿಯೇ ತನ್ನ ಮಗ ಚನ್ನಣ್ಣ ಮಾತ್ರ ಕಷ್ಟಕ್ಕೆ ಸಿಲುಕಬಾರದು ಎಂದು ಕೆಂಪಕ್ಕ ಪಟ್ಟ ಕಷ್ಟ ಅಷ್ಟಿಷ್ಟಲ್ಲ. ಸಾಹುಕಾರ ವೀರಭದ್ರಯ್ಯನವರ ಜೀತದ ಕಪಿಮುಷ್ಠಿಯಿಂದ ತನ್ನ ಮಗನನ್ನು ರಕ್ಷಿಸಲು ತನ್ನ ಓಲೆ ಕಡಗವನ್ನ ಅಡವಿಟ್ಟು ಅವರ ಬಡ್ಡಿ ಸಾಲದ ಹಣವನ್ನು ತೀರಿಸುತ್ತಾಳೆ. ಚನ್ನಣ್ಣನಿಗೆ ಮದುವೆ ಮಾಡುತ್ತಾಳೆ. ದೇವರಾಜ ಪುಟ್ಟರಾಮ ಎನ್ನುವ ಮುದ್ದಾದ ಮೊಮ್ಮಕ್ಕಳನ್ನು ಕೆಂಪಕ್ಕನ ಮಡಿಲಿಗೆ ಹಾಕಿ ಸೊಸೆ ಜವರಾಯನ ಮಡಿಲಿಗೆ ಸೇರಿಬಿಡುತ್ತಾಳೆ. ಒಟ್ಟಾರೆಯಾಗಿ ಈ ಕಥೆಯ ವಸ್ತು ತಾಯಿ ತನ್ನ ಮತ್ತು ಮಕ್ಕಳ ಬದುಕು ಕಟ್ಟಿಕೊಳ್ಳಲು ಆಕೆ ಪಡುವ ಪರಿಶ್ರಮ, ಅವಳು ಅನುಭವಿಸುವ ನೋವು, ಊರಿನ ಸಾಹುಕಾರರೊಡನೆ ಆಕೆ ದಿಟ್ಟತನದಿಂದ ನಡೆದುಕೊಳ್ಳುವ ರೀತಿ, ಚನ್ನನನ್ನು ಜೀತಕ್ಕೆ ಇರಿಸಿಕೊಳ್ಳಲು ವೀರಭದ್ರಯ್ಯನವರು ಮಾಡುವ ಸಂಚು ಈ ಎಲ್ಲಾ ಪ್ರಮುಖ ಅಂಶಗಳು ಕಥೆಯ ವಸ್ತುವಾಗಿವೆ.

ಗರ್ಜನೆ ಕಥಾ ಸಂಕಲನದಲ್ಲಿ ಬರುವ ಮತ್ತೊಂದು ಕಥೆ ಕಳೆ . ಈ ಕಥೆಯ ಪ್ರಮುಖ ಕಥಾ ವಸ್ತು ಕೃಷಿಯೇ ಆಗಿದ್ದು ಊರಿನ ಗೌಡರ ದೌರ್ಜನ್ಯ ಹಣದ ಅಮಲಿನಿಂದ ಊರಿನ ಜನರ ಜೊತೆಯಲ್ಲಿ ಅವರು ನಡೆದುಕೊಳ್ಳುವ ರೀತಿ, ಶೋಷಿತ ವರ್ಗದ ಹೆಣ್ಣು ಮಗಳಾದ ಕೆಂಪಿಯನ್ನು ತಮ್ಮ ಅನೈತಿಕ ಸಂಬಂಧಕ್ಕೆ ಬಳಸಿಕೊಂಡು ಪ್ಲೇಗು ಬಂದಾಗ ಆಕೆಯನ್ನು ತಿರಸ್ಕರಿಸಿದ್ದು, ಗೌಡರು ತಮ್ಮ ಹತ್ತು ಎಕರೆ ಜಮೀನು ಸುತ್ತ ಮುತ್ತ ಯಾರಿಗೂ ಇಲ್ಲ ಎಂದು ಬೀಗುವುದು, ಗೌಡರ ತಮ್ಮ ರಾಮದಾಸ ಸನ್ಯಾಸ ದೀಕ್ಷೆಯನ್ನು ತೊಟ್ಟಿದ್ದು ಎಲ್ಲ ಆಸ್ತಿಯೂ ಗೌಡರ ಪಾಲಿಗೇ ದಕ್ಕಿದ್ದು, ತಮ್ಮ ಹತ್ತು ಎಕರೆ ಕೃಷಿ ಜಮೀನಿನಲ್ಲಿ ದುಡಿಮೆ ಮಾಡಿಸಿಕೊಂಡು ತಾವು ಮಾತ್ರ ಮುಂದುವರೆದದ್ದು ಈ ಕಥೆಯ ವಸ್ತುವಾಗಿದೆ.

ರಾಮಣ್ಣ ರವರು ಬರೆದಿರುವ ಕಥೆಗಳಲ್ಲಿ ಗರ್ಜನೆ ಯು ಪ್ರಮುಖವಾಗಿದ್ದು ಸಮಾಜದಲ್ಲಿ ವ್ಯಕ್ತಿ ಅನುಭವಿಸಿದ ಅವಮಾನ ನೋವುಗಳನ್ನು ನಿವಾರಿಸಿಕೊಳ್ಳಲು ಮಾಡಿದೆ ಪ್ರಯತ್ನವನ್ನು ಗರ್ಜನೆಯಲ್ಲಿ ಕಾಣುತ್ತೇವೆ. ಊರಿನ ಪಟೇಲರು ಎನಿಸಿಕೊಂಡವರು ಮರಿನಂಜನ ಜನ್ಮಕ್ಕೆ ಕಾರಣರಾಗಿದ್ದರೂ ಸಹ ಸ್ವಂತ ಮಗನನ್ನೇ ಕೂಲಿ ಆಳಿನಂತೆ ಮನೆಯಲ್ಲಿಯೇ ಇಟ್ಟು ಕೊಂಡು ಪಶುವಿನಂತೆ ನೋಡುವುದು ಇಲ್ಲಿ ಪಟೇಲರ ಅಮಾನವೀಯತೆ ಓದುಗರನ್ನು ಬೆಚ್ಚಿ ಬೀಳಿಸುತ್ತದೆ.

ರಾಮಣ್ಣ ಅವರ ಹರಕೆಯ ಹಣ ಕಥೆಯಲ್ಲಿ ಬರುವ ಸನ್ನಿವೇಶವು ಊರಿನ ಮುಖಂಡರು, ಎಂ.ಎಲ್.ಎ. ಗಳು ದಲಿತರನ್ನು ಶೋಷಿಸುವ ಮತ್ತು ಪಟೇಲರು ಶ್ಯಾನುಭೋಗರು ದಲಿತರನ್ನು ಅಗತ್ಯಕ್ಕೆ ತಕ್ಕಂತೆ ಬಳಸಿಕೊಳ್ಳುವುದನ್ನು ಒಳಗೊಂಡಿದ್ದು, ಮಂಡ್ಯ ಜಿಲ್ಲೆಯ ಮಲ್ಲನಾಯಕನಹಳ್ಳಿಯಲ್ಲಿ ದಲಿತರ ಮೇಲೆ ನಡೆದ ದೌರ್ಜನ್ಯ ಕಥೆಯಲ್ಲಿ ಒಳಗೊಂಡಿದೆ. ಊರಿನಲ್ಲಿರುವ ದುಂಡಿಗಮ್ಮ, ಮಾರಮ್ಮ, ಹುಚ್ಚಮ್ಮ ದೇವಾಲಯಗಳಿಗೆ ದಲಿತರನ್ನೇ ಗುಡ್ಡರನ್ನಾಗಿ (ಪೂಜಾರಿ) ನೇಮಿಸಿ ದೇವಾಲಯಕ್ಕೆ ಬರುವ ಯಾವುದೇ ರೀತಿಯ ಆದಾಯವನ್ನು ಗುಡ್ಡರಿಗೆ ದಕ್ಕದಂತೆ ಮಾಡಿ ಊರಿನ ಪಟೇಲರೇ ಎಲ್ಲವನ್ನು ನುಂಗಿ ನೀರು ಕುಡಿಯುತ್ತಿರುತ್ತಾರೆ. ದಲಿತರಲ್ಲಿ ಶಿಕ್ಷಿತನಾದ ಸುಮಾನಿಯ ತಿಳುವಳಿಕೆಯಿಂದಾಗಿ ಚಿಟ್ಟೆಯು ದಾಂಡಿಗಮ್ಮನ ದೇವಾಲಯದ ಹಣವನ್ನು ಕೇಳಿದಾಗ ಉಂಟಾದ ಉದ್ವಿಗ್ನ ಪರಿಸ್ಥಿತಿಯನ್ನು ಲೇಖಕರು ಈ ಕಥೆಯಲ್ಲಿ ಎಳೆ ಎಳೆಯಾಗಿ ಹೆಣೆದಿದ್ದಾರೆ. ದಲಿತರು, ಕೆಳವರ್ಗದವರು, ಸಹಜವಾದ ಸಾಮಾಜಿಕ ನ್ಯಾಯಕ್ಕೆ ಒತ್ತಾಯಿಸಿದಾಗೆಲ್ಲ ಸಂಘರ್ಷ ಭುಗಿದೇಳುತ್ತದೆ.

ಕಕರನ ಯುಗಾದಿ ಕಥೆಯಲ್ಲಿ , ಆತ ಮತ್ತು ಆತನ ಕುಟುಂಬ ಸದಸ್ಯರು ಬಡತನವೆಂಬ ಬೆಂಕಿಯಲ್ಲಿ ಬಿದ್ದು ಅನುಭವಿಸುವ ವ್ಯಥೆ, ಊಟವಿಲ್ಲದೆ ಹಸಿವಿನಿಂದ ದಮ್ಮು ಬಂದು ನರಳುತ್ತಿರುವ ಆತನ ಹೆಂಡತಿ ಮಕ್ಕಳು ಮತ್ತೊಂದೆಡೆ ಜೋಯಿಸರು ಸಕಲ ಸಂಪತ್ತನ್ನು ಹೊಂದಿ ಸ್ವರ್ಗಕ್ಕೆ ಮೂರೇ ಗೇಣು ಎನ್ನುವಂತಿದ್ದರೂ ಸಂಸಾರದಲ್ಲಿ ಸುಖವಿಲ್ಲ, ಮಕ್ಕಳಿಲ್ಲ ಎನ್ನುವ ಕೊರಗು, ಇಡೀ ಊರಿಗೆ ಊರೇ ಯುಗಾದಿ ಹಬ್ಬದ ಸ್ವಾಗತಕ್ಕೆ ಕಾದು ಕುಳಿತಿದ್ದರೆ, ಕಕರನಿಗೆ ಮಾತ್ರ ಹಬ್ಬವು ಶಾಪವೆಂಬಂತೆ ಕಾಡುತ್ತದೆ. ಜೋಯಿಸರ ಮನೆಯಲ್ಲಿ ತನ್ನ ಮಗನನ್ನು ಜೀತಕ್ಕೆ ಕಳುಹಿಸಿ ಆ ಹಣದಿಂದ ಹಬ್ಬವನ್ನು ಆಚರಿಸಲು ಯೋಚಿಸುತ್ತಾನೆ. ಹಣಕ್ಕಾಗಿ ಅಂಗಲಾಚಿ ಜೋಯಿಸರ ಮನೆ ಬಳಿ ಹೋದಾಗ ಜೋಯಿಸರ ಹೆಂಡತಿಯು ಬಾವಿಗೆ ಬಿದ್ದುದನ್ನು ಕಂಡು ಪ್ರಾಣ ರಕ್ಷಣೆ ಮಾಡಲು ಹೋಗಿ ತನ್ನ ಪ್ರಾಣವನ್ನೇ ಕಳೆದು ಕೊಂಡಾಗ ಊರಿನ ಜನರು ಸಾವಿಗೂ ಜಾತಿಯ ಬಣ್ಣವನ್ನು ಹಚ್ಚುವುದನ್ನು ಈ ಕಥೆಯಲ್ಲಿ ಕಾಣಬಹುದಾಗಿದೆ.

ಪಾತ್ರಗಳು:

ರಾಮಣ್ಣ ಅವರ ಮಳೆಗೆರೆಯಿತು ಬಾನು ಹಸುರಾಯಿತು ಮನ ಈ ಕಥೆಯಲ್ಲಿ ಬರುವ ಎರಡು ಮುಖ್ಯ ಪಾತ್ರಗಳು ಪುಟ್ಟರಾಮ ಮತ್ತು ಸಣ್ಣ ಬಾಲ್ಯದಿಂದಲೂ ಒಟ್ಟಿಗೆ ಅಣ್ಣ ತಮ್ಮಂದಿರಂತೆ ಜೊತೆಯಲ್ಲೇ ಬೆಳೆದವರು ಸಣ್ಣನ ತಾಯಿ ಪುಟ್ಟರಾಮನನ್ನು ತನ್ನ ಸ್ವಂತ ಮಗನಂತೆಯೇ ಕಾಣುತ್ತಿದ್ದಳು. ಇವರಿಬ್ಬರ ಸ್ನೇಹವನ್ನು ಸಹಿಸದ ಕೆಂಪ ದ್ವೇಷವೆಂಬ ಬೆಂಕಿಯನ್ನು ಹೊತ್ತಿಸಿ ತನ್ನ ಬೇಳೆಯನ್ನು ಬೇಯಿಸಿಕೊಂಡ. ಸಣ್ಣ ಪುಟ್ಟರಾಮನ ಹುಲ್ಲಿನ ಮೆದೆಗೆ ಬೆಂಕಿ ಬಿದ್ದಿದ್ದ ಸಂದರ್ಭದಲ್ಲಿ ತನ್ನ ಪ್ರಾಣದ ಹಂಗನ್ನು ತೊರೆದು ಹುಲ್ಲಿನ ಮೆದೆಯ ಬೆಂಕಿಯನ್ನು ಆರಿಸಿದ. ಅದೆಲ್ಲವನ್ನು ಮರೆತು ಕೆಂಪನ ಮಾತನ್ನು ಕೇಳಿ ಸಣ್ಣ ಮತ್ತು ಕುಟುಂಬದವರ ಎಲ್ಲಾ ಸಹಾಯವನ್ನು ಗಾಳಿಗೆ ತೂರಿ ಸ್ನೇಹವೆಂಬ ಬಂಧವನ್ನು ಸೇಡನ್ನಾಗಿ ಮಾರ್ಪಡಿಸಿಬಿಟ್ಟನು. ಕಿತ್ತರೂ ಬಿಡದಂತಿದ್ದ ಈ ಇಬ್ಬರೂ ಒಂದು ಸಣ್ಣ ವಿಷಯಕ್ಕೆ ಒಳಗೊಳಗೇ ಕತ್ತಿ ಮಸೆಯುತ್ತ ಪಾರ್ಟಿ ಕಟ್ಟಿಕೊಂಡರು. ಪುಟ್ಟರಾಮನ ಗದ್ದೆಯೆಲ್ಲ ಮಳೆಯ ನೀರಿನಲ್ಲಿ ಕೊಚ್ಚಿ ಹೋಗುತ್ತಿದ್ದಾಗ ಜೋರು ಮಳೆಯನ್ನೂ ಲೆಕ್ಕಿಸದೆ ಒಂದು ಮಾರುಉದ್ದ ತವರಿಯನ್ನು ಕಟ್ಟಿ ಕಾಲುವೆಯಿಂದ ತುಂಬಿ ಬಂದ ಮಳೆಯ ನೀರೆಲ್ಲವೂ ಹಳ್ಳಕ್ಕೆ ಹರಿಯುವಂತೆ ಮಾಡಿದ ಇದನ್ನು ಕಂಡ ಪುಟ್ಟರಾಮನ ಸೇಡು ಹುದುಗಿ ಹೋಯಿತು. ತನ್ನ ತಪ್ಪಿನ ಅರಿವಾಯಿತು. ಇವರಿಬ್ಬರ ಸ್ನೇಹವು ಮತ್ತೆ ಚಿಗುರೊಡೆಯಿತು.

ಬೆಸಗರಹಳ್ಳಿ ರಾಮಣ್ಣ ಅವರು ರಚಿಸಿರುವ ಪ್ರಮುಖ ಕಥೆಗಳಲ್ಲಿ ಸುಗ್ಗಿಯೂ ಒಂದಾಗಿದ್ದು, ಗ್ರಾಮ್ಯ ಬದುಕಿನ ಜನರ ಆಶೋತ್ತರಗಳು ಅವರು ನಂಬಿರುವ ಗ್ರಾಮ ದೇವತೆ ಯಲ್ಲವ್ವನ ಮಹಿಮೆ, ಇದರ ಜೊತೆಗೆ ಕೆಂಪ ಮತ್ತು ಮರಿಕಾಳರಂತಹ ವ್ಯಕ್ತಿಗಳ ಅವಿವೇಕತನವನ್ನು ಇಲ್ಲಿ ಕಾಣಬಹುದು.

ಶಿವರಾಮಣ್ಣ ಮನೆಯ ಯಜಮಾನರು , ಮರ್ಯಾದಸ್ಥರು ಇವರಿಗೆ ಇಬ್ಬರು ಮಕ್ಕಳು ದೊಡ್ಡ ಮಗ ನಾಗರಾಜು ಮೈಸೂರಿನಲ್ಲಿ ಓದುತ್ತಿದ್ದಾನೆ. ಮಗಳು ಕಿರಿಯವಳು, ಯಶೋಧಾ ಶಿವರಾಮಣ್ಣನ ತಮ್ಮ ಪುಟ್ಟರಾಮು ಆತನ ಹೆಂಡತಿ ಸರೋಜ ಚೊಚ್ಚಲ ತುಂಬು ಗರ್ಭಿಣಿ ಈ ಇಬ್ಬರು ಗಂಡು ಮಕ್ಕಳ ವಯಸ್ಸಾದ ತಾಯಿ, ಈ ಎಲ್ಲರೂ ಕುಟುಂಬದ ಸದಸ್ಯರು ಇವರ ಸಂಸಾರ ಯಾವುದೇ ತೊಂದರೆಯಿಲ್ಲದೆ ನಿರಾಯಾಸವಾಗಿ ಸಾಗುತ್ತಿರುತ್ತದೆ. ಈ ಚಿನ್ನದಂತಹ ಸಂಸಾರದ ಮೇಲೆ ಕೆಂಪ ಮರಿಕಾಳರ ದುಷ್ಟ ಕಣ್ಣು ಬಿದ್ದು ಪುಟ್ಟರಾಮುವಿನ ಮನಸ್ಸು ಒಡೆದು ಮನೆಯು ಇಬ್ಭಾಗವಾಗಲು ಪ್ರಾರಂಭವಾಗುತ್ತದೆ. ಶಿವರಾಮಣ್ಣರ ಒಳ್ಳೆಯ ತನ, ಅವರ ಪತ್ನಿಯ ದೈವಭಕ್ತಿ, ತಾಯಿಯ ಆಶೀರ್ವಾದ ಗ್ರಾಮ ದೇವತೆ ಯಲ್ಲವ್ವನ ಕೃಪೆಯಿಂದ ಮನೆ ಮನಸ್ಸುಗಳು ಕೊನೆಗೆ ಒಂದಾಗಿ ಎಲ್ಲರೂ ಸಂತೋಷದಿಂದಿರುತ್ತಾರೆ. ಪುಟ್ಟರಾಮನಿಗೆ ತಾನು ಮಾಡಿದ ತಪ್ಪಿನ ಅರಿವಾಗುತ್ತದೆ. ಕೆಂಪ ಕರಿಕಾಳ ತಮ್ಮ ಬೇಳೆ ಬೇಯಿಸಲು ಸಾಧ್ಯವಾಗದೇ ಸಪ್ಪೆ ಮುಖ ಮಾಡಿಕೊಳ್ಳುವುದು ಈ ಎಲ್ಲವನ್ನು ಸುಗ್ಗಿ ಕತೆಯು ಒಳಗೊಂಡಿದೆ.

ಗ್ರಾಮ್ಯ ಬದುಕಿನ ಅನಾವರಣ, ಬರಡು ಭೂಮಿ ಹೊಂದಿರುವ ಕುಟುಂಬದಲ್ಲಿ ಹುಟ್ಟಿದ ಗಂಡು ಮಕ್ಕಳ ಶೋಚನೀಯ ಪರಿಸ್ಥಿತಿಯನ್ನು ಜೀತ ಕಥೆಯಲ್ಲಿ ರಾಮಣ್ಣನವರು ಬಿಂಬಿಸಿದ್ದು, ಹೆತ್ತ ಮಕ್ಕಳಿಗೆ ಒಂದು ಹೊತ್ತು ಗಂಜಿಯನ್ನು ಕೊಡಲು ಸಾಧ್ಯವಾಗದೇ ಕಣ್ಣೀರಿಡುವ ತಂದೆ ತಾಯಿಯರು ಒಂದು ಕಡೆಯಾದರೆ ದುಡ್ಡಿನ ಮದದಿಂದ, ಅಧಿಕಾರದ ಅಮಲಿನಲ್ಲಿ ಜನರನ್ನು ಶೋಷಿಸುವ ಸಾಹುಕಾರ್ ದೇವೀರಯ್ಯನವರ ಪಾತ್ರ ಜೀತ ಪದ್ಧತಿಯ ಜೀವಂತಿಕೆಗೆ ಸಾಕ್ಷಿಯಾಗಿದೆ.

ಶಿಕ್ಷಣದಿಂದ ವಂಚಿತವಾಗಿ ಜೀತವೆಂಬ ಅನಿಷ್ಟ ಬಲೆಗೆ ಸಿಲುಕಿ ತಮ್ಮ ಬಾಲ್ಯದ ಬದುಕಿನ ತಿರುಳನ್ನು ಸವಿಯ ಚಿಕ್ಕರಾಮ ಮತ್ತ ಪುಟ್ಟಲಿಂಗನ ಪಾತ್ರ ಎಂತಹವರಿಗೂ ಅಯ್ಯೋ ಎನ್ನುವಂತೆ ಮಾಡುತ್ತದೆ. ಮತ್ತೊಂದು ಕಡೆ ಚಿಕ್ಕರಾಮನ ಅಣ್ಣ ಪುಟ್ಟಸ್ವಾಮಿ ದನಗಳಿಗಿಂತಲೂ ಕಡೆಯಾಗಿ ತನ್ನ ತಮ್ಮನನ್ನು ಗದ್ದೆ ಬಯಲಿನಲ್ಲಿ ಓಡಾಡಿಸಿಕೊಂಡು, ಕಬ್ಬಿನ ಗದ್ದೆ ಹೊಕ್ಕರೂ ಬಿಡದೆ ಬೆದರಿಸಿ, ಬೈದು, ಹೊರಗಳೆದು ಹೊಡೆದು ಹಂಗಿಸಿದುದನ್ನು ನೆನೆದು ಮನ್ಸನ ಹೇಸಿಗೆಯಾಗಿ, ಥೂ! ಇಂಥ ಅನಿಷ್ಟ ಬಾಳು ಬಾಳಬಾರದು. ಈ ಮನಸ್ಸಿನ ಜನ್ಮವೇ ಬ್ಯಾಡ, ತಿರ್ಗ ಹುಟ್ಟಿದರೆ ಮರವಾಗೋ, ಕಲ್ಲಾಗೋ, ಮೂಗು ಬಸವನಾಗೋ ಹುಟ್ಟಬೇಕು. ಈ ಮನಸ್ಸಿನ ಜನ್ಮ ಏಳೇಳು ಜನ್ಮಕ್ಕೂ ಬ್ಯಾಡ ಎನ್ನುವಂತಹ ಪುಟ್ಟಸ್ವಾಮಿಯ ಮಾತು ಇಲ್ಲಿ ಓದುಗರ ಕರುಣೆಯ ಕವಲೊಡೆಯುವಂತೆ ಮಾಡುವಂತದ್ದು.

ರಾಮಣ್ಣ ಅವರ ಗರ್ಜನೆ ಕಥಾ ಸಂಕಲನದಲ್ಲಿ ಬರುವ ಕತೆ ಅವು ಈ ಕಥೆಯ ಕಥಾ ನಾಯಕಿ ಕೆಂಪಕ್ಕ ಆಕೆ ಗಂಡನನ್ನು ಕಳೆದುಕೊಂಡು ವಿಧವೆಯಾದರೂ ಸಹ ಛಲದಿಂದ ದುಡಿದು ಬದುಕಿದ ಹೆಂಗಸು. ಸಾಹುಕಾರ್ ವೀರಭದ್ರಯ್ಯನವರು ಮನೆಯ ಒಳ ಬಂದು ಅಸಲು ಬಡ್ಡಿಯನ್ನು ಕೇಳಿದಾಗ ಅಸಲು ಮಾತ್ರ ಕೊಡುವೆ. ಬಡ್ಡಿ ಕೊಡಲಾರೆ ಎಂದು ಅಂಗಲಾಚಿ ಬೇಡಿದರೂ, ಸಾಹುಕಾರ್ ವೀರಭದ್ರಯ್ಯನವರು ಬಡ್ಡಿಕೊಟ್ಟೇ ಕೊಡಬೇಕು ಇಲ್ಲದಿದ್ದರೆ ನಿನ್ನ ಮಗ ಚನ್ನಣ್ಣನನ್ನು ನನ್ನ ಮನೆಯಲ್ಲಿ ಎರಡು ವರ್ಷ ಜೀತಕ್ಕಿರಿಸು ಎಂದಾಗ ನೀವು ಆ ಮಾತನ್ನು ವಾಪಸ್ಸು ತಗೋಳಿ ಇನ್ನೊಂದು ಬಾರಿ ಜೀತಕ್ಕಿರಿಸು ಎನ್ನುವ ಮಾತಾಡ್‌ಬೇಡಿ ನಾಳೆ ಬನ್ನಿ ನಿಮ್ ಬಡ್ಡಿ ಬಿಸಾಕ್ತೀನಿ ಎಂದು ತನ್ನ ಓಲೆ ಕಡಗವನ್ನು ಅಡವಿಟ್ಟು ವೀರಭದ್ರಯ್ಯ ನವರ ಬಡ್ಡಿ ಹಣವನ್ನು ಕೊಟ್ಟು ತೀರಿಸುತ್ತಾಳೆ.

ಕೆಂಪಕ್ಕನ ಏಕಮಾತ್ರ ಪುತ್ರ ಚನ್ನಣ್ಣ ಆತನ ಹೆಂಡತಿ ತೀರಿಕೊಂಡಿದ್ದು ದೇವರಾಜ, ಪುಟ್ಟರಾಮ ಇಬ್ಬರು ಗಂಡು ಮಕ್ಕಳು ಅಜ್ಜಿ ಕೆಂಪಕ್ಕನ ಆಸರೆಯಲ್ಲಿ ಬೆಳೆಯುತ್ತಿರುತ್ತಾರೆ. ಹಸುವಿನ ದಲ್ಲಾಳಿ ಕಚ್ಚೆನಿಂಗನದೂ ಒಂದು ಪಾತ್ರವಿದ್ದು ಅಷ್ಟೇನು ಮಹತ್ವವಿಲ್ಲ ಅನೈತಿಕ ಸಂಬಂಧದಿಂದಾಗಿ ಗಂಡನನ್ನು ಬಿಟ್ಟು ತವರು ಮನೆ ಸೇರಿರುವ ಪುಟ್ಟನಿಂಗಿಯ ಪಾತ್ರ ಮತ್ತೊಂದು ಬಾಲ್ಯದಲ್ಲಿಯೇ ತಾಯಿಯನ್ನು ಕಳೆದುಕೊಂಡು ಅವಳ ಪ್ರೀತಿಗಾಗಿ ಹಂಬಲಿಸುವ ಎಳೆದು ಕಂದಮ್ಮಗಳಾದ ದೇವರಾಜ ಮತ್ತು ಪುಟ್ಟರಾಮ ತಂದೆಯ ಕಡು ಕೋಪಕ್ಕೆ ಸಿಕ್ಕಿ ಚಬ್ಬೆಯ ಹೊಡೆತವನ್ನು ನೆನೆಸಿಕೊಂಡು ಅಳುವುದು ಅದನ್ನು

ಕಂಡು ಕೆಂಪಕ್ಕ ಮರುಗುವ ರೀತಿಯನ್ನು ರಾಮಣ್ಣ ಅವರು ಅವರದೇ ಆದ ನೈತಿಕ ನೆಲೆಗಟ್ಟಿನಲ್ಲಿ ಚಿತ್ರಿಸಿರುವುದು. ಪ್ರಶಂಸನೀಯ ಬಾಯಿಯಿಲ್ಲದ ಮೂಕ ಪ್ರಾಣಿ ತನ್ನ ಅವಳಿ ಕರುಗಳಿಗಾಗಿ ಕಟ್ಟಿರುವ ಗೊಟದ ಸಮೇತ ಕಿತ್ತುಕೊಂಡು ಓಡಿಬರುವಾಗ ಗೂಟವು ಮುಂಗಾಲುಗಳಿಗೆ ತಗಲಿ ಅಲ್ಲಲ್ಲಿ ರಕ್ತ ಬಂದರೂ ಲೆಕ್ಕಿಸದೆ ತಾಯ್ತನದ ಹಂಬಲದಲ್ಲಿ ತನ್ನ ಕರುಗಳ ಬಳಿ ಓಡಿ ಬರುತ್ತದೆ. ಕರುಗಳು ಹಗ್ಗವೇ ಕಿತ್ತು ಬರುವಂತೆ ತುಯ್ಯಲಾರಂಬಿಸುತ್ತವೆ. ಕರುಗಳು ಬಾಲ ಕುಣಿಸುತ್ತಾ ಕೆಚ್ಚಲಿಗೆ ಬಾಯಿ ಹಾಕಿದವು ಓಡಿಬಂದ ದಣಿವನ್ನು ಲೆಕ್ಕಿಸದೇ ಹಸು ತನ್ನ ಕರುಗಳ ಮೈಯನ್ನು ಪ್ರೀತಿಯಿಂದ ನೆಕ್ಕಲಾರಂಭಿಸಿತು. ಈ ಪ್ರಸಂಗವು ತಾಯಿ ಮಕ್ಕಳ ಅಮೋಘ ಸಂಬಂಧವನ್ನು ಕಣ್ಣಿಗೆ ಕಟ್ಟಿಕೊಡುತ್ತವೆ.

ರಾಮಣ್ಣ ಅವರು ಶ್ರಮದ ಹಿನ್ನೆಲೆಯಲ್ಲಿ ರಚಿಸಿರುವ ಮತ್ತೊಂದು ಕಥೆ ಕಳೆ ಈ ಕಥೆಯಲ್ಲಿ ಹಲವು ಪಾತ್ರಗಳು ಅದರಲ್ಲಿ ಊರಿನ ಗೌಡರಾದ ಶಿವಲಿಂಗೇಗೌಡರ ಪಾತ್ರ ಮುಖ್ಯವಾದುದು ಜೊತೆಗೆ ಇವರ ಆಳು ನಿಂಗಣ್ಣನ ಪಾತ್ರ ಕಥೆಯ ಆರಂಭದಿಂದ ಹಿಡಿದು ಕಥೆಯ ಅಂತಿಮದವರೆಗೂ ಮುಖ್ಯವಾಗಿರುತ್ತದೆ.

ಶಿವಲಿಂಗೇಗೌಡರ ಪತ್ನಿ ತಾಯಕ್ಕನ ಪಾತ್ರ ಅಷ್ಟಾಗಿ ಮುಖ್ಯ ಎನಿಸದಿದ್ದರೂ ಗೌಡರು ಊರಿನಲ್ಲಿ ಇವಳೇ ನನ್ನ ಭಾಗ್ಯದ ದೇವರು ಎಮದು ಹೇಳಿಕೊಂಡಿದ್ದೂ ಉಂಟು. ತಾಯಕ್ಕನವರು ತಮ್ಮ ಹೆಸರಿಗೆ ತಕ್ಕಂತೆ ಒಂಭತ್ತು ಮಕ್ಕಳಿಗೆ ಬಿಡುವಿಲ್ಲದೆ ಜನ್ಮಕೊಟ್ಟು ಮೊದಲನೇಯ ಮಗ ಪುಟ್ಟಸ್ವಾಮಿ ಹಾಗೂ ಕೊನೆಯ ಮಗಳು ಲಲಿತಾಳನ್ನು ಬಿಟ್ಟು ಉಳಿದ ಮಕ್ಕಳು ತೀರಿಕೊಂಡ ನೋವು ಬೇರೆ ಇಷ್ಟಾಗಿ ಒಂದು ದಿನವೂ ಗೌಡರಿಗೆ ಹಿಂದಿರುಗಿ ಮಾತನಾಡಿದವರಲ್ಲ.

ಬೇಲೂರಿ ಗೌಡರ ಹೊಲದಲ್ಲಿ ಕೆಲಸ ಮಾಡುವ ಕೂಲಿ ಆಳು ಈಕೆಯ ಮಗಳು ಕೆಂಪಿ ಗಂಡನನ್ನು ಬಿಟ್ಟು ಅಪ್ಪನ ಮನೆಯನ್ನೇ ಬಂದು ಸೇರಿಕೊಂಡಾಗ ಗೌಡರು ಕೆಂಪಿಯನ್ನು ಬಯಸಿದಾಗ ಒಪ್ಪಿಗೆ ನೀಡುವುದು ಅನೀತಿಯ ಸಂಕೇತವಾಗಿದ್ದರೂ ಆಕೆಗೆ ಬೇರೆ ದಾರಿಯೇ ಇರಲಿಲ್ಲ. ಶಿವಲಿಂಗೇಗೌಡರ ತಮ್ಮ ರಾಮದಾಸ ಗುರುಬೋದನೆಯನ್ನು ಪಡೆದುಕೊಂಡು ಕೈ ಹಿಡಿದ ಹೆಂಡತಿಯನ್ನು ತವರು ಮನೆಗೆ ಕಳುಹಿಸಿ ಸನ್ಯಾಸಿಯಾಗಿ ಜೀವನ ನಡೆಸುತ್ತಿರುವುದು ಗೌಡರಿಗೆ ಬಿಡದ ತಲೆನೋವಾಗಿ ಕಾಡತೊಡಗಿತ್ತು.

ಸೊಸೈಟಿಯ ಸಾಲ ತೀರಿಸಲು ಆಗದೇ ಒದ್ದಾಡುತ್ತಿರುವ ಬೆಸ್ತರ ಲಕ್ಕಿಯನ್ನು ಗೌಡರು ಮೋಸಗೊಳಿಸಿ ಆತನ ಜಮೀನು ಖರೀದಿಗೆ ಮುಂದಾಗುವುದು ಗೌಡರ ದುರಾಸೆಗೆ ಹಿಡಿದ ಕನ್ನಡಿಯಾಗಿದೆ. ಗೌಡರು ತಮ್ಮ ಅಧಿಕಾರ, ಹಣ, ಕಾಪಾಡಿಕೊಳ್ಳುವ ಭರದಲ್ಲಿ ತಮ್ಮ ಮಗಳು ಲಲಿತಾಳಿಗೆ ಮದುವೆ ಮಾಡುವುದನ್ನೇ ಮರೆತು ಬಿಟ್ಟರು.

ವಯಸ್ಸಿಗೆ ಮೀರಿ ಹುಲುಸಾಗಿ ಬೆಳೆದಿರುವ ಅವಳಿಗೇ ಡಾಕ್ಟರೋ, ಇಂಜಿನಿಯರನ್ನೋ ಹುಡುಕಿ ಮದುವೆ ಮಾಡಬೇಕು ಎಂದುಕೊಳ್ಳುತ್ತಾರೆ. ಆದರೆ ವಿಧಿಯೇ ಬೇರೊಂದನ್ನು ನಿರ್ಧರಿಸಿದಂತೆ ಗೌಡರ ಮನೆಯ ಕೆಲಸದ ಆಳು ನಿಂಗಣ್ಣನನ್ನು ಲಲಿತಾ ಮೋಹಿಸಿ ಆತನಿಗೆ ಒಲಿದಿರುವುದು ಗೌಡರ ಕಣ್ಣಿಗೆ ಬೀಳುತ್ತದೆ. ಗೌಡರಿಗೆ ಈ ಘಟನೆ ಒಮ್ಮೆಲೆ ಗರ ಸಿಡಿಲು ಬಡಿದಂತಾಗಿ ದಂಗಾಗಿ ನಿಂತಲ್ಲಿಯೇ ಮರಗಟ್ಟಿ ಹೋಗುತ್ತಾರೆ. ಈ ಎಲ್ಲಾ ಸನ್ನಿವೇಶವೂ ಒಂದೊಂದು ಸಂಗತಿಯನ್ನು ವಿವರಿಸುತ್ತಾ ಹೋಗುತ್ತವೆ. ಗೌಡರು ತಮ್ಮ ಘನತೆಯನ್ನು ಉಳಿಸಿಕೊಳ್ಳಲು ಇಷ್ಟು ವರ್ಷ ಪಟ್ಟಿದ್ದ ಶ್ರಮ ತಮ್ಮ ಮಗಳ ವಿಷಯದಲ್ಲಿ ನೀರಿನಲ್ಲಿ ಹೋಮ ಮಾಡಿದಂತಾಗಿದ್ದು, ಗೌಡರಿಗೆ ನುಂಗಲಾರದ ತುತ್ತಾಗಿ ಪರಿಣಮಿಸುವುದು ಈ ಕಥೆಯಲ್ಲಿ ಪ್ರಮುಖ ಅಂಶವಾಗಿದೆ.

ರಾಮಣ್ಣ ಅವರ ಗರ್ಜನೆ ಕಥೆಯ ಕಥಾ ನಾಯಕ ಮರಿನಂಜನ ಪಾತ್ರ ಹಿಂದುಳಿದ ವರ್ಗದವರು, ಅದರಲ್ಲೂ ಅನಾಥರಾದ ಅಸಹಾಯಕರ ಕೂಗಿನ ಪ್ರತೀತವಾಗಿದೆ.

ನಿಂಗಣ್ಣನ ಮಗಳು ಪಾರ್ವತಿಯ ರೂಪ ಮದುವೆ ವಯಸ್ಸಿಗೆ ಬಂದಿರುವ ಮರಿನಂಜನ ಕಣ್ಣುಕುಕ್ಕುತ್ತದೆ. ಸಂಗಡಿಗ ಬೆಣಚ ಮರಿನಂಜನಿಗಿಂತ ವಯಸ್ಸಿನಲ್ಲಿ ಚಿಕ್ಕವನಾಗಿದ್ದು ಆತನ ಜೊತೆಯಲ್ಲಿ ಇರುತ್ತಿದ್ದ. ಗಿರಿಗಕ್ಕ ಪಾರ್ವತಿಯ ಪಕ್ಕದ ಮನೆಯಲ್ಲಿ ವಾಸವಾಗಿದ್ದು, ಮರಿನಂಜನನ್ನು ಹಿಂದು ಮುಂದು ಇಲ್ಲದ ಹಾದರಕ್ಕೆ ಹುಟ್ಟದೋನಿಗೆ ಪಾರ್ವತಿಯನ್ನು ಮದುವೆ ಮಾಡುವುದೇ ಎಂದು ಕೆನ್ನೆಗೆ ತಿವಿದಿದ್ದು, ಮರಿನಂಜನಿಗೆ ಸಹಿಸಲಾರದ ಅವಮಾನವಾಗಿ ಬಿಟ್ಟಿತ್ತು. ಅಲ್ಲದೇ ಮರಿನಂಜನನ್ನು ಕಣ್ಣು ಕಟ್ಟಿ ಕಾಡಿಗೆ ಬಿಟ್ಟಂತಾಯಿತು. ತನ್ನ ಜನ್ಮದ ಸತ್ಯವನ್ನು ಅರಗಿಸಿಕೊಳ್ಳಲು ಅಸಾಧ್ಯವಾಯಿತು.

ತನ್ನ ಕೆಲಸವನ್ನು ಮುಗಿಸಿ ಗಿರಿಗಕ್ಕ ಆಡಿದ ಮಾತುಗಳನ್ನೇ ನೆನೆಸಿಕೊಳ್ಳುತ್ತಾ ಮರಿನಂಜ ದೀಪವನ್ನು ಆರಿಸಿ. ಚಾಪೆಯ ಮೇಲೆ ಮೈ ಆನಿಸಿದ ಇಷ್ಟು ಹೊತ್ತಿನವರೆಗೂ ಇದ್ದ ಪಾರ್ವತಿಯ ಗುಂಗು, ಉಲ್ಲಾಸ, ಖುಷಿ ಎಲ್ಲವೂ ಗಿರಿಗಕ್ಕ ಹೇಳಿದ ಮಾತುಗಳನ್ನು ನೆನೆದುಕೊಂಡೊಡನೆಯೇ ಕರಗಿ ಹೋಯಿತು. ತನ್ನ ಹುಟ್ಟಿನ ಹಿನ್ನೆಲೆಯ ವಿಷಾದದ ಇತಿಹಾಸ ಎದುರು ನಿಂತಿತು. ತಾನು ಹುಟ್ಟುವುದಕ್ಕೆ ಮುಂಚೆಯೇ ಅವ್ವ ಎನಿಸಿಕೊಂಡವಳು ಗೊಟಕ್ ಎಂದಿದ್ದರೆ ಚಿಂತೆಯಿರಲಿಲ್ಲ ಎನಿಸಿತು. ಅವಳು ಇಟ್ಟ ಮರಿನಂಜ ಎನ್ನುವ ಹೆಸರು ಕಳೆದ ಮೂರು ವರ್ಷಗಳ ವರೆಗೂ ಕುರಿ ಕಾಯುವುದೇ ತನ್ನ ಕೆಲಸವಾಗಿದ್ದುದರಿಂದ ಕುರಿನಂಜ ಎಂದು ಬದಲಾದುದು, ಚಿಕ್ಕವರು ದೊಡ್ಡವರು ಎನ್ನದೆ ಕುರಿನಂಜ, ಕುರಿನಂಜ ಎಂದು ಕರೆದು ಬೊಟ್ಟು ಹಿಡಿದು ಹಂಗಿಸಿದಾಗ ಊರ ಮುಂದಿನ ಬಸವನ ಗುಡಿಯ ಕುದುರೆ ಕಲ್ಲಿನ ಮೇಲೆ ಕುಳಿತು ಬಿಕ್ಕುತ್ತ ಅಳುತ್ತಿದ್ದುದು ಎಲ್ಲ ನೆನಪಾಯಿತು. ಇದರ ಜೊತೆಗೆ ಗಿರಿಗಕ್ಕನ ಮಾತಿನ ಮೊನೆಯಿಂದ ಬಂದ ಅವ್ವನ ನೆನಪು ಮರಿನಂಜನ ಎದೆಯಲ್ಲಿ ಚಿಟುಕು ಮುಳ್ಳು ಆಡಿಸಿದಂತಾಗುತ್ತದೆ. ತನ್ನ ಅಪ್ಪ ಯಾರೆಂದು ತಿಳಿದ ರೀತಿಯೂ ಅವನು ಮರೆಯಲಾರದ್ದು. ಈ ಎಲ್ಲ

ಸಂಗತಿಗಳು ಮರಿನಂಜನನ್ನು ಕಾದ ಕಲ್ಲಿನ ಮೇಲೆ ಮಲಗಿದವನಂತೆ ಮಾಡಿತು. ಪಟೇಲರಿಗೆ ಎರಡನೇ ಹೆಂಡತಿ ತಂದರೂ ಮಕ್ಕಳಿಲ್ಲ ನ್ಯಾಯವಾಗಿ ನೋಡಿದರೆ ತಾನೇ ಅವರ ಮಗ ಅವರು ತನ್ನನ್ನು ನಡೆಸಿಕೊಳ್ಳುವ ರೀತಿಯನ್ನು ಕಂಡು ಮರಿನಂಜನ ಮೈ ಕೆಂಡವಾಯಿತು. ಹಾಕಿದ ಕತೆಗಳು ಇವೆ.

ಊರಿನ ಪಟೇಲರು ಎನಿಸಿಕೊಂಡ ಉಗ್ರೇಗೌಡರು, ಶ್ಯಾನುಭೋಗ ಶ್ಯಾಮಣ್ಣನವರು ಇಲ್ಲಿ ತಮ್ಮ ದಾರಿಯನ್ನು ಸುಗಮಗೊಳಿಸಿಕೊಳ್ಳಲು ಜಾತಿ ವ್ಯವಸ್ಥೆಯನ್ನು ಪ್ರಮುಖ ಅಸ್ತ್ರವನ್ನಾಗಿ ಮಾಡಿಕೊಂಡು ಒಡೆದು ಆಳುವ ಮನಸ್ಥಿತಿಯನ್ನು ಹೊಂದಿದ್ದರೆ ಬುಗುರಿ, ಕೆಂಪಿ, ಧೂಳಯ್ಯ, ಮೆಣಸ ಅದು ಅವರ ಅಧಿಕಾರ ಎಂದು ನಂಬಿ ಬದುಕುತ್ತಿರುವುದು ಒಂದು ಕಡೆಯಾದರೆ ಸುನಾಮಿ ಈ ಎಲ್ಲದಕ್ಕೂ ನಾಂದಿ ಹಾಡಿ ಕೆಂಪಿಯ ಮಗಳ ಚೆಲುವಿಯನ್ನು ಮದುವೆಯಗಲು ನಿರ್ಧರಿಸಿರುತ್ತಾನೆ. ಆದರೆ ಹಣದ ಆಮಿಷದಿಂದಾಗಿ ಪಟೇಲರು, ಶ್ಯಾನುಭೋಗರು,ಎಂ.ಎಲ್.ಎ ಗಳ ದುರಾಚಾರದಿಂದಾಗಿ ಸುನಾಮಿಯ ಲೆಕ್ಕಾಚಾರವೆಲ್ಲ ಬುಡಮೇಲಾಗಿ ಕೊನೆಗೆ ಅವನ ಕೊರಳಿಗೆ ಸುತ್ತಿಕೊಂಡಿತು.

ಬೆಸಗರಹಳ್ಳಿ ರಾಮಣ್ಣ ಅವರ ಕಕರನ ಯುಗಾದಿ ಕಥೆಯಲ್ಲಿಕಕರನ ಪಾತ್ರ ಪ್ರಮುಖವಾಗಿದ್ದು, ಮಳೆ ಬೆಳೆ ಇಲ್ಲದೇ ಬರದ ಬರಸಿಡಿಲಿಗೆ ಇಡೀ ಊರಿಗೆ ಊರೇ ತತ್ತರಿಸಿ ಹೋಗಿದ್ದು, ಈ ಊರಿನ ಜನರ ಕುಟುಂಬದಲ್ಲಿ ಕಕರನ ಕುಟುಂಬವು ಒಂದು ಹೊತ್ತಿನ ಗಂಜಿಗೂ ಗತಿ ಇಲ್ಲದೆ ಒದ್ದಾಡುತ್ತಿತ್ತು. ಆದರೆ ಜೋಯಿಸರ ಪುಣ್ಯ ಕಂಡು ಮುಂದಿನ ಜನ್ಮಕ್ಕಾದರೂ ಜೋಯಿಸನಾಗೆ ಹುಟ್ಟಬೇಕೆಂದುಕೊಳ್ಳುವುದು ಆತನ ಹಸಿವಿನ ಹಂಬಲಕ್ಕೆ ಸಾಕ್ಷಿಯಾಗುತ್ತದೆ.

ಕಕರನ ಅಸಾಹಯಕತೆಯನ್ನು ಕಂಡು ಗೇಲಿ ಮಾಡಿದ ದಿನಸಿ ಅಂಗಡಿಯ ಕುಳ್ಳನ ಮಾತುಗಳನ್ನು ಕಕರ ಕೇಳಿ ನೆಲ ನಡುಗಿದಂತಾದರೂ ಸಹ ತನ್ನ ಕಾಲುಗಳನ್ನು ಹತೋಟಿಗೆ ತಂದುಕೊಂಡು ನಾಳಾಕೆ ದುಡ್ಡು ಕೊಡ್ತೀನಿ ನಾಲ್ಕು ಸೇರು ಅಕ್ಕಿರಾಗಿ ಕೊಡು ಎನ್ನುವ ಮಾತಿನ ಹಿಂದೆ ಆತನ ಮಕ್ಕಳ ಹಸಿವು ನೆನಪಾಗುತ್ತದೆ. ಇಲ್ಲಿಕಕರನು ಅನುಭವಿಸಿದ ಅವಮಾನ, ಮಾಡಿದ ಕೋಪಗಳನ್ನು ಹೆಂಡತಿ ಮಕ್ಕಳ ಹಸಿವು ನುಂಗಿ ಹಾಕುತ್ತದೆ.

ಕಕರ ಸೌದೆಯನ್ನು ತಲೆ ಮೇಲೆ ಹೊತ್ತು ತಂದಾಗ ಸೌದೆಗೆ ಸಗಣಿ ನೀರು ಹಾಕಿ ಜೋಯಿಸರ ತಾಯಿ ಶುದ್ದ ಗೊಳಿಸುತ್ತಾರೆ, ದೂರ ನಿಲ್ಲು ಮೈಲಿಗೆ ಮಾಡಬೇಡ ಎನ್ನುತ್ತಾರೆ. ಆದರೆ ಸೊಸೆ ಬಾವಿಯಲ್ಲಿ ಬಿದ್ದಾಗ ಜಾತಿ ಮನೆ ಹಾಳಾಗ ಬಾವಿಗೆ ಹಾರಿ ನನ್ನ ಹೆಂಡತಿ ಪ್ರಾಣ ಉಳಿಸೋ ಕಕರ ಎಂದಾಗ ಸ್ವಾಮಿ , ಹಿಂದಿನ ಬಾಗಿಲು ಬೀಗ ಹಾಕಿದೆ ಬೀಗದ ಕೈ ತನ್ನಿ ಎಂದು ಕಕರ ಹೇಳುತ್ತಾನೆ. ಬೀಗ ಎಲ್ಲಿದೆಯೋ ದೇವರ ದೃಷ್ಟಿಯಲ್ಲಿ ಎಲ್ಲಾ ಒಂದೇ ಸಮಾನ ಮುಂದಗಡೆ ಬಾಗಿಲಿನಿಂದ ಓಡಿ ಬಾರೋ ! ಕಕರ ನನ್ನ ಹೆಂಡತಿಯನ್ನು ಬಾವಿಯಿಂದ ಮೇಲೆತ್ತೋ ಎಂದು ಅಂಗಲಾಚಿ ಬೇಡಿಕೊಂಡಾಗ ತನಗೆ ಎಲ್ಲಿ ಸಾಲ ಸಿಗುವುದಿಲ್ಲವೋ ಎನ್ನುವ ಭಯದಿಂದ ಬಾವಿಗೆ ಹಾರುತ್ತಾನೆ. ಹೊಟ್ಟೆಗೆ ಮೂರು

ನಾಲ್ಕು ದಿನದಿಂದ ಸರಿಯಾಗಿ ಊಟವಿಲ್ಲದೆ ನಿತ್ರಾಣಗೊಂಡಿದ್ದ ಕಕರ ಬ್ರಾಹ್ಮಣರ ಮನೆಯ ಬಲಶಾಲಿ ಮಹಿಳೆಯ ಬಿಗಿಯಾದ ಕೈ ಮುಷ್ಟಿಯಿಂದ ಬಿಡಿಸಿಕೊಳ್ಳಲಾಗದೆ ನೀರಿನಲ್ಲಿ ಮುಳುಗಿ ತನ್ನದಲ್ಲದ ತಪ್ಪಿಗೆ ಕಕರ ತನ್ನ ಪ್ರಾಣವನ್ನು ಕಳೆದುಕೊಂಡು ತನ್ನ ಜೀವನದ ಎಲ್ಲ ಕಷ್ಟಗಳನ್ನು ತನ್ನ ಗಂಡು ಮಕ್ಕಳಿಗೆ ಬಿಟ್ಟುಕೊಟ್ಟು, ತನ್ನನ್ನು ನಂಬಿಕೊಂಡಿದ್ದ ಕುಟುಂಬವನ್ನು ತಬ್ಬಲಿ ಮಾಡುವ ಸಂದರ್ಭ ದುರಂತಮಯವಾಗಿ ಮೂಡಿ ಬಂದಿದೆ.

ಜೋಯಿಸರನ್ನು ಕಂಡರೆ ಒಳಗೊಳಗೇ ಕತ್ತಿ ಮಸೆಯುವ ಶ್ಯಾನುಭೋಗರು ಹೊಲೇರವನು ಬ್ರಾಹ್ಮಣರ ಮನೆ ಹೊಕ್ಕರೆ ದೈವ ಸುಮ್ಮನಿರುತ್ತ? ನೋಡಿ ಏನು ಕತೆ ಆಯ್ತು ರಾಮ ರಾಮ! ಬ್ರಾಹ್ಮಣ ಹೆಂಗಸನ್ನು ಕೀಳು ಜಾತಿಯವನು ಮುಟ್ಟೋದು ಅಂದ್ರ ; ಬದುಕಬಾರದಪ್ಪ, ನಾವೆಲ್ಲ ಸಾಯಬೇಕು ಎಂದು ಸುತ್ತಮುತ್ತಲು ಜನರನ್ನು ಎತ್ತಿಕಟ್ಟುವುದು ಅವರ ಕೀಳುತನಕ್ಕೆ ಸಾಕ್ಷಿಯಾಗಿದೆ.

ಇಲ್ಲಿ ಕಕರನ ಶ್ರಮಕ್ಕೆ ಅರ್ಥವೂ ಇಲ್ಲ ಬೆಲೆಯೂ ಇಲ್ಲವಂತಾಗಿದೆ.

ಚಲುವನ ಪರಂಗಿ ಗಿಡಗಳು ಎನ್ನುವ ಕಥೆಯು ಮಂಡ್ಯ ಜಿಲ್ಲೆಯ ಸುಣ್ಣದಹಳ್ಳಿಯಲ್ಲಿ ನಡೆಯುವ ಪಂರಗಿ ಸಸ್ಯದ ಕ್ರಾಂತಿಯನ್ನು ಒಳಗೊಂಡಿದ್ದು ಮೂಗೂರನ ಮಗ ಚೆಲುವನ ಶ್ರಮದ ಪ್ರತಿಫಲವನ್ನು ಬಿಂಬಿಸುವ ಕಥೆಯಾಗಿದ್ದು. ಈ ಕಥೆಯಲ್ಲಿ ಭೂಮಿಗೆ ಹೆಚ್ಚು ಮಹತ್ವವನ್ನು ನೀಡಿದ್ದು ಭೂಮಿ ತಾಯಿಯನ್ನು ನಂಬಿ ಬದುಕುತ್ತಿರುವ ಮುಗೂರರಂತಹ ಅನೇಕ ಕೃಷಿಕರ ಬದುಕಿನ ದುಸ್ಥಿತಿಯ ಅವಸ್ಥೆಯನ್ನು ಈ ಕಥೆ ಕಣ್ಣಿಗೆ ಕಟ್ಟುತ್ತದೆ.

ಗೋವಿಂದಸ್ವಾಮಿಯಂತಹ ಆಸೆ ಬುರುಕ ವ್ಯಕ್ತಿಗಳಿಂದ ಪ್ರಕೃತಿಯ ವಿನಾಶವೇ ಹೊರತು ಬೇರೇನೂ ಇಲ್ಲ ಶಿಕ್ಷಣವನ್ನು ಮುಂದಿಟ್ಟುಕೊಂಡು ಶಾಲೆಗೆಂದು ಸರ್ಕಾರ ನೀಡಿರುವ ವಿದ್ಯುಚ್ಛಕ್ತಿ ಚಾಲಿತ ಪಂಪನ್ನು ರಕ್ಷಣೆಯ ನೆಪಒಡ್ಡಿ ತಮ್ಮ ತೋಟದ ಬಾವಿಗೆ ಜೋಡಿಸಿಕೊಂಡು ಕಳೆದ 3 ವರ್ಷಗಳಿಂದ ಅದರ ಉಪಯೋಗವನ್ನು ಗೋವಿಂದ ಸ್ವಾಮಿಯವರೇ ಪಡೆಯುತ್ತಿದ್ದದ್ದು, ಪೌಷ್ಠಿಕಾಂಶ ಯೋಜನೆಯ ಎಲ್ಲ ಉಪಯೋಗಗಳನ್ನು ಗೋವಿಂದ ಸ್ವಾಮಿಯವರು ಒಂದು ಚೂರು ಪೋಲಾಗದಂತೆ ಸಮರ್ಪಕವಾಗಿ ಬಳಸಿಕೊಂಡಿದ್ದು ಎಲ್ಲವೂ ಇಲ್ಲಿ ಮಾರ್ಮಿಕವಾಗಿ ಚಿತ್ರಣಗೊಂಡಿದೆ.

ಶಾಲಾಭಿವೃದ್ಧಿ ಸಮಿತಿಯ ಸಭೆ ಒಮ್ಮೆ ಅಪರೂಪಕ್ಕೆ ಸೇರಿದ್ದಾಗ ಇಡೀ ಯೋಜನೆಗೆ ಸವಾಲಾಗಿ ನಿಂತ ಬೇಲಿ ಮತ್ತು ಬಾಗಿಲು ವಿಷಯ ಚರ್ಚೆಗೆ ಬಂತು. ಇದೊಂದು ಸಣ್ಣ ವಿಚಾರ ಮನಸ್ಸು ಮಾಡಿದರೆ ಗ್ರಾಮಸ್ಥರೆಲ್ಲ ಒಂದೆರಡು ಗಂಟೆಗಳಲ್ಲಿ ಬಿದರಿನಗಳುಗಳಿಂದ ಬೇಲಿಯನ್ನು ಪೂರೈಸಬಹುದೆಂದೂ ಹಾಗೆಯೇ ಬೊಂಬುಗಳಿಂದ ಒಂದು ಬಲವಾದ ಬಾಗಿಲನ್ನು ತಯಾರಿಸಿ ನಿಲ್ಲಿಸಬಹುದು ಎಂದು ಅಮೂಲ್ಯ ಸಲಹೆಗಳನ್ನು ನೀಡಿದರು. ಆದರೆ ಗೋವಿಂದ ಸ್ವಾಮಿಯವರು

ಒಪ್ಪುವುದಿಲ್ಲ. ಬೊಂಬಿನಿಂದ ತಯಾರಿಸಿದ ಬಾಗಿಲು ಎಂದೆಂದೂ ಕಬ್ಬಿಣದ ಬಾಗಿಲಿಗೆ ಸರಿಸಮನವಾಗಲಾರದೆಂದು ಕಾರಣ ನೀಡಿದರು. ಒಬ್ಬ ಸದಸ್ಯ, ತನ್ನ ಧ್ವನಿಯಲ್ಲಿ ದೇಶ ಪ್ರೇಮವನ್ನು ಚಿಮ್ಮಿಸುತ್ತಾ ಸದಾ ಸರ್ಕಾರದ ಸಹಾಯವನ್ನೇ ಯಾಚಿಸುತ್ತಾ ಕೂರುವುದು ಸರಿಯಲ್ಲ, ಗ್ರಾಮಸ್ಥರಿಂದ ಚಂದಾ ವಸೂಲು ಮಾಡಿ, ಉಳಿದುದಕ್ಕೆ ತಂತಿಬೇಲಿಯನ್ನೇ ಹಾಕಿಸೋಣ ಎಂದು ಸಲಹೆ ನೀಡಿದಾಗ ಗೋವಿಂದ ಸ್ವಾಮಿಯವರು, ಶಾಲೆ ಇದರ ಸುತ್ತಲಿರುವ ಭೂಮಿ, ತೆಗೆದಿರುವ ಬಾವಿ, ಪಂಪುಸೆಟ್ಟು ಎಲ್ಲವೂ ಸರ್ಕಾರದ ಸೊತ್ತು. ಕೇವಲ ಎಂಟು ಹತ್ತು ಮಾರು ತಂತಿ ಮತ್ತು ಒಂದು ಜುಜಬಿ ಬಾಗಿಲಿಗೋಸ್ಕರ ಸಾರ್ವಜನಿಕರ ಸಹಾಯ ಯಾಚಿಸುವುದು ಗೌರವವಲ್ಲ ಮತ್ತು ಚಂದಾ ಕೊಟ್ಟವರು ಮುಂದೆ ಶಾಲಾ ತೋಟದಲ್ಲಿ ಬೆಳೆದ ಹಣ್ಣು ಹಂಪಲುಗಳ ಮೇಲೆ ತಮಗೂ ಅಧಿಕಾರವಿದೆ ಎಂದು ಲೂಟಿ ಮಾಡಲು ಪ್ರಾರಂಭ ಮಾಡಿದರೂ ಮಾಡಬಹುದು ಎಂದು ಹೇಳಿ ಎಲ್ಲಿಯವರೆಗೆ ಸರ್ಕಾರ ಬೇಲಿ ಮತ್ತು ಬಾಗಿಲನ್ನು ಪೂರ್ಣಗೊಳಿಸುವುದಿಲ್ಲವೋ ಅಲ್ಲಿಯವರೆಗೆ, ಹಾಗೆಯೇ ಇರಬೇಕೆಂದೂ, ಅಧ್ಯಕ್ಷನಾದುದರಿಂದ, ಸರ್ಕರ ರಾಷ್ಟ್ರೀಯ ಪೌಷ್ಟಿಕಾಂಶ ಯೋಜನೆಯ ಮುಖಾಂತರ ಸುಣ್ಣದ ಹಳ್ಳಿಯ ಶಾಲೆಗೆ ಒದಗಿಸಿರುವ ಸಲಕರಣೆಗಳೆಲ್ಲದರ ಜವಾಬ್ದಾರಿ ತಮ್ಮ ಮೇಲಿದೆ ಎಂದು ರಭಸವಾಗಿ ಹೇಳಿದರು.

ಇಂಥ ಅಪೂರ್ವ ಹಿನ್ನೆಲೆಯುಳ್ಳ ನಾಯಕತ್ವದಲ್ಲಿ ಸುಣ್ಣದ ಹಳ್ಳಿಯಲ್ಲಿ ಜರುಗಲಿರುವ ಪೌಷ್ಟಿಕಾಂಶ ಯೋಜನೆಯನ್ನು ಕುರಿತ ಸಮಾರಂಭ ಇಡೀ ಹಳ್ಳಿಯ ಮತ್ತು ಅಕ್ಕ-ಪಕ್ಕದ ಹಳ್ಳಿಗರ ಗಮನವನ್ನು ಸೆಳೆದು, ಕುತೂಹಲವನ್ನು ಕೆರಳಿಸಿತ್ತು. ಈ ಸಮಾರಂಭ ತಮ್ಮ ವಿದ್ಯಾರ್ಥಿ ಜೀವನದ ಮಹತ್ವದ ಘಟನೆ ಎಂಬಂತೆ ಮಕ್ಕಳೆಲ್ಲ ಉತ್ಸುಕರಾಗಿ ಚಿಲಿಪಿಲಿಗುಟ್ಟುತ್ತಾ ಇನ್ನು ಮುಂದೆ ಮನುಷ್ಯವರ್ಗದ ಮುಂದಿನ ಪೀಳಿಗೆ ಕುಳಿತು ವಿದ್ಯೆಯನ್ನು ಕಲಿಯಬಹುದು ಎನ್ನುವ ಅಭಿಪ್ರಾಯವನ್ನು ಮೂಡಿಸಿದ್ದರು.

ಭಿತ್ತಿ ಪತ್ರಗಳಲ್ಲಿ ಸೊಗಸಾಗಿ ಮುದ್ರಿಸಲಾದ ಪರಂಗಿಹಣ್ಣು, ಮೊಟ್ಟೆ, ಹಾಲು ಮತ್ತು ಇತರ ಪೌಷ್ಟಿಕ ಆಹಾರ ಪದಾರ್ಥಗಳನ್ನು ಹುಡುಗ-ಹುಡುಗಿಯರು ನೋಡಿದಾಗ, ಅವರ ಬಾಯಲ್ಲಿ ನೀರು ಕಿತ್ತುಕೊಂಡಿತು. ಈ ಗುಂಪಿಗೆ ಸ್ವಲ್ಪ ದೂರದಲ್ಲಿ ಹದಿಮೂರು ವರ್ಷ ವಯಸ್ಸಿನ ಎಣ್ಣೆಗೆಂಪು ಬಣ್ಣದ ಚೆನ್ನಾಗಿ ಬೆಳೆದ ಓರ್ವ ಹುಡುಗ, ಆಸೆಯಕಣ್ಣುಗಳಿಂದ ಏನೋ ಇವತ್ತು ತುಂಬ ಮಹತ್ವದ ಕೆಲಸ ನಡೆಯಬಹುದು ಎಂದು, ನಡೆಯುತ್ತಿರುವ ಸಿದ್ದತೆಗಳನ್ನು ನೋಡುತ್ತಾ ನಿಂತಿದ್ದ ಇವನ ಹೆಸರು ಚಲುವ ಅಂತ, ಕಥೆಯ ಸೃಷ್ಟಿಗೆ ಚಲುವನೇ ಮುಖ್ಯ ಕಾರಣ. ಸುಣ್ಣದ ಹಳ್ಳಿಯವನು ಇವರಪ್ಪನ ಹೆಸರು ಮೂಗೂರ. ಅವ್ವನ ಹೆಸರು ಕಲ್ಲಕ್ಕ. ಇವನ ಅಣ್ಣನ ಹೆಸರು ಸಣ್ಣ ಅಕ್ಕನ ಹೆಸರು ಚಿಕ್ಕತಾಯಿ ಜಾತಿಯಲ್ಲಿ ಹರಿಜನರಾದರು ಚಲುವ ಚೂಟಿಯಾದ ಹುಡುಗ, ಹಳ್ಳಿಗಾಡಿನ ಶಾಲೆಯಲ್ಲಿದ್ದರೂ,

ಕಲಿಯಲೇಬೇಕೆಂಬ ಉತ್ಕಟ ಆಸೆ. ಅವನ ಹೃದಯದಲ್ಲಿ ತುಂಬಿದ್ದುದರಿಂದ ಅವನಿರುವ ಎಳನೆಯ ತರಗತಿಯನ್ನೂ ಮೀರಿ ಜ್ಞಾನ ಅವನಲ್ಲಿ ಬೆಳೆದಿತ್ತು. ಹೊಸ ವಿಷಯ ಕೇಳಿದಾಗ, ಕಂಡಾಗ ವಿವರವಾಗಿ ತಿಳಿದುಕೊಳ್ಳಬೇಕೆಂಬ ಅದಮ್ಯ ಆಸೆ ಇವನ ಎಳೆಯ ಹೃದಯದಲ್ಲಿ ಮೂಡಿನಿಂತಿತ್ತು. ಈ ಆಸೆಯೇ, ಚಲುವ ಪೌಷ್ಟಿಕಾಂಶದ ಭಿತ್ತಿ ಪತ್ರಗಳನ್ನು ಇಷ್ಟು ಕುತೂಹಲದಿಂದ ನೋಡುತ್ತಾ ನಿಂತುಕೊಳ್ಳಲು ಮಾತ್ರವಲ್ಲ, ಇವುಗಳಲ್ಲಿರುವ ವಿಷಯಗಳೆಲ್ಲವನ್ನೂ ಓದಿ ಮನನ ಮಾಡಿಕೊಳ್ಳಲು ಮತ್ತು ತಿಳಿಸಿರುವ ವಿಷಯಗಳೆಲ್ಲ ಕಾರ್ಯನಿರ್ವಹಿಸುತ್ತಾ ಬಂದರೆ ಹೇಗಿರುತ್ತದೆ ಎಂಬುದನ್ನು ಕಲ್ಪಿಸಿಕೊಂಡು ಆನಂದಿಸಲು ಕಾರಣವಾಯಿತು. ಒಳ್ಳೆಯ ಆಹಾರಕ್ಕೂ ಮನುಷ್ಯನ ದೇಹದಲ್ಲಿ ಕೆಲವು ಅಂಗಾಂಗಗಳ ಬೆಳವಣಿಗೆಗೂ ಇರುವ ಸಂಬಂಧ ತಿಳಿದು ಚೆಲುವ ವಿಸ್ಮಯಗೊಂಡ, ಅದರಲ್ಲೂ ಕಣ್ಣಿಗೂ ಪರಂಗಿ ಹಣ್ಣಿಗೂ ಸಂಬಂಧವಿದೆ ಎಂಬುದನ್ನು ತಿಳಿದು ದಂಗುಬಡಿದು ಹೋದ.

ಬಿ.ಡಿ.ಓ. ಸಾಹೇಬರು ತಾಲ್ಲೋಕು ಮಟ್ಟದ ಅಧಿಕಾರಿಗಳು, ವಿಸ್ತರಣಾಧಿಕಾರಿಗಳು, ಪಶುವೈದ್ಯಾಧಿಕಾರಿಗಳು, ಜೂನಿಯರ್ ಇಂಜಿನಿಯರ್ ಅನೇಕ ಗ್ರಾಮಸೇವಕ, ಸೇವಕಿಯರು, ತೋಟಗಾರಿಕಾ ಇಲಾಖೆಯವರು ಪೌಷ್ಟಿಕಾಂಶ ಯೋಜನಾ ಮಂಡಳಿಯ ಸದಸ್ಯರು ಬಂದು ಸೇರಿದಾಗ ಗೋವಿಂದ ಸ್ವಾಮಿಯವರು ತಮ್ಮ ಸ್ವಾಗತ ಭಾಷಣದಲ್ಲಿ ಸುಣ್ಣದ ಹಳ್ಳಿಯಲ್ಲಿ ಈಗ ಹಾಲಿ ಇರುವ ಪ್ರೈಮರಿ, ಮಿಡಲ್ ಮತ್ತು ಹೈಸ್ಕೂಲು ಆಸ್ಪತ್ರೆ ಮುಂತಾದವುಗಳಿಗೆಲ್ಲ ಹೇಗೆ ತಮ್ಮ ಮನೆತನದವರು ಕಾರಣರು ಎಂಬುದನ್ನು ಬಲು ಸ್ಪಷ್ಟವಾಗಿ ವಿವರಿಸಿ ಅಧಿಕಾರಿಗಳ ಮೆಚ್ಚುಗೆ ಪಡೆದುಕೊಳ್ಳುವಲ್ಲಿ ಯಶಸ್ವಿಯಾಗಿರುವುದು. ಸುಣ್ಣದ ಹಳ್ಳಿಗೆ ಅಂಟಿಕೊಂಡತೆಯೇ ಇರುವ ಅಣ್ಣೂರು ತೋಗಾರಿಕೆ ಕ್ಷೇತ್ರದವರು ಈ ದಿಕ್ಕಿನಲ್ಲಿ ಗಮನ ಹರಿಸಬೇಕು ಎಂದು ಗೋವಿಂದ ಸ್ವಾಮಿಯವರು ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿದರು. ಸುಬ್ಬಣ್ಣ ತೋಟಗಾರಿಕಾ ಕ್ಷೇತ್ರದ ಮೇಲ್ವಿಚಾರಕ ಇವರಿಗೆ ನಡುಪ್ರಾಯ ಕಳೆದ ಮೂರು ವರ್ಷಗಳಿಂದ ಇದ್ದಾರೆ. ಜನಾನುರಾಗಿ, ಕಾರಣ ಏನೆಂದರೆ ನಿಂತಲ್ಲಿ ಕುಳಿತಲ್ಲಿ ಹಳ್ಳಿಗಾಡಿನ ಜನರಿಗೆ ತೋಟಗಾರಿಕೆಯ ಬಗೆಗೆ ಜ್ಞಾನ ನೀಡುತ್ತಾ, ಪ್ರಚೋದಿಸುತ್ತ, ಜನರು ತಮ್ಮ ಆಹಾರ ಸಮತೋಲನ ವಾಗಿರಬೇಕಾದರೆ, ಬೆಳೆಯಬೇಕಾದ ಮತ್ತು ಉಪಯೋಗಿಸಲೇಬೇಕಾದ ಹಣ್ಣು ಹಂಪಲು ತರಕಾರಿಗಳನ್ನು ಬೆಳೆಯಲು ತಮ್ಮ ಅಧಿಕಾರ ವ್ಯಾಪ್ತಿಯೊಳಗೆ ನೀಡಬಹುದಾದ ಸಹಕಾರವೆಲ್ಲವನ್ನೂ ನೀಡುವುದರ ಮುಖಾಂತರ, ಒಳ್ಳೆಯವರು ಎನಿಸಿಕೊಂಡಿದ್ದರು.

ಒಮ್ಮೆ ಸುಬ್ಬಣ್ಣ ನವರು ಉಪಾಧ್ಯಾಯರು ಮತ್ತು ಮಕ್ಕಳ ಸಭೆಯನ್ನು ನಡೆಸಿ, ಒಪ್ಪಿಸಿ ನಲವತ್ತು ಪರಂಗಿ ಗಿಡಗಳು ಹತ್ತು ಸಪೋಟ, ಹತ್ತು ಸೀಬೆ ಸಸಿಗಳನ್ನು ನಡೆಸಿದರು. ಹುಡುಗರೆ ಶಾಲೆಗೆ ಹತ್ತು ಮೂರು ದೂರುದಲ್ಲಿ ಹರಿಯುವ ವಿಶ್ವೇಶ್ವರಯ್ಯ ಕಾಲುವೆಯಿಂದ ನೀರನ್ನು ತಂದು, ಒಂದು ವಾರದಲ್ಲಿ ಪೋಷಿಸಿದರು. ಏನಾಯಿತೋ ದೇವರೇ ಬಲ್ಲ, ಒಂದು ದಿನ

ಬೆಳಗಾಗುವುದರೊಳಗೆ ಎಲ್ಲ ಸಸಿಗಳೂ ಬೇರು ಸಮೇತ ಮಾಯವಾಗಿಬಿಟ್ಟವು. ಇದರಲ್ಲಿ ಗೋವಿಂದ ಸ್ವಾಮಿಯವರ ಕುತಂತ್ರ ಇದೆ ಎಂದು ಮುಗ್ದ ಜನರಿಗೆ ಗೊತ್ತೇ ಆಗಲಿಲ್ಲ. ಅಂದಿನಿಂದಲೇ ಸುಬ್ಬಣ್ಣ ಮತ್ತು ಗೋವಿಂದ ಸ್ವಾಮಿಯವರಿಗೆ ಅಷ್ಟಕಷ್ಟೇ.

ಸುಬ್ಬಣ್ಣನವರು ಮಾತುಗಳಿಂದ ಪ್ರೇರಿತಗೊಂಡ ಮೂಗೂರನ ಮಗ ಚಲುವ ತನ್ನ ಅವ್ವ, ಅಕ್ಕ, ಅಣ್ಣ ಎಲ್ಲರನ್ನೂ ಒಪ್ಪಿಸಿ ತನ್ನ ಅಣ್ಣ ಸಣ್ಣನೊಡನೆ ಅಣ್ಣೂರ ತೋಟಗಾರಿಕೆ ಕ್ಷೇತ್ರಕ್ಕೆ ಹೋಗಿ 16 ಪರಂಗಿ ಸಸಿಗಳನ್ನು ಪಡೆದು ಗುಂಡಿಗಳನ್ನು ಹೇಗೆ ತೆಗೆಯಬೇಕು? ಹೇಗೆ ನೆಡೆಬೇಕು? ಎಷ್ಟು ನೀರನ್ನು ಎಂದೆಂದು ಹಾಕಬೇಕು? ಎನ್ನುವ ವಿವರಗಳನ್ನು ಪಡೆದು ತೋಟಗಾರಿಕೆಯ ಪುಸ್ತಕವನ್ನೂ ತೆಗೆದುಕೊಂಡು ಬಂದ.

ಪರಂಗಿ ಸಸಿಗಳು ಮತ್ತು ಪುಸ್ತಕ ಚಲುವನಿಗೆ ಬಹಳ ಸುಲಭವಾಗಿ ದೊರಕಿದವು. ಸಮಸ್ಯೆ ಪ್ರಾರಂಭವಾದುದು ನೆಡಲು ಗುಂಡಿಗಳನ್ನು ತೆಗೆಯಲು ಆರಂಭಿಸಿದಾಗ ಚಲುವನ ಅಪ್ಪ ಮೂಗರ ತನ್ನ ಮೂವರು ಮಕ್ಕಳು ಸೇರಿ ಎಲ್ಲಿ ಇರುವ ಒಂದಿಷ್ಟು ಅಗಲ ಗುಡಿಸಲನ್ನು ಕೆಡವಿ ಬಿಡುತ್ತಾರೋ ಎಂದು ಗಾಬರಿಗೊಂಡು, ಮಕ್ಕಳನ್ನು ಗದರಿಸಿದ ಮಕ್ಕಳು ಜಗ್ಗಲಿಲ್ಲ. ಕಲ್ಲಿಕ್ಕ ಮಕ್ಕಳ ಪರ ವಹಿಸಿ ನಿಂತಳು. ಅಷ್ಟೇ ಅಲ್ಲಿ ಮರಗಿಡಗಳು ಇರೋ ಕಡೆ ಮಳೆ ಜೋರಂತೆ ಸುಮ್ಮನಿರಿ ಅಂತ ಸಮಾಧಾನ ಪಡಿಸಿ ಒಪ್ಪಿಸಿದಳು. ಇದರಿಂದ ಚಲುವ ದಿನಚರಿಯಲ್ಲಿ ಮಹತ್ತರ ಬದಲಾವಣೆಯಾಯಿತು.

ಸುಬ್ಬಣ್ಣ ನವರು ಒಂದು ದಿನ ಬಂದು ಗಿಡಗಳ ಮಧ್ಯೆ ಇರುವ ಜಾಗದಲ್ಲಿ ಮನೆಗೆ ಸಾಕಾಗುಷ್ಟು ತರಕಾರಿ ಬೆಳೆಯಬಹುದೆಂದು ಹೇಳಿ ಬೆಂಡೆ, ಜವಳಿ ಹಾಗೂ ಬದನೆ ಬಾಜಿಗಳನ್ನು ಕೊಟ್ಟು, ಅದನ್ನು ಬೆಳೆಯುವ ವಿಧಾನವನ್ನೂ ಚಲುವನ ಕುಟುಂಬದವರಿಗೆ ಹೇಳಿಕೊಟ್ಟರು.

ಮೂಗೂರನ ಮನೆಯ ಸುತ್ತ ಚೆಲುವಾದ ಕೈತೋಟ ಮೂಡತೊಡಗಿತು. ಚಲುವ ಮತ್ತು ಆತನ ಕುಟುಂಬದವರ ಪರಿಶ್ರಮದಿಂದಾಗಿ ಎರಡೂವರೆ ತಿಂಗಳುಗಳು ಕಳೆದವು. ಸಸಿಗಳು ಸೊಗಸಾದ ಗಿಡಗಳಾಗಿ ನಿಂತವು.

ಮೂಗೂರನಂಥ ಮೂವತ್ತು ಬಡ ರೈತರು ಗೋವಿಂದ ಸ್ವಾಮಿಗೆ ಸೇರಿದ ಇಪ್ಪತ್ತಾರು ಎಕರೆ ಗದ್ದೆಯನ್ನು ಗುತ್ತಿಗೆ ಮಾಡುತ್ತಿದ್ದರು. ಸರ್ಕಾರ ಶಾಲೆಗೆ ಕೊಟ್ಟ ಪಂಪುಸೈಟನ್ನು ತನ್ನ ತೋಟದ ಬಾವಿಗೆ ಅಳವಡಿಸಿಕೊಂಡು ಕಾಲುವೆ ಕೆಳಗಿನ ಭೂಮಿಯನ್ನು ಗುತ್ತಿಗೆ ಕೊಟ್ಟಿದ್ದರೂ ಇದಕ್ಕೆ ಕಾರಣ ಇಪ್ಪತ್ತಾರು ಎಕರೆ ಭೂಮಿಯು ಕರ್ಲು ಬಿದ್ದಿದ್ದು ಸರಿಯಾಗಿ ಬೆಳೆ ಬರುತ್ತಿಲ್ಲವಾದುದರಿಂದ ಬಡ ಗೇಣಿದಾರರಿಗೆ ನೀಡಿದ್ದರು ಅಷ್ಟೇ ಭೂ ಸುಧಾರಣೆಯ ಪ್ರಕಾರ ಗೇಣಿದಾರರು ಸರ್ಕಾರಕ್ಕೆ ತಾವು ಇಂಥವರ ಭೂಮಿಯನ್ನು ಗೇಣಿ ಮಾಡುತ್ತಿರುವುದಾಗಿ ಘೋಷಣೆ ಮಾಡಿಕೊಳ್ಳಲು ಹಕ್ಕಿದ್ದರೂ, ಯಾರೂ

ಇದನ್ನು ಮಾಡುವ ಗೋಜಿಗೆ ಹೋಗಲಿಲ್ಲ. ಇದಕ್ಕೆ ಕಾರಣ ಗೋವಿಂದಸ್ವಾಮಿಯವರ ನಂಬಿಕೆಯನ್ನುಂಟು ಮಾಡುವ ನುಡಿಗಳು.

ಮೂಗೂರಿನ ಮನೆ ಸುತ್ತ ಬಿದ್ದಿದ್ದ ಬಂಜೆ ನೆಲ ಹಸಿರು ಚಿಮ್ಮಲು ಕಾರಣರಾದ ಸುಬ್ಬಣ್ಣನವರು ಸುಣ್ಣದ ಹಳ್ಳಿಯ ಸುತ್ತಮುತ್ತಲ ಪ್ರದೇಶಕ್ಕೆ ಹೊಸದಾಗಿ ಬಂದ ಉತ್ಸಾಹಿ, ತರುಣ ವ್ಯವಸಾಯ ವಿಸ್ತರಣಾಧಿಕಾರಿಯನ್ನು ಹುರಿದುಂಬಿಸಿ ಬಡವರೆಲ್ಲ ಮಾಡಿದ್ದ ಗೋವಿಂದಸ್ವಾಮಿಯ ಈ ಕಲ್ಲು ಭೂಮಿಯನ್ನು ಪ್ರಾಯೋಗಿಕ ಕ್ಷೇತ್ರವನ್ನಾಗಿ ಆಯ್ಕೆ ಮಾಡಿಕೊಂಡು ಮಣ್ಣಿನ ಮಾದರಿಗಳನ್ನು ತೆಗೆದುಕೊಂಡು ಸ್ವತಃ ತಾವೇ ಜಿಲ್ಲೆಯ ಮಣ್ಣಿನ ಪರೀಕ್ಷಾ ಕೇಂದ್ರಕ್ಕೆ ಹೋಗಿ ಪರೀಕ್ಷೆ ಮಾಡಿಸಿಕೊಂಡು ಬಂದು, ಗೇಣಿದಾರರೆಲ್ಲರನ್ನೂ ಸೇರಿಸಿ, ಮಣ್ಣಿನಲ್ಲಿ ಯ್ಯಾವ್ಯಾವ ಅಂಶಗಳು ಕಡಿಮೆಯಾಗಿವೆ? ಇದು ಸರಿ ಆಗಲು ಯಾವ್ಯಾವ ಅಂಶಗಳು ಎಷ್ಟೇಷ್ಟಿರುವ ಗೊಬ್ಬರವನ್ನು ಕೊಡಬೇಕು ಎಂದು ತಿಳಿಸಿ ಬೇಕಾದ ಗೊಬ್ಬರ ಮತ್ತು ಉತ್ತಮ ತಳಿ ಭತ್ತವನ್ನು ಸರ್ಕಾರದ ಕಡೆಯಿಂದ ಕಡಿಮೆ ಬೆಲೆಗೆ ದೊರಕುವಂತೆ ಮಾಡಿ ಈ ಭೂಮಿ ಅಧಿಕ ಇಳುವರಿಯನ್ನು ಕೊಡುವಂತೆ ಮಾಡಲು ನಡುಕಟ್ಟಿ ನಿಂತರು.

ತಾವು ಹುಟ್ಟಿದುದೇ ದುಡಿಯುವುದಕ್ಕೆಂದು ಅಚಲವಾಗಿ ನಂಬಿರುವ ಬಡವರು, ವೈಜ್ಞಾನಿಕ ಸಲಹೆ ಮತ್ತು ಮೇಲೆ ಹೆಸರಿಸಿದ ಸೌಲಭ್ಯಗಳಿಂದ ಉತ್ತೇಜಿತರಾಗಿ ಮೊದಲಿಗಿಂತ ನಾಲ್ಕು ಪಟ್ಟು ಕಷ್ಟ ಪಟ್ಟು ದುಡಿದುದರಿಂದ, ಸುತ್ತಮುತ್ತಲ ಜಮೀನಿನವರ ಕಣ್ಣು ಕುಕ್ಕುವಂತೆ ಭತ್ತದ ಬೆಳೆ ತಲೆ ಎತ್ತಿತ್ತು. ಈ ಬೆಳೆಯ ಸಿರಿಯನ್ನು ಕಂಡು ಗೋವಿಂದಸ್ವಾಮಿಗೆ ಬಾಯಲ್ಲಿ ನೀರು ಕಿತ್ತುಕೊಂಡಿತು. ಜಮೀನನ್ನು ಉಪಾಯದಿಂದ ಈ ಗೇಣಿದಾರರಿಂದ ಕೊಳ್ಳ ಬೇಕೆಂದಿದ್ದ ಆಸೆಗೆ, ಹೊಂಬಣ್ಣದ ಗೊನೆಗಳನ್ನು ನೆಲದ ಕಡೆ ಮುಖ ಮಾಡಿ ತೂಗುತ್ತ ನಿಂತುದನ್ನು ಕಂಡಾಗ, ಏನಾದರೂ ಮಾಡಿ ಕೂಡಲೇ ದಕ್ಕಿಸಿಕೊಳ್ಳಬೇಕೆಂದು ವ್ಯೂಹ ರಚಿಸಲು ಗೋವಿಂದಸ್ವಾಮಿಯವರು ಮುಂದಾಗುತ್ತಾರೆ.

ಹೀಗೆ ದುಡಿತ ಒಬ್ಬರದಾದರೆ ಫಲ ಮತ್ತೊಬ್ಬರದು ಇದು ಈ ದೇಶದಲ್ಲಿ ಹೀಗೇ ಮುನ್ನಡೆದುಕೊಂಡು ಬಂದಿದೆ.

ಗೇಣಿದಾರರಿಗೆ ತಿಳಿಸದೆ ಪೊಲೀಸ್ ಬಂದೋಬಸ್ತ್‌ನೊಡನೆ ಬಂದು ಬೆಳದು ನಿಂತಿದ್ದ ಭತ್ತವನ್ನು ಪಟ್ಟಶಿಷ್ಯ ಗಣೇಶನ ಜೊತೆಗೂಡಿ ಕಟಾವು ಮಾಡಿಸಿ ಹೊತ್ತೊಯ್ದು ಬಿಡುತ್ತಾರೆ.

ಮೂಗೂರಿನ ಮುಂದಾಳು ತನದಲ್ಲಿ ಗೇಣಿದಾರರೆಲ್ಲರೂ ಗೋವಿಂದ ಸ್ವಾಮಿಯವರನ್ನು ರೋಷದಿಂದಲೇ ಪ್ರಶ್ನಿಸಿದರೂ ಯಾವ ಪ್ರಯೋಜನವೂ ಆಗಲಿಲ್ಲ. ನಾಲ್ಕು ನೂರಾ ಇಪ್ಪತ್ತು ಕ್ವಿಂಟಾಲು ಭತ್ತ ಗೋವಿಂದಸ್ವಾಮಿ ಹಳೆಯ ಕಣಜಗಳನ್ನು ಸೇರಿತು. ಇಲ್ಲಿ 420 ಎಂಬುದನ್ನು ಉದ್ದೇಶಪೂರ್ವಕವಾಗಿ ಬಳಸಿದ್ದು ಮಾರ್ಮಿಕವಾಗಿದೆ.

ಈ ಎಲ್ಲಾ ಘಟನೆಗಳು ನಡೆದ ಕೆಲವೇ ದಿನಗಳಲ್ಲಿ ಶಾಲೆಯ ಮಕ್ಕಳಿಗೆ ಮಧ್ಯಾಹ್ನದ ಊಟದ ವ್ಯವಸ್ಥೆ ಮಾಡಲು ಗೋವಿಂದಸ್ವಾಮಿ ಅಕ್ಕಿ ಕೊಡುವುದಾಗಿ ಹೇಳಿ ತರಕಾರಿಗಾಗಿ ಮೂಗೂರನ ತೋಟದಲ್ಲಿ ಬೆಳೆದಿರುವ ಪರಂಗಿ ಕಾಯಿಯನ್ನು ಕೊಯ್ದು ತಂದರಾಯ್ತು ಎಂದು ಹೇಳುತ್ತಾನೆ. ಚಲುವನ ಮತ್ತು ಆತನ ಕುಟುಂಬದವರ ಹಲವು ದಿನಗಳ ಪರಿಶ್ರಮವನ್ನು ಕ್ಷಣ ಮಾತ್ರದಲ್ಲಿ ಗಣೇಶನನ್ನು ಕಳುಹಿಸಿ ಹಾಳು ಮಾಡಿಬಿಟ್ಟ ಈ ಅನ್ಯಾಯ ಮೂಗೂರನಿಗೆ ಮತ್ತು ಆತನ ಕುಟುಂಬದವರಿಗೆ ಸಹಿಸಲಾಗದಷ್ಟು ರೋಷ ಉಕ್ಕುವಂತೆ ಮಾಡಿತು.

ತಲೆತಲಾಂತರದಿಂದ ಗುತ್ತಿಗೆ ಮಾಡುತ್ತಿದ್ದ ಮುಕ್ಕಾಲು ಏಕರೆ ಭೂಮಿಯಲ್ಲಿ ಭತ್ತದ ಬೆಳೆಯನ್ನು ಹಾಕಿ ಕಟಾವು ಮಾಡಬೇಕು ಎನ್ನುವುದರೊಳಗೆ ಹಾಡು ಹಗಲೆ ಕೊಯ್ದು ಲೂಟಿ ಮಾಡಿ ತನ್ನಿಂದ ಮತ್ತು ಇತರರಿಂದ ಭೂಮಿಯನ್ನು ಕಿತ್ತುಕೊಂಡು ಒಕ್ಕಲೆಬ್ಬಿಸಿ ಪಾಣಿ ತಿದ್ದಿಸಿ ಮಾಡಬಾರದ್ದನ್ನು ಮಾಡಿ ಎಲ್ಲರ ಮನೆಹಾಳು ಮಾಡಿದ ಗೋವಿಂದಸ್ವಾಮಿಗೆ ಕುಮ್ಮಕ್ಕು ಈ ಹೊಟ್ಟೆ ಗಣೇಶ!

ಅವತ್ತು ಗದ್ದೆ ಕಿತ್ತುಕೊಂಡು ಭತ್ತದ ಬೆಳೆ ಕೊಯ್ಯಿಸಿ ಗಾಡಿಯಲ್ಲಿ ಹೇರಿಸಿದ ಇವತ್ತು ಮೈ ಮುರಿದು ನಾವು ನನ್ನ ಮಕ್ಕಳು ಬೆಳೆದ ಪರಂಗಿ ಫಸಲನ್ನು ಕೊಯ್ಯುತ್ತಿದ್ದಾನೆ. ಜೊತೆಗೆ ನನ್ನನ್ನೂ ನನ್ನ ಸಂಸಾರವನ್ನು ಸುಟ್ಟು ಬೂದಿ ಮಾಡ್ತಾನಂತೆ. ಈ ಎಲ್ಲಾ ಯೋಜನೆಗಳ ಪ್ರವಾಹ ಮಿದುಳನ್ನು ತಾಕಿದುದೇ ತಡ, ಕೋಪ ಮೂಗೂರನ ದೇಹದಿಂದ ಸಿಡಿಯಿತು. ಗುಡಿಸಲಿನಿಂದ ಮಚ್ಚು ತಂದು ಗಣೇಶನ ಮೇಲೆ ಎರಗಿಯೇಬಿಟ್ಟ. ಗಣೇಶ ತಪ್ಪಿಸಿಕೊಂಡು ಬಾಯಿ ನೋಯುವಷ್ಟು ಮೂಗೂರನಿಗೆ ಶಪಿಸಿ ಅಲ್ಲಿಂದ ಕಾಲ್ಕಿತ್ತ, ಕಲ್ಲಕ್ಕ ಮೆಲ್ಲಗೆ ಗಂಡನ ಕೈಯಿಂದ ಮಚ್ಚನ್ನು ಕಸಿದುಕೊಂಡು ಒಳಕ್ಕೆ ಹೋದಳು. ಈ ಎಲ್ಲಾ ಘಟನೆಗಳು ಮೂಗೂರನನ್ನು ಆಂದೋಲನಕ್ಕೆ ಗುರಿಮಾಡಿತ್ತು. ಇದೆಂಥ ಬದುಕು? ತಲತಲಾಂತರಿಂದ ತನ್ನ ತಾತ, ಮುತ್ತಾತ, ಅವರ ಅಪ್ಪಂದಿರು, ಎಲ್ಲ ತಮ್ಮದು ಎನ್ನುವ ಒಂದು ಗೇಣು ನೆಲ ಇಲ್ಲದೆ , ಯಾರದೋ ಸೂರಿನ ಅಡಿಯಲ್ಲಿ ಬದುಕಿ, ಯಾರಿಗೋಸ್ಕರವೂ, ತಮ್ಮ ಮೈಬೆವರು, ರಕ್ತ ಎಲ್ಲ ಬಸಿದು, ಎದೆಯ ಮೂಳೆಗಳು ನಟನಟ ಎನ್ನುವ ತನಕ ಗಾಣಕ್ಕೆ ಕಟ್ಟಿದ ಎತ್ತಿನಂತೆ ದುಡಿದು, ಉಗಿದರೆ ಉಗಿಸಿಕೊಂಡು, ಹೊಡೆದರೆ ಹೊಡೆಸಿಕೊಂಡು ಒಂದಿಷ್ಟು ಕಾಸು, ಕಾಳು ಕಡ್ಡಿ, ಕೊಟ್ಟರೆ ಅದನ್ನು ವರ ಅಂತ ತೆಗೆದುಕೊಂಡು ಬದುಕುವುದು ! ಇಪ್ಪತ್ತು ವರ್ಷಗಳಿಂದ ಗುತ್ತಿಗೆ ಮಾಡುತ್ತಿದ್ದ ಮುಕ್ಕಾಲು ಎಕರೆ ಭೂಮಿಯನ್ನು ಸರ್ಕಾರ ಉಳೋನಿಗೇ ಭೂಮಿ ಎಂದು ಜೋರಾಗಿ ಕೂಗು ಹಾಕಿ ಉಳುವವರಿಗೆ ಕೊಡಲು ಪ್ರಾರಂಭಿಸಿದ ಮೇಲೆ, ಗೋವಿಂದಸ್ವಾಮಿ, ವಿಲೇಜ್ ಅಕೌಂಟೆಂಟ್, ಶೇಕ್‌ದಾರರು ಮತ್ತು ತಹಶೀಲ್ದಾರರು ಎಲ್ಲ ಮೇಲಿಂದ ಕೆಳಕ್ಕೆ ಒಂದಾಗಿ ಭೂಮಿಯನ್ನು ಕಬಳಿಸಿಕೊಂಡರು. ಕಟಾವಿಗೆ ಬಂದ ಭತ್ತದ ಫಸಲಲ್ಲಿ ತನಗೆ ಒಂದು ಕಾಳು ದಕ್ಕಲಿಲ್ಲ. ತನ್ನ ಇಡೀ ಸಂಸಾರದ ನಾಲ್ಕು ತಿಂಗಳ ದುಡಿಮೆಯ ಫಲವನ್ನು ಗಿಡುಗನಂತೆ ಮೈಮೇಲೆ ಬಿದ್ದು ಹಾರಿಸಿಕೊಂಡರು.

ಇಂಥಹ ಕಟುಕರಿಗೆ ಪೊಲೀಸರ ಕುಮ್ಮಕ್ಕು ಬೇರೆ ! ಇದೆ. ದೇವರ ಕಣ್ಣಿನಲ್ಲಿ ಎಲ್ಲ ಒಂದೇ ಎನ್ನುವ ಜನ, ತಮ್ಮ ಜನರನ್ನು ಕಂಡರೆ ಅಸಸೀ ಎನ್ನುತ್ತಾರೆ. ಆದರೆ ನಾವು ಮೈಬೆವರು ಇಳಿಸಿ ರಕ್ತ ಚೆಲ್ಲಿ ಬೆಳೆದ ಭತ್ತ, ರಾಗಿ ಮುಂತಾದವನ್ನು ಕುಡಿದ ನೀರು ಅಲ್ಲಾಡದಂತೆ ಕೂತು ತಿನ್ನುತ್ತಾರೆ ! ಅದಕ್ಕೆ ಸಾಕ್ಷಿ ಗೋವಿಂದಸ್ವಾಮಿಯ ಕತ್ತು, ಕೋಣದ ಕತ್ತು ಇದ್ದಂಗದೆ ! ಯಾವತ್ತಿಗೂ ಅವನ ಉಗುರು ಕಣ್ಣು ಮಣ್ಣಾಗಿಯೇ ಇಲ್ಲ? ಅವನ ಭಂಟ ಗಣೇಶನ ಹೊಟ್ಟೆ ನೋಡು ಗುಡಾಣ ಇದ್ದಂಗೆ ಅದೆ! ಅವನ ಹೊಟ್ಟೆ ತುಂಬ ನಮ್ಮಂಥವರು ಬೆಳೆದ ಅನ್ನ, ಹಿಟ್ಟು, ಬೆಣ್ಣೆ, ಮೊಸರು, ಈರುಳ್ಳಿ ಬೆಳ್ಳುಳ್ಳಿ ಎಲ್ಲ ತುಂಬವೆ! ಇವರು ಯಾವತ್ತು ಉತ್ತು, ಬಿತ್ತು, ನಾಟಿ ಮಾಡಿದ್ದರು? ಕಳೆಕಿತ್ತಿದ್ದರು? ಇವರು ಎಳೆದ ಕಡೆ ನ್ಯಾಯ ಬರುತ್ತೆ ! ನಮ್ಮ ಜಾಗದಲ್ಲಿ ಕಷ್ಟ ಪಟ್ಟು ಬೆಳೆದ ಪರಂಗಿ ಗಿಡಗಳು ನಮಗೆ ಸೇರಿದವು. ಅಂತಾರಲ್ಲ, ಈ ಜನ ! ಇದಕ್ಕೇನು ಮಾಡ್ಬೇಕು ! ಹೇಳೂರೊ ಕೇಳೋರು ಯಾರು ಇಲ್ವ? ಈ ಅನ್ಯಾಯವನ್ನು ಎಂದು ಮೂಗೂರ ಒಳಗೊಳಗೇ ಕೊರಗುತ್ತಾನೆ. ಈ ಹಾಳು ನರ ಜನ್ಮ ಎತ್ತೋದಕ್ಕಿಂತ ಒಂದು ಕೋತಿಯಾಗಿ ಹುಟ್ಟಿದರೆ ಚೆನ್ನಾಗಿತ್ತು ಎಂದು ತನ್ನ ಬದುಕಿನಲ್ಲಿ ಅನ್ಯಾಯವನ್ನೇ ಅಸಹಾಯಕನಾಗಿ ಸದ್ದಿಲ್ಲದೆ ನ್ಯಾಯ ಎಂದು ಉಣ್ಣಬೇಕಾಗಿ ಬಂದದ್ದನ್ನು ನೆನೆದು ಮೂಗೂರನ ಕಣ್ಣುಗಳಲ್ಲಿ ಅರಿವಿಲ್ಲದಂತೆಯೇ ನೀರು ಸುರಿಯಲಾರಂಭಿಸಿದವು.

ಮೂಗೂರನ ಈ ಅನಿರೀಕ್ಷಿತ ವರ್ತನೆಯನ್ನು ಗೋವಿಂದಸ್ವಾಮಿ ನಿರೀಕ್ಷಿಸಿಯೂ ಇರಲಿಲ್ಲ. ಈ ಘಟನೆಯಿಂದ ಗೋವಿಂದಸ್ವಾಮಿಯ ಎದೆಯಲ್ಲಿದ್ದ ಮೊಂಡು ಧೈರ್ಯವೆಲ್ಲಿ ಕರಗಿ ಹೋಯಿತೊ? ಎಲ್ಲವೂ ಅಯೋಮಯ ಎನ್ನುವ ಸ್ಥಿತಿ ಅವನದಾಯಿತು.

ಒಮ್ಮೆಯೇ ಹತ್ತಾರು ಕಂಠಗಳು: ಹಿಡೀರ್ಲ ಮನೆಹಾಳ ನನ್ನಮಗನ್ನ, ಕಂಡೋರ ಗಂಟು ತಿಂದು ತಿಂದು ಒಳ್ಳೆ ಹಂದಿ ಇದ್ದಂಗವ್ನೆ! ಇವನಿಂದ ಗಲ್ಲುಗೋದ್ರೂ ಸರಿಯೇ! ಎಂದು ಕಿರುಚಿದವು. ಪರಿಸ್ಥಿತಿ ಹತೋಟಿ ಮೀರುತ್ತಿರುವುದನ್ನು ಕಂಡು ಪೋಲಿಸಿನವನು ಎಚ್ಚರವಾದ. ನಿಮಗೆ ನಾನು ಕೈ ಮುಗೀತೀನಿ, ಮೊದಲು ಹುಡಗ್ನ ಆಸ್ಪತ್ರೆಗೆ ಸಾಗಿಸುವ ಬನ್ನಿ, ಆಮ್ಯಾಲೆ ಅವನ್ನ ನಾನು ವಿಚಾರಿಸಿಕೋತಿನಿ ಎಂದು ಹೇಳಿದ್ದನ್ನು ಕಾಕಿ ಬಟ್ಟೆ ತೊಟ್ಟ ಓರ್ವ ವ್ಯಕ್ತಿಯ ಇಂಥ ಸುಸಂಸ್ಕೃತ ನಡವಳಿಕೆ ಹಳ್ಳಿಗಾಡಿನ ಕಡೆ ತೀರ ಅಪರೂಪವಾದುದರಿಂದ ಕುಪಿತಗೊಂಡಿದ್ದವರೆಲ್ಲ ಶಾಂತವಾದರು.

ಗೋವಿಂದ ಸ್ವಾಮಿ ಮಾತ್ರ ಪೋಲೀಸಿನವನನ್ನು ಬಾಯಿಗೆ ಬಂದಂತೆ ಬೈಯುತ್ತ ಪೋಲಿಸ್ ಸೂಪರಡೆಂಟರಿಗೆ ಹೇಳಿ ಕೆಲಸದಿಂದ ಸಸ್ಪೆಂಡ್ ಮಾಡಿಸುವುದಾಗಿಯೂ, ತನ್ನ ಕ್ಷೇತ್ರದ ಎಂ.ಎಲ್.ಎ.ಗೆ ಈ ವಿಷಯ ವರದಿ ಮಾಡಿ ಕೆಲಸದಿಂದಲೇ ತೆಗೆಸಿಬಿಡುವೆ ಎಂದು ಶಪಿಸಿ ಆ ಸ್ಥಳದಿಂದ ಒಂದು ಕಂಬಳಿ ಹುಳುವಿನಂತೆ ಮಾಯವಾಗುತ್ತಾನೆ.

ಗೋವಿಂದ ಸ್ವಾಮಿಯಂಥ ದೇಶಬಾಂಧವರು, ಗಣೇಶನಂಥ ಗುಣವಂತರೇ ತುಂಬಿತುಳುಕುವ ನಮ್ಮ ಸಮಾಜದಲ್ಲಿ ಇನ್ನೂ ಎಷ್ಟು ಸಾವಿರ ಗೇಣಿದಾರರು, ಭೂಮಿ ಇಲ್ಲದ ರೈತರು ಇಂತಹ ಕಷ್ಟಗಳಿಗೆ ಸಿಲುಕಿ ಪ್ರಾಣವನ್ನು ಕಳೆದುಕೊಳ್ಳುತ್ತಿದ್ದಾರೋ ಎಂದು ಯೋಚಿಸಿ ಮೂಗೂರ ತನ್ನ ಸಾವಿನ ನಿರ್ಧಾರವನ್ನು ಬದಲಿಸಿಕೊಂಡು ತಾನು ಇಷ್ಟು ವರ್ಷಗಳ ಕಾಲ ಪಟ್ಟ ಪರಿಶ್ರಮ ವ್ಯರ್ಥವಾಗಬಾರದು ಎಂದು ತೀರ್ಮಾನಿಸಿ. ತನ್ನ ಜೊತೆ ಗೇಣಿ ಮಾಡುತ್ತಿದ್ದ ರೈತರಿಗೆಲ್ಲ ಹೊಸ ಕ್ರಾಂತಿಗೆ ಪ್ರೇರಣೆ ನೀಡಿ ಬದಲಾವಣೆಯ ಹರಿಕಾರನಾಗುತ್ತಾನೆ.

ಬೆಸಗರಹಳ್ಳಿ ರಾಮಣ್ಣ ಅವರ ಪ್ರಮುಖ ಕಥಾಸಂಕಲನದಲ್ಲಿ ಕೊಳಲು ಮತ್ತು ಖಡ್ಗವೂ ಒಂದಾಗಿದ್ದು, ಈ ಸಂಕಲನದಲ್ಲಿ ಬೆಟ್ಟದ ಮೇಲೊಂದು ಮನೆಯ ಮಾಡಿ ಎನ್ನುವ ಕಥೆ ಮೊದಲನೆಯದಾಗಿದ್ದು ಭೂಮಿ ರಹಿತ ಜನರು ತಮ್ಮ ಜೀವನ ಪರ್ಯಂತ ಅನುಭವಿಸುವ ಕಷ್ಟಗಳು, ಬೆಳೆಯನ್ನು ಬೆಳೆಯಲು ಹಾಕುವ ಶ್ರಮ ಎಲ್ಲವನ್ನೂ ಈ ಕಥೆ ಒಳಗೊಂಡಿದೆ.

ಮಳೆ, ಗಾಳಿ, ಬಿಸಿಲು, ಚಳಿ ಇದ್ಯಾವುದನ್ನೂ ಲೆಕ್ಕಿಸದೇ ವರ್ಷವಿಡೀ ಕಷ್ಟ ಪಟ್ಟು ಉತ್ತುಬಿತ್ತು ಬೆಳೆದ ಫಸಲು, ಕಟಾವಿಗೆ ಬಂದಿರುವ ಫಸಲನ್ನು ಮನೆಗೆ ಸಾಗಿಸಿದರೆ ಸಾಕು ಎಂದು ದೇವರಲ್ಲಿ ಪ್ರಾರ್ಥಿಸುತ್ತಾ ಹೊಲದಲ್ಲಿಯೇ ತನ್ನ ಜೀವನದ ಅರ್ಧ ಕಾಲವನ್ನು ರೈತ ಕಳೆಯುತ್ತಾನೆ.

ಈ ಕಥೆಯ ಕಥಾನಾಯಕ ಉರುಗಯ್ಯ, ಈತನ ಹೆಂಡತಿ ಮಸಣಮ್ಮ, ಹಿರಿಯ ಮಗ ಊರಯ್ಯ, ಮಗಳು ಚಿಕ್ಕಿ, ಕಿರಿಯ ಮಗ ಹದಿನಾಲ್ಕು ವರ್ಷಗಳ ಶಿವರಾಮ ಪ್ರಮುಖವಾದ ಪಾತ್ರಗಳು ಇವರ ಜೊತೆಗೆ ಊರಿನ ಗೌಡರಾದ ಬುಡ್ಡೇಗೌಡರು ಇವರು ಗುಣದಲ್ಲಿ ಸಾಧು ವ್ಯಕ್ತಿ, ಸಭ್ಯಸ್ತರು, ತೆಂಗಪ್ಪ ಮತ್ತು ಹರಿಶ್ಚಂದ್ರಯ್ಯನವರು ಇಲ್ಲಿ ದುರಂತ ನಾಯಕರಾಗಿದ್ದು ಕಥೆಯುದ್ದಕ್ಕೂ ಈ ಎಲ್ಲ ಪಾತ್ರಗಳು ತಮ್ಮ ಪಾತ್ರವನ್ನು ಜೀವಂತವಾಗಿ ನಿರ್ವಹಿಸುತ್ತದೆ.

ತಾನು ಬೆಳೆದ ಬತ್ತದ ಫಸಲನ್ನು ತನ್ನ ಗುತ್ತಿಗೆ ಜಮೀನಿಗೆ ಸುಮಾರು ಅರ್ಧ ಫಲಾಂಗ್ ದೂರದಲ್ಲಿದ್ದ ಬುಡ್ಡೆಗೌಡನ ಕಣಕ್ಕೆ ಹೊರೆಗಳನ್ನು ಸಾಗಿಸುತ್ತಾ ಉರಗಯ್ಯ ಒಮ್ಮೆ ಕಣ್ಣಾಂದಾಜಿನಲ್ಲಿ ತುಲನೆ ಮಾಡಿದ, ಹೋದ ವರ್ಷಕ್ಕಿಂತ ಈ ಸಲ ಪರವಾಗಿಲ್ಲ ಒಂದೆರಡು ಬುಡುಗ ಜಾಸ್ತಿ ಆಗಬೋದು ಅಂತ ಬುಡ್ಡೆಗೌಡರಿಗೆ ಹೇಳಿದ. ಈ ಮಾತನ್ನು ಕೇಳಿದ ಬುಡ್ಡೇಗೌಡರು ಕರುಣೆಯಿಂದ ಇದರಿಂದ ನಿನಿಗೆ ಬರೋ ಭಾಗ್ಯವೇನ್ಲ ? ಎಂದು ಪ್ರಶ್ನಿಸುತ್ತಾರೆ. ಏನೋ ಹೋದ್‌ಸಲಕ್ಕಿಂತ ಈ ಸಲ ಇಡೀ ಮನೆಯೋರೆಲ್ಲ ಮಡ ಕಟ್‌ಕೊಂಡು ಗೇದುದ್ದೂ ಸಾರ್ಥಕ ಆಯ್ತು. ಆ ನಮ್ಮವ್ವ ಎಲ್ಲಮ್ಮ ತಾಯಿ ವಸಿ ಕಣ್ ಬುಟ್ಲು ಎಂದು ಉರಗಯ್ಯ ಉತ್ಸಾಹದ ಮಾತುಗಳನ್ನು ಆಡುತ್ತಾನೆ. ಆದರೆ ಎಲ್ಲವ್ವ ಕಣ್ಣು ಬುಟ್ಲು ಸರಿ ಕಣ್ಣ, ಆ ಕಾಗೆ ನಿನ್ ಕಡೆ ಕಣ್ ಬುಡಬೇಕಲ್ಲಪ್ಪ! ಲೋ, ಉರಗ ನಿನ್ ಕಂಡರೆ ನಂಗೆ, ನಾನು ದನವೋ, ಎಮ್ಮೆಯೋ ಆಗಿ ಹುಟ್ಟಬೇಕಾಗಿತ್ತು ಅನ್ನಸುತ್ತದೆ. ಕನ್ನ

ಎಂದು ಉರಗಯ್ಯನ ಸ್ಥಿತಿಯನ್ನು ಕಂಡು ಬುಡ್ಡೇಗೌಡರು ಮರುಗುತ್ತಾರೆ. ತನ್ನ ಸ್ಥಿತಿಯನ್ನು ನೆನೆದು ಏನೋ ಈ ಮನ್ಸ್‌ಜನ್ಮ ಬರಬಾರದಿತ್ತು. ಬಂದುಬುಡ್ತಲ್ಲಪ್ಪ ಎಂದು ಕಣ್ಮುಚ್ಚಿ ತೆರೆದ. ಕಣ್ಣೀರು ಪಳಕ್ಕನೆ ರೆಪ್ಪೆ ಅಂಚಿನಿಂದ ಬೀಳುತ್ತವೆ. ಉರಗಯ್ಯನ ಕಣ್ಣಲ್ಲಿ ನೀರು ಕಂಡದ್ದು ಬುಡ್ಡೇಗೌಡರಿಗೆ ಹೊಸ ವಿಷಯವೇನೂ ಆಗಿರಲಿಲ್ಲ.

ಇಡೀ ವರ್ಷವೆಲ್ಲ ನಡುಕಟ್ಟಿ, ನೋವುಂಡು, ಸುಗ್ಗಿಯ ಸಿರಿಯನ್ನು ಕಣದಲ್ಲಿ ರಾಶಿ ಹಾಕಿ ದುಡಿದೂ ದುಡಿದೂ, ತೇದೂ ತೇದೂ, ಚಕ್ಕೆಯಾದ ಉರಗಯ್ಯನ ಕಣ್ಣಂಚಿನಲ್ಲಿ ಸುರಿದ ನೀರಿನಲ್ಲಿ ವಿಶಿಷ್ಟವಾದ ನೋವು, ವಿಷಾದ. ಈ ನಮ್ಮ ಪವಿತ್ರ ದೇಶದ ಮುಕ್ಕಾಲು ಪಾಲು ಮುಗ್ಧ ಬಡವರ ಕತೆಯೇ ಆಗಿ ಅದು ಯಾರ ಲೆಕ್ಕ ಜಮಕ್ಕೂ ಬಾರದೆ ಅಳಿಸಿ ಹೋಗುವುದನ್ನು ನೆನೆದು, ಬುಡ್ಡೇಗೌಡನ ಎದೆಗೆ ಈಚಲು ಮುಳ್ಳು ಮುರಿದಷ್ಟು ನೋವಾಗುತ್ತದೆ. ಆದರೂ ಏನೋ ತಲೆಗೆ ಬಂದಂತೆ ಲೋ, ಉರಗ, ಈ ಸಲ ನೀನೂ ಬೆಟ್ಟದ ತಿಟ್ಟೇಲಿ ಒಂದೆರಡು ಎಕರೆ ಕೇಳು, ಒಂದು ಅರ್ಜಿನೂ ಕೊಡು, ಶ್ಯಾನುಭೋಗರ್ಗೂ ನಿನ್ಮ್ಯಾಲೆ ಕರುಣೆ ಅದೆ, ದರಖಾಸ್ತ್ ಅರ್ಜಿ ಕೊಡ್ಲಿ, ಎಂದು ಹೇಳಿದ ಬುಡ್ಡೇಗೌಡನ ಈ ಮಾತುಗಳು ಉರಗಯ್ಯನನ್ನು ನೇರವಾಗಿ ಸ್ವರ್ಗಕ್ಕೆ ಕೊಂಡೊಯ್ದವು. ಅವನ ಮೈಯಲ್ಲಿ ಉತ್ಸಾಹ ಉಕ್ಕಿ ಉಕ್ಕಿ ಹರಿಯಿತು. ಬಡಕಲು ಮೈ ಎಲ್ಲ ಶಕ್ತಿಯ ಕೊಪ್ಪರಿಗೆ ಆಗಿ ತಾನೂ ಬಡ್ಡಿ ಜಮೀನ್ದಾರ ಅನ್ನಿಸಿಕೊಳ್ಳಬೇಕೆಂಬ ತನ್ನ ಹುಟ್ಟಿದಂದಿನ ಬಯಕೆ ಈಡೇರುವುದೆಂದು ಹರ್ಷದಿಂದ ಕಣದಲ್ಲಿ ಕೆಲಸಮಾಡುತ್ತಿರುತ್ತಾನೆ. ತೆಂಗಪ್ಪ ಯಾವುದನ್ನೂ ಲೆಕ್ಕಕ್ಕೆ ತೆಗೆದುಕೊಳ್ಳದೆ ಬುಡ್ಡೇಗೌಡನ ಕಣಕ್ಕೆ ಅಂಟಿಕೊಂಡಂತಿದ್ದ ಕೋಡಿಹಳ್ಳದ ಏರಿ ಮೇಲಿನ ಹೊಂಗೆ ಮರಗಳ ಆಶ್ರಯ ಪಡೆದು, ತನ್ನ ಹಳೆ ರ್‍ಯಾಲಿ ಸೈಕಲ್ಲಿಗೆ ನೇತು ಹಾಕಿದ್ದ ಕಡತವನ್ನು ಬಿಚ್ಚಿ ಕುಳಿತ.

ತಿಮ್ಮಯ್ಯ, ಕೆಂಪೇಗೌಡ, ಹೊಲೇರ ಸುಬ್ಬ, ಸತ್ತರು ಇತ್ಯಾದಿ ಹೆಸರುಗಳ ಲೆಕ್ಕ ಜಮಾ ಆದ ಪುಟಗಳನ್ನು ಮುಗುಚಿ, ಉರಗಯ್ಯನಿಗೆ ಸಂಬಂಧಿಸಿದ ಹಾಳೆ ಸಿಕ್ಕಾಗ ತದೇಕಚಿತ್ತದಿಂದ ಹೋದ ವರ್ಷದ ಗುತ್ತಿಗೆ ಬಾಕಿ ಒಂದೂಕಾಲು ಬುಡುಗ ಅಥವಾ 120 ರೂಪಾಯಿಗಳು ಎಂಬುದನ್ನು ಎರಡು-ಮೂರು ಸಾರಿ ಗೊಣಗೊಣ ಎಂದು ಓದಿ ಬುಡ್ಡೇಗೌಡನನ್ನು ಕರೆಯುತ್ತಾನೆ. ಈ ಸಲ ಉರಗಯ್ಯನ ಪಾಲಿನ ಜಮೀನಿನಲ್ಲಿ ಎಚ್ಚಗಬೋದು ಬತ್ತ ಒಂದು ಅಂದಾಜಿನಲ್ಲಿ ಹೇಳು ಎಂದು ಗತ್ತಿನಲ್ಲಿ ಕೇಳುತ್ತಾನೆ. ಒಂದು ಆರೂವರೆ ಬುಡುಗ ಆಗಬಹುದು ಎಂದು ಬುಡ್ಡೇಗೌಡ ಹೇಳಿದಾಗ ಮುಖ ಗಂಟು ಹಾಕಿಕೊಂಡು, ಅಲ್ಲ ಕಣಯ್ಯ ಹೋದಸಲದ ಬಾಕಿ, ಈ ಸಲದ ಗುತ್ತಿಗೆ ಆರು ಬುಡುಗ ಅಂದ್ರೆ ಒಟ್ಟು ಏಳೂಕಲು ಬುಡುಗನಾದ್ರು ಈ ಲೌಡಿ ಮಗ ಈ ಚಿನ್ನದಂಥ ಭೂಮೀಲಿ ಬೆಳೀಲಿಲ್ಲ ಅಂದ್ರೆ, ಇವನಿಗೆ ಯಾಕೆ ಗುತ್ತಿಗೆ ಭೂಮಿ? ಎಂದು ಕಡತವನ್ನು ಮುಚ್ಚಿ ಹಣೆಹಣೆ ಚಚ್ಚಿಕೊಂಡು ಉರಗಯ್ಯನನ್ನು ಲೋ, ಉರಗ ಬಾರೋ ಇಲ್ಲಿ ಎಂದು ಬಯಲು ಒಡಲು

ಜಗ್ಗುವಂತೆ ಕೂಗಿದ, ಒಟ್ಟು ಬಾಕಿ ಎಷ್ಟು ಗೊತ್ತೇನೋ? ನಂಗೇನು ತಿಳಿದಾದು ನಿಮ್ಮ ಕಡಿತದೇಲಿ ಅದೆಷ್ಟದೆ ನೋಡಿ, ಎಂದು ಬತ್ತ ಬಡಿಯಲು ಹೋಗುತ್ತಾನೆ.

ಬತ್ತ ಬಡಿದು ತೂರಿದ ನಂತರ ಕೊಳಗದಲ್ಲಿ ಅಳೆದು ಒಂದು ಕಡೆ ರಾಶಿ ಹಾಕಿದರು. ಏಳು ಖಂಡುಗಗಳ ರಾಶಿ ಸಿದ್ದವಾಯಿತು. ಬತ್ತದ ರಾಶಿ ಸಿದ್ದವಾಗುವುದಕ್ಕೂ, ಮೊನ್ನೆ ಮೊನ್ನೆ ತಾನು ಕೊಂಡುಕೊಂಡಿದ್ದ ಮಿರಿಮಿರಿ ಮಿನುಗುವ ತಮ್ಮ ಹೊಚ್ಚ ಹೊಸ ಬಿ.ಎಸ್.ಎ. ಸೈಕಲ್ಲಿನಲ್ಲಿ ದಮ್ಮು ಕಟ್ಟಿಕೊಂಡು ತುಳಿಯುತ್ತ ಕೋಡಿಹಳ್ಳದ ಬೋರೆಯನ್ನು ಹತ್ತಿಸಿಕೊಂಡು, ಏದುಸಿರು ಬಿಡುತ್ತ ತನ್ನ ಸುಖದ ಮೈಯನ್ನು ಆಯಾಸಕ್ಕೆ ಗುರಿ ಮಾಡಿ ದಿಢೀರನೆ ಬಂದ ಹರಿಶ್ಚಂದ್ರಯ್ಯನಿಗೆ ಜನವೆಲ್ಲ ಸಾಹುಕಾರರು ಎಂದು ಕರೆದೇ ರೂಢಿ. ಸೋರೆ ಹೂವಿನ ಬಿಳುಪಿನ ಖಾದಿಪಂಚೆ, ಕಾಲರಿಲ್ಲದ ಷರಟು, ನಡೆದಾಗ ನೊರನೊರ ಎಂದು ಸದ್ದು ಮಾಡುವ ಪಂಪುಷೂಗಳು, ಬಿಸಿಲ ರವೆಗೆ ಮಿಂಚುವ ಎಡಗೈಯ ಬೆರಳುಗಳನ್ನು ಅಲಂಕರಿಸಿದ ಚಿನ್ನದ ಉಂಗುರಗಳು, ಎತ್ತರಕ್ಕೆ ಮೀರಿ ಬೆಳೆದ ಮೈಯ ಮಧ್ಯೆ ಪುಟಾಣಿ ಗುಡಾಣದಂತಿದ್ದ ಅವನ ಹೊಟ್ಟೆ, ಅವನ ಸಾಹುಕಾರ ಗಿರಿಯ ಪ್ರತಿಷ್ಠೆ ಸಂಕೇತದಂತೆ ಎದ್ದು ಕಾಣುತ್ತಿತ್ತು. ತೆಂಗಪ್ಪ ತನ್ನ ಸೋದರಳಿಯ ಕಾವೇರುತ್ತಿರುವ ಬಿಸಿಲಿನಲ್ಲಿ ಇಷ್ಟು ದೂರ ಬೆವರು ಸುರಿಸಿ ಸೈಕಲ್ ತುಳಿದುಕೊಂಡು ಬಂದುದನ್ನು ಕಂಡು ನೀನ್ಯಾಕಯ್ಯ ಸುಮ್ನೆ ಬಂದೆ ಈ ಹಾಳು ಬಿಸಿಲೇಲಿ ಎಂದುದಕ್ಕೆ ಸಾಹುಕಾರ ಸೈಕಲ್ ನಿಂತಿದ್ದ ತಾವೇ ನಿಂತಿದ್ದರೆ ತುಕ್ಕು ಇಡೀತದೆ ಅದಕ್ಕೆ ಎಂದು ತನ್ನ ಅನಿರೀಕ್ಷಿತ ಸವಾರಿಗೆ ಕಾರಣ ನೀಡಿದ.

ಉರುಗಯ್ಯನ ಕತೆ ಭಾರತದ ಕಡು-ಬಡವರ ಇತಿಹಾಸದೊಂದು ವಿಶಿಷ್ಟ ಕತೆಯೆ ಆಗಬಹುದು. ಒಂದೆರಡು ಖಂಡುಗ ಜಾಸ್ತಿ ಈ ಸಲ ಆಗುಹುದು ಎಂದು ಉರಗಯ್ಯ ಹಿಗ್ಗಿನಿಂದೇಳಿದಾಗ ಬುಡ್ಡೇಗೌಡ ಇದರಿಂದ ನಿಂಗೆ ಬರೋ ಭಾಗ್ಯ ಏನ್ಲ ? ಕಾಗೆ ಕಾಯ್ಕೊಂದು ಕುಂತವನಲ್ಲ ಒಂದೆರಡು ಎಕರೆ ಬೆಟ್ಟದತಪ್ಪಲು ಏಳು-ಶ್ಯಾನುಭೋಗರಿಗೆ ಹೇಳ್ತಿನಿ ಅಂದದ್ದು ಮತ್ತು ನಂದೂ ಅನ್ನೋ ಭೂಮೀಲಿ ನನ್ ಹೆಣ ಹೂಳ್ಸ್ಕೋಬೇಕು ಎನ್ನುವ ಉರಗಯ್ಯನ ಮಾತುಗಳ ಮೂಲಕ ಓರ್ವ ಭೂ ಹೀನ ರೈತ , ಇವನನ್ನು ಕುಕ್ಕಿ ತಿನ್ನುವ ಒಂದು ಮಾನವ ಕಾಗೆ ಇಂತಹ ಸಾಮಾನ್ಯ ಪರಿಸ್ಥಿತಿಗಳು ನಾಡಿನ ಉದ್ದಗಲ ಆಳಗಳಲ್ಲಿ ತುಂಬಿ ಹೋಗಿವೆ.

ಭತ್ತದ ಚೀಲಗಳನ್ನು ಹೊಲಿದು ಗಾಡಿಗೆ ತುಂಬಲು ಈರನಿಗೆ ಹರಿಶ್ಚಂದ್ರಯ್ಯ ಹೇಳಿದಾಗ ಉರಗಯ್ಯ ಬುದ್ದಿ, ಬುದ್ದಿ ಅನ್ಯಾಯ ಮಾಡ್ಬ್ಯಾಡಿ ಎಂದು ಮಂಡಿಗಳಲ್ಲಿ ಕೈಹಾಕಿದ ಸಿಡೀರನೆ ಮೇಲೆದ್ದು ಯಾವ್ದೋ ಅನ್ಯಾಯ? ಎಂದವನೆ ದುಕ್ಕನೆ ಉರಗಯ್ಯನ ಮುಖದ ಮೇಲೆ ಝಾಡಿಸಿ ಒದ್ದೇಬಿಟ್ಟ ಉರಗಯ್ಯ ಅಪ್ಪೋ ಅಂತ ಮುಖ ಮುಚ್ಚಿಕೊಂಡ ಬೊಗಸೆ ತುಂಬ ಮೂಗು ಬಾಯಿಂದ ಹೊರಟ ರಕ್ತ ಬೆರಳಿನ ಸಂದಿಗಳಲ್ಲಿ ಜಿನುಗಿತು. ಸುತ್ತಮುತ್ತ ಇದ್ದವರು

ಅಯ್ಯೋ ರಾಮ---- ಇಂಗೂ ಉಂಟೆ ಎಂದು ಬಾಯಿಯ ಮೇಲೆ ಕೈ ಇಟ್ಟುಕೊಳ್ಳುವುದನ್ನು ಪ್ರದರ್ಶಿಸುತ್ತಿದ್ದಂತಯೇ ಕಣದಲ್ಲಿ ಒಂದು ಕ್ರಾಂತಿಗೆ ಬುನಾದಿಯನ್ನು ಉರುಗಯ್ಯನ ಬಾಯಿಯಿಂದ, ಬೊಗಸೆಯಿಂದ ಇಳಿದು ನೆಲ ತೊಯ್ಸಿದ ರಕ್ತದ ತೊಟ್ಟುಗಳು ಹಾಡಿದ್ದವು. ಉರಗಯ್ಯ ಮಿಂಚಿನಂತೆ ಗಾಡಿಯ ಕಡೆ ನುಗ್ಗಿದವನೆ ಗಾಡಿಯ ತಡೆಕೆಯ ಬಿದಿರ ಪಟ್ಟಿಯನ್ನು ಹಿರಿದುಕೊಂಡು ಮಧ್ಯಕ್ಕೆ ಲಾಟಾರನೆ ಬಲಮಂಡಿಗೆ ಗುದ್ದಿ ಮುರಿದು ಲೇ ಕಾಗೆ ನನ್ನ ಮಗನೆ ಎಂದು ತೆಂಗಪ್ಪನ ಕುಂಡಿ, ಬೆನ್ನು, ಕತ್ತು, ತಲೆ....... ಎಲ್ಲೆಂದರಲ್ಲಿ ಬಾರಿಸಿದ ಯಾರಿಂದಲು ತಡೆಯಲು ಸಾಧ್ಯವಾಗಲಿಲ್ಲ. ತೆಂಗಪ್ಪನವರಿಗೆ ಈ ಬಗೆಯ ಔತಣ ಅವರು ಬುದ್ಧಿ ಕಂಡಂದಿನಿಂದಲೂ ಯಾರೂ ಬಡಿಸಿರಲೇ ಇಲ್ಲ.....! ಬುಡ್ಡೇಗೌಡ ಬೆಪ್ಪಾಗಿ ನಿಂತಿದ್ದ, ಅವನಿಗೂ ತೊಳ್ಳೆ ನಡುಗಲಾರಂಭಿಸಿತು. ಎನ್ನುವಲ್ಲಿ ಉರಗಯ್ಯನ ಕೋಪದ ತೀವ್ರತೆ ಎಷ್ಟಿತ್ತೆಂಬುದನ್ನು ನಾವು ಅರಿಯಬೇಕು. ಬುಡ್ಡೇಗೌಡನ ಕಡೆ ತಿರುಗಿ ಈ ಅನ್ಯಾಯ ನೋಡ್ತಾ ನಿಂತಿದ್ದೀಯಲ್ಲ....... ನೀನು ಒಬ್ಬ ಊರಲ್ಲಿ ನ್ಯಾಯಸ್ಥ ಅಲ್ಲವೇನಯ್ಯ? ಎಂದು ಮೂದಲಿಸಿದ, ಗೌಡ ಮಾತಾಡಲಿಲ್ಲ. ವರ್ಸ ವರ್ಸ ಗೇದು ಇವು ಕಣಜ....... ಇವರ ಗುಡಾಣದ ಹೊಟ್ಟೆ ತುಂಬಿಸೋಗ್ನೆ...... ಕಾಲೇಲಿ ಒದ್ದುದ್ದು ಸರಿಯೇ ಎಂದು ಊರಯ್ಯ ಪ್ರಶ್ನಿಸಿದ ಗೌಡ ಮಾತಾಡಲಿಲ್ಲ. ಊರಯ್ಯನ ಕೈಯಲ್ಲಿನ ಆಯುಧ ಅವರ ನಾಲಗೆಯನ್ನು ಕಟ್ಟಿ ಹಾಕಿತ್ತು. ಆದರೂ ಧೈರ್ಯ ಮಾಡಿ ದೊಡ್ಡೋರಿಗೆ ಹಿಂಗೆ ಅವಮಾನ ಮಾಡಬಾರ್ದು ಕಣ್ಲ........ ಊರ , ತೆಂಗಪ್ಪ ಇದರ ಜೊತೆಗೆ ಅವಾಚ್ಯ ಶಬ್ದಗಳಿಂದ ಊರಯ್ಯನಿಗೆ ನಿಂದಿಸಲಾರಂಭಿಸಿದ ನನಗೆ ಹೊಡಿಯೋವಷ್ಟು ಕೆಚ್ಚು ಬಂತ ಎಂದು ಅವನ ಎಡಭುಜಕ್ಕೆ ಬಂಧಿಸಿದ. ಊರಯ್ಯ ಈ ಏಟಿಗೆ ಬಗ್ಗಲಿಲ್ಲ. ಮಿಂಚಿನ ವೇಗದಲ್ಲಿ ಅವನ ಬಲಗೈ ತನ್ನ ನಡುವಿನಲ್ಲಿ ಮೌನವಾಗಿ ಮಲಗಿದ್ದು ಬೆಟ್ಟುಗತ್ತಿಯನ್ನು ಹಿಡಿದುಕೊಂಡಿತು. ಆದೆಷ್ಟು ಬೇಗ ಎಡಗೈ ತೆಂಗಪ್ಪನ ಜುಟ್ಟು ಹಿಡಿಯಿತೋ ಏನು ಕತೆಯೋ.. ಕಣ್ಮುಚ್ಚಿ ಬಿಡುವುದರೊಳಗೆ ..... ಬೆಟ್ಟುಗತ್ತಿಯ ಅಂಚಿನಿಂದ ರಕ್ತ ಸೋರುತ್ತಿತ್ತು. ಎಡಗೈಯಲ್ಲಿ ತೆಂಗಪ್ಪನ ರುಂಡ ಬಾಯಿ ಬಾಯಿ ಬಿಡುತ್ತಿತ್ತು...... ಮುಂಡ ವಿಲವಿಲ ಒದಾಡುತ್ತಿತ್ತು. ಬಯಲೆಲ್ಲ ದಿಢೀರನೆ ಕೆಂಪಾಯಿತು. ಬುಡ್ಡೇಗೌಡ ಮತ್ತೂ ಹತ್ತು ಮಾರು ಹಿಂದಕ್ಕೆ ಹಾರಿದ!.... ಹರಿಶ್ಚಂದ್ರಯ್ಯ ದೊಪ್ಪನೆ ಮೂರ್ಛೆ ಬಿದ್ದ.

ಅವ್ವ, ಅಪ್ಪ, ತಂಗಿ, ತಮ್ಮ ಎಲ್ಲ ಗರಬಡಿದವರಂತೆ ನಿಂತಿರುವುದನ್ನು ಕಂಡು ಒಮ್ಮೆ ಸುತ್ತಮುತ್ತ ನೋಡಿ.... ಬುಡ್ಡೇಗೌಡನ ಕಡೆ ತಿರುಗಿ ಹೇಳಿದ. ಗೌಡ್ರ ನಮ್ಮಪ್ಪನಿಗೆ ಪಾಲು ಕೊಡ್ಸಿ ..... ಸಾಹುಕಾರರ ಜಮೀನು ಗುತ್ತಿಗೆ ಮಾಡಿರೋರ್ಗೆಲ್ಲ ಸರಿಯಾಗಿ ಪಾಲುಕೊಡ್ಸಿ ಅಂದ ಗೌಡ ನಡುಗುತ್ತ ಸರಿ, ಊರಯ್ಯ ಎಂದರು.

ನಾನಿನ್ನು ಓಯ್ತೀನಿ ಎಂದು ಹೇಳುತ್ತು ಎಡಗೈಯಲ್ಲಿ ತೆಂಗಪ್ಪನ ತಲೆ... ಬಲಗೈಯಲ್ಲಿ ಬೆಟ್ಟುಕತ್ತಿ ಹಿಡಿದು ಊರಯ್ಯ ತನ್ನೂರಿಗೆ ಐದು ಮೈಲಿ ದೂರದಲ್ಲಿರುವ ಪೋಲಿಸ್ ಸ್ಟೇಷನ್ನಿಗೆ ಹೊರಟವನೆ ತನ್ನ ಅವ್ವನನ್ನು ಕಣ್ಣಲ್ಲಿ ಅಡಗಿಸಿಕೊಳ್ಳುವಂತೆ ಒಂದಷ್ಟು ಕ್ಷಣಗಳು ನೋಡಿ ಹೊರಟು ಬಿಡುತ್ತಾನೆ. ಇಲ್ಲಿ ಊರಯ್ಯನಿಗೆ ತನ್ನ ಕುಟುಂಬಕ್ಕೆ ದೌರ್ಜನ್ಯದಿಂದ ಮುಕ್ತಿ ಕೊಟ್ಟು ಎರಡು ಹೊತ್ತು ಊಟಮಾಡಲು ಅಕ್ಕಿಯನ್ನು ಒದಗಿಸಿಕೊಟ್ಟ ಧನ್ಯತಾಭಾವನೆ ಊರಯ್ಯನಿಗೆ ಮೂಡಿದರೆ ತನ್ನ ಮಗ ಕೊಲೆಗಡುಕನಾದನಲ್ಲ ಎನ್ನುವ ಸಂಕಟ ಆತನ ತಂದೆಯಾದ ಉರಗಯ್ಯ ಮತ್ತು ಮಸಣಮ್ಮನಿಗೆ ಉಂಟಾದರೂ ಸಹ ಮುಂದಿನ ಗೇಣಿ ದಾರರಿಗೆ ಎಲ್ಲಾ ಅನ್ಯಾಯಗಳಿಂದ ಮುಕ್ತಿ ಹೊಂದಿ ಅವರ ಶ್ರಮಕ್ಕೆ ತಕ್ಕ ಫಲ ದೊರೆಯಲು ಊರಯ್ಯ ಕಾರಣನಾಗಿದ್ದಾನೆ ಎನ್ನುವ ತೃಪ್ತಿ ಭಾವನೆಯನ್ನು ಈ ಕಥೆಯಲ್ಲಿ ಕಾಣಬಹುದಾಗಿದೆ.

ಭಾಷೆ ;-

ಭಾಷೆಯು ಮನುಷ್ಯನ ಭಾವನೆಗಳನ್ನು ವ್ಯಕ್ತಪಡಿಸುವ ಸಾಧನವಾಗಿದ್ದು ಇಂತಹ ಭಾಷೆಯನ್ನು ಬೆಸಗರಹಳ್ಳಿ ರಾಮಣ್ಣನವರು ಸಾಹಿತ್ಯಿಕವಾಗಿ ವಿಶೇಷವಾಗಿ ಬಳಸಿಕೊಂಡಿರುವುದು ಗಮನಾರ್ಹ.

ಬೆಸಗರಹಳ್ಳಿ ರಾಮಣ್ಣ ಅವರು ಮಂಡ್ಯ ಜಿಲ್ಲೆಯವರೇ ಆಗಿದ್ದು ಇಲ್ಲಿನ ಜನರ ಜೀವನ ಅವರ ರೂಢಿ ಸಂಪ್ರದಾಯಗಳು ನಂಬಿಕೆ ಇತ್ಯಾದಿಗಳನ್ನು ತುಂಬಾ ಹತ್ತಿರದಿಂದ ಕಂಡಿದ್ದು ಅವರು ಸಾಹಿತ್ಯದಲ್ಲಿ ಗ್ರಾಮೀಣ ಜನರ ದಿನನಿತ್ಯದ ಆಡು ಭಾಷೆಯನ್ನು ಬಳಸುವ ತಂತ್ರ ಉಪಯುಕ್ತವಾಗಿದೆ.

ಗ್ರಾಮೀಣ ಜನರ ಬದುಕು, ಗ್ರಾಮೀಣ ಭಾಷೆಯ ಸೊಗಡು ಬೆಸಗರಹಳ್ಳಿ ರಾಮಣ್ಣ ಅವರ ಕಥೆಯ ಜೀವಾಳವಾಗಿದೆ. ರಾಮಣ್ಣ ಅವರ ಕಥೆಗಳಲ್ಲಿ ಹೆಚ್ಚಾಗಿ ಗ್ರಾಮೀಣ ಪ್ರದೇಶದ ರೈತರ ಕುಟುಂಬದ ಸಂಬಂಧಗಳು ಮತ್ತು ಒಂದಾಗಿ ಬಾಳುವ ಚಿತ್ರಣವನ್ನು ಕಾಣಬಹುದು.

ಜೊತೆಗೆ ಗ್ರಾಮ್ಯ ಬದುಕಿನ ಅನಾವರಣ, ರೈತರ, ದಲಿತರ, ಒಕ್ಕಲಿಗರ ಬದುಕು, ಗ್ರಾಮ ದೇವತೆಯ ಮಹತ್ವ, ಕಾಮ, ದ್ವೇಷ, ದಬ್ಬಾಳಿಕೆ, ದೌರ್ಜನ್ಯ, ಢೋಂಗಿತನ ಈ ಎಲ್ಲಾ ಅಂಶಗಳನ್ನು ರಾಮಣ್ಣ ಅವರ ಕಥೆಗಳಲ್ಲಿ ಗುರ್ತಿಸ ಬಹುದಾಗಿದೆ.

ರಾಮಣ್ಣ ಅವರು ರಚಿಸಿರುವ ಬಹುತೇಕ ಕಥೆಗಳಲ್ಲಿಯೂ ಈ ಅಂಶಗಳೆ ಪ್ರಧಾನವಾಗಿದ್ದು ಕೆಲವೊಂದು ಕಥೆಗಳು ರೈತರು, ಗೇಣಿದಾರರು ಅನುಭವಿಸುವ ನೋವು ಭೂ ರಹಿತ ಗೇಣಿದಾರರು ವರ್ಷವಿಡೀ ಬೆಳೆಯನ್ನು ಬೆಳೆಯಲು ಹಾಕುವ ಶ್ರಮವನ್ನು ಮುಖ್ಯ ಅಂಶಗಳಾಗಿ ಒಳಗೊಂಡಿವೆ.

ರಾಮಣ್ಣ ಅವರ ನೆಲದ ಒಡಲು ಕಥೆ ಸಂಕಲನದಲ್ಲಿ ಬರುವ ಮಳೆಗರೆಯಿತು ಬಾನು ಹಸುರಾಯಿತು ಮನ, ಸುಗ್ಗಿ ಕಥೆಯಲ್ಲಿ ಪುಟ್ಟರಾಮ ಮತ್ತು ಸಣ್ಣನ ಪಾತ್ರಗಳ ಮೂಲಕ ರಾಮಣ್ಣ ಅವರು ಬಳಸಿರುವ ಭಾಷೆ ರಾಮಣ್ಣ ಅವರಿಗೆ ಎಷ್ಟರಮಟ್ಟಿಗೆ ಕರಗತವಾಗಿದೆ ಎನ್ನುವುದು ಸರಳವಾಗಿಯೇ ತಿಳಿಯುತ್ತದೆ. ಮಳೆಗರೆಯಿತು ಬಾನು ಹಸುರಾಯಿತು ಮನ ಕಥೆಯ ಒಂದು ಸಂಭಾಷಣೆಯನ್ನು ಇಲ್ಲಿ ಉದಾಹರಿಸಬಹುದು.

ಕಾಲುವೇ ನೀರೆಲ್ಲ ನಿಂದೇಯ?

ಮೇಲಿಂದ ನಾರು ತಂದೋರುನ ಯಾರು?

ತಂದ್ರ? ಅದ್ಕ ಎಲ್ಲಿ ನಿಮ್ಮಪ್ಪಂದ?

ಲೇ ಅಪ್ಪನ ಸುದ್ದಿಗೆ ಬರಬ್ಯಾಡ ಹಲ್ಲು ಕಳ್ಕೊವಂಗೆ ಗುದ್ಲಿ ಅಂಡೇಲಿ ಬಡ್ದೇನು!

ಮುಚ್ಲೆ ಕಂಡಿಷ್ನೀ! ಇದ್ದೋರ ಕೈ ಏನು ಕಡ್ಲೆ ಬೆಲ್ಲ ತಿನ್ನೊದಿಲ್ಲಕನ ...

ಹೀಗೆ ಪ್ರತಿಯೊಂದು ಕಥೆಯಲ್ಲಿಯೂ ಸಹ ಒಬ್ಬ ರೈತನು ತನ್ನ ದಿನನಿತ್ಯದ ಬದುಕಿನಲ್ಲಿ ಬಳಸುವ ಸಹಜ ಭಾಷೆಯನ್ನೇ ರಾಮಣ್ಣ ಅವರು ತಮ್ಮ ಕಥೆಯಲ್ಲಿ ಬಳಸಿದ್ದಾರೆ. ಇದರಿಂದಾಗಿಯೇ ಅವರ ಕಥೆಗಳು ಓದುಗರ ಕಿವಿಯಲ್ಲಿ ಸದಾ ಗುಯ್‌ಗುಟ್ಟುತ್ತಿರುತ್ತವೆ.

ಸುಗ್ಗಿ ಕಥೆಯಲ್ಲಿ ಭತ್ತವನ್ನು ಬಡಿದ ಸಮಯದಲ್ಲಿ ಕಣದಲ್ಲಿ ಬೇಸರವನ್ನು ಕಳೆಯಲು ರೈತರು ಹಾಡುವ ಹಾಡು   ಭೂತಾಯಿ ಕೊಟ್ಟಳು ಬತ್ತವ

ಕಣಜದ ತುಂಬ ತುಂಬೇವು

ಹೊಸ ಬೆಳೆಯ ಅನ್ನಾವ ಮಾಡಿ

ಮನೆಯೆಲ್ಲ ಉಂಡು ನಲಿದೇವು....... ಸುಗ್ಗಿಯ

ನೆನೆದೇವು ನೆನೆದೇವು

ಎನ್ನುವ ಜನಪದ ಹಾಡನ್ನು ರಾಮಣ್ಣ ಅವರು ಬಳಸಿರುವುದು ಜನಪದರು ಬದುಕಿನ ಬವಣೆಯನ್ನು, ಕೆಲಸದ ಆಯಾಸವನ್ನು ಹೇಗೆ ನಿವಾರಿಸಿಕೊಳ್ಳುತ್ತಿದ್ದರು ಎನ್ನುವುದನ್ನು ತಿಳಿಸಿಕೊಡುತ್ತದೆ.

ಗರ್ಜನೆ ಕಥಾ ಸಂಕಲನದಲ್ಲಿ ಬರುವ ಜೀತ, ಅವ್ವ, ಕಳೆ ಈ ಕಥೆಗಳು ಮಾನವನ ಬದುಕಿನ ಅನಾವರಣ ಮಾಡುವುದರ ಜೊತೆಗೆ ಬಡತನವೆಂಬ ಅನಿಷ್ಟತೆಯ ನಿಕೃಷ್ಟತನವನ್ನು ವಿವರಿಸುತ್ತದೆ. ಇಲ್ಲಿ

ಮಗ, ಲೋ ! ಚಿಕ್ಕ ರಾಮ

ಏನಣ್ಣ ?

ಏಲ್ಲ ಹೋಗುವ

ಅಣ್ಣ ! ಎಲ್ಲಿಗಣ್ಣ ಹೋಗೋದು ?

ಊರ್ಗೆ ! ನಮ್ಮೂರ್ಗೆ !

ಮರೆತು ಬುಟ್ವೇನಣ್ಣ ನೆನ್ನೆ ದಿನ...? ಎನ್ನುವ ಗೌಡರ ಮನೆಯಲ್ಲಿ ಜೀತಕ್ಕಿರುವ ಅಣ್ಣ ತಮ್ಮಂದಿರ ಸಂಭಾಷಣೆಯಲ್ಲಿ ಅಣ್ಣತಮ್ಮಂದಿರು ಜೀತಕ್ಕಿದ್ದು ಅನುಭವಿಸಿರುವ ದೈಹಿಕ ಹಿಂಸೆ, ಮಾನಸಿಕ ನೋವು, ಅವಮಾನವು ಅವರ ಸ್ವಾಭಿಮಾನವನ್ನು ಬಡಿದೆಬ್ಬಿಸುವ ರೀತಿಯನ್ನು ವಿವರಿಸಲು ಬಳಸಿರುವ ಭಾಷೆ ಪ್ರಮುಖವಾದದ್ದು.

ಹರಕೆಯ ಹಣ, ಕಕರನ ಯುಗಾದಿ, ಚಲುವನ ಪರಂಗಿ ಗಿಡಗಳು, ಬೆಟ್ಟದ ಮೇಲೊಂದು ಮನೆಯ ಮಾಡಿ ಕಥೆಗಳಲ್ಲಿ ಊರಿನ ಗೌಡರು, ಶ್ಯಾನುಭೋಗರು ಎಂದು ಕರೆಸಿಕೊಳ್ಳುವ ಅಧಿಕಾರದ ದರ್ಪದಲ್ಲಿ ಬಡವರಿಗೆ ಬಳಸುವ ದರ್ಪದ ನುಡಿಗಳು ಅವಾಚ್ಯ ಶಬ್ದಗಳು ಮತ್ತು ಬೈಗುಳಗಳನ್ನು ಕೇಳಿಸಿಕೊಂಡೂ ಸಹ ಕಕರ, ಉರಗಯ್ಯನಂತಹ ವ್ಯಕ್ತಿಗಳೂ ಅಪ್ಪಾ, ಧಣಿ ಎಂದು ಗೌರವಿಸುವ ಮುಗ್ದತನವನ್ನು ಅವರದೇ ಆದ ನೈಜ ಭಾಷೆಯಲ್ಲಿ ರಚನೆಮಾಡಿರುವುದು ಕಥೆಯನ್ನು ಪರಿಣಾಮಕಾರಿಯಾದ ಮಾರ್ಗದಲ್ಲಿ ಕೊಂಡ್ಯೊಯ್ಯುವಲ್ಲಿ ಸಹಕಾರಿಯಾಗಿದೆ ಎಂದು ಹೇಳಬಹುದು.

ಒಟ್ಟಾರೆಯಾಗಿ ರಾಮಣ್ಣ ಅವರ ಕಥೆಗಳು ಗ್ರಾಮೀಣ ಬದುಕನ್ನು ಪರಿಣಾಮಕಾರಿಯಾಗಿ ಚಿತ್ರಿಸಿ, ಗಾಮೀಣ ಸಮುದಾಯದಲ್ಲಿ ನಿರ್ಲಕ್ಷ್ಯಕ್ಕೀಡಾದ ಸಮುದಾಯವು ಅನುಭವಿಸುವ ಅವಮಾನ, ಸಾಂಸ್ಕೃತಿಕ ಶೋಷಣೆ, ನಿಂದನೆ, ಪಟ್ಟಭದ್ರ ಹಾಗೂ ಅಧಿಕಾರಶಾಹಿಗಳ ನಡುವೆಯೂ ಕಂಡು ಬರುವ ಪ್ರಾಮಾಣಿಕ ಮುಗ್ದ ಜೀವಗಳ ನಡುವೆ ನಡೆಯುವ ಸಂಭಾಷಣೆ ಯನ್ನು ನೈಜವಾಗಿ, ಓದುಗರ ಮನೋಧೋರಣೆಗೆ ನಿಲುಕುವಂತಹ ಸರಳ ಭಾಷೆಯಲ್ಲಿ ಕಥೆಯನ್ನು ಹೆಣೆದಿರುವುದು ರಾಮಣ್ಣ ಅವರ ಭಾಷೆಯ ಅಭಿಮಾನ ಮತ್ತು ಗ್ರಾಮೀಣ ಸೊಗಡಿನಲ್ಲಿ ಅವರಿಗಿರುವ ಪ್ರಾವೀಣ್ಯತೆಗೆ ಹಿಡಿದ ಕೈಗನ್ನಡಿಯಾಗಿದೆ.

ಶೋಷಿತ ಜನಾಂಗದ ಬದುಕನ್ನು ಚಿತ್ರಿಸುವ ಬೆಸಗರಹಳ್ಳಿ ರಾಮಣ್ಣ ರವರ ಕಥೆಗಳಲ್ಲಿ ಮುರಿದ ಮನಸ್ಸು, ಹರಿದ ಪ್ರೀತಿಯನ್ನು ಬೆಸೆಯುವ, ಮನುಷ್ಯ ಪ್ರೀತಿಯನ್ನು ಪ್ರತಿಪಾದಿಸುವುದನ್ನು ಕಾಣಬಹುದಾಗಿದೆ. ಈ ಅಧ್ಯಯನದಲ್ಲಿ ಗ್ರಾಮೀಣ ಬದುಕು, ರೈತನ ಶ್ರಮಜೀವನ, ದಲಿತರ ಚಿತ್ರಣ, ಸ್ತ್ರೀ ಸಂವೇದನೆ, ಬಂಡಾಯ ಮನೋಭಾವ ಎನ್ನುವ ಅಂಶಗಳನ್ನು ಮುಖ್ಯವಾಗಿಟ್ಟುಕೊಂಡು ರಾಮಣ್ಣ ಅವರ ಕಥೆಗಳನ್ನು ಅಧ್ಯಯನಕ್ಕೆ ಅಳವಡಿಸಿದ್ದೇನೆ.

ರಾಮಣ್ಣನವರ ಕಥೆಗಳಲ್ಲಿ ಸಾಂಸ್ಕೃತಿಕ ಕಾಳಜಿ, ಸಾಮಾಜಿಕ ಅರಿವು, ಜೀವನ, ಪ್ರೀತಿ-ಶ್ರದ್ದೆಗಳು ಅಖಂಡವಾಗಿ ತುಂಬಿಕೊಂಡಿವೆ. ಹೀಗಾಗಿ ಇವರು ಮೌಲ್ಯ ಶೋಧಕ ಬರಹಗಾರನಾಗಿ, ಮಾನವತಾವಾದಿ ಯಾಗಿ ಕಾಣುತ್ತಾರೆ. ರಾಮಣ್ಣನವರ ಎಲ್ಲಾ ಕತೆಗಳಲ್ಲೂ ಗ್ರಾಮೀಣ ಬದುಕಿನ

ಅನುಭವ ಸಂವೇದನೆಯನ್ನು ಪ್ರಮುಖವಾಗಿ ಕಾಣುತ್ತೇವೆ. ಗ್ರಾಮೀಣ ಬದುಕಿನ ಎಲ್ಲ ತುಡಿತ ಮಿಡಿತಗಳನ್ನು ಅನುಭವ ಅನಿಸಿಕೆಗಳನ್ನು ಅತ್ಯಂತ ನೈಜವಾಗಿಯೇ ಇವರು ನೀಡಿರುವುದು ಸ್ಪಷ್ಟವಾಗಿ ಎದ್ದು ಕಾಣುತ್ತದೆ.

ಭೂಮಿಯನ್ನೇ ನಂಬಿ ಅದರಲ್ಲೇ ಬೆವರು ಸುರಿಸಿ ದುಡಿದು ಪ್ರತಿಫಲವಾಗಿ ಬರುವ ಭತ್ತದ ರಾಶಿಯೊಂದಿಗೆ ಬದುಕನ್ನು ಸಮೀಕರಿಸಿ ನೋಡುವ , ಮಣ್ಣಿನ ಮಕ್ಕಳ ಹರುಷವನ್ನು ಸೊಗಸಾಗಿ ತೆರೆದಿಡುತ್ತಾರೆ. ಸುಗ್ಗಿಯ ಸಿರಿಯಲ್ಲಿ, ಕಣದಲ್ಲೇ ಬೇರುಬಿಟ್ಟ ರೈತರು, ಭತ್ತದ ರಾಶಿಯನ್ನು ತೂರುವಾಗ, ಕೇರುವಾಗ, ಹುಲ್ಲನ್ನು ಬಡಿಯುವಾಗ, ತುಳಿಸುವಾಗ, ಹಾಡುವ ನಾಟಕದ ಪದಗಳು, ಕೂಗಾಟ, ಕೇಕೆಗಳು, ಒಕ್ಕಲಗೇರಿಯ ಮಕ್ಕಳ ಬದುಕನ್ನು ತೆರೆದಿಡುತ್ತದೆ. ಅಣ್ಣ-ತಮ್ಮಂದಿರು, ಗಂಡ, ನಾದಿನಿ, ಓರಗಿತ್ತಿಯರನ್ನು ನಡೆಸಿಕೊಳ್ಳುವ ರೀತಿ, ತುಂಬು ಬಾಳುವೆಯನ್ನು ಸಹಿಸದ ಕುತಂತ್ರಗಳು, ಚಾಡಿ ಮಾತಿನಿಂದ ಕುಟುಂಬದ ಸದಸ್ಯರಲ್ಲಿ ಅಸಮಾಧಾನ, ಮಂಕು ಕವಿಯುವ ವಾತಾವರಣಕ್ಕೆ ಕಾರಣವಾಗುವುದನ್ನು ಎಳೆ-ಎಳೆಯಾಗಿ ತೆರದಿಡುತ್ತದೆ.

ರಾಮಣ್ಣವರ ಭಾಷೆ, ಪಾತ್ರಗಳು, ಸನ್ನಿವೇಶ ಸಂದರ್ಭಗಳು ನೇರವಾಗಿ ಈ ನೆಲದ ಒಡಲಿನಿಂದ ಮೂಡಿ ಬಂದವು. ತಮ್ಮ ಹಳ್ಳಿ, ತಮ್ಮ ಜನಪದಗಳನ್ನು ಕುರಿತು ಅವರು ಆತ್ಮೀಯತೆಯಿಂದ ಬರೆಯಬಲ್ಲರು ಪ್ರೀತಿ ಅಭಿಮಾನಗಳನ್ನು ಮೆರೆಯಬಲ್ಲರು .

ಹರಕೆಯ ಹಣ ಕತೆಯಲ್ಲಿ ಮಲ್ಲನಾಯಕನ ಹಳ್ಳಿಯಲ್ಲಿ ಒಕ್ಕಲಿಗರ ದೇವರುಗಳಿಗೆ ಹೊಲೆಯರೆ ಪೂಜೆ ಮಾಡುವಂತಹ ಸಂಪ್ರದಾಯ ತಲೆತಲಾಂತರದಿಂದ ನಡೆದುಕೊಂಡು ಬಂದಿದ್ದು ಒಕ್ಕಲಿಗರು ಯಾವುದೇ ಭಿನ್ನಾಭಿಪ್ರಾಯವಿಲ್ಲದೆ ಹರಿಜನರಿಂದ ತೀರ್ಥ, ಪ್ರಸಾದವನ್ನು ಸ್ವೀಕರಿಸುವ ಸಂಗತಿ ವಿಶಿಷ್ಟವಾಗಿದೆ. ಎಚ್ಚೆತ್ತ ದಲಿತರು ಮೇಲ್ವರ್ಗದವರಿಂದ ಹರಕೆಯ ಹಣವನ್ನು ಪಡೆಯುವ ಹಕ್ಕಿಗಾಗಿ ಹೋರಾಟಮಾಡುವುದು ಕತೆಯ ವಸ್ತುವಾದರೂ ಲೇಖಕರು ಹರಿಜನರಿಗೆ ಸಿಕ್ಕಿರುವ ಪೂಜೆಯ ಹಕ್ಕು ಅದರ ಹಿನ್ನೆಲೆ, ಹಬ್ಬದ ಆಚರಣೆ ಇವುಗಳ ಬಗ್ಗೆ ವಿವರಣಾತ್ಮಕವಾಗಿ ವಿಮರ್ಶಾತ್ಮಕವಾಗಿ ವಿವೇಚಿಸುತ್ತಾರೆ.

ಜೀತ ಕತೆಯು ಗುಲಾಮಗಿರಿತನದ ನೋವು, ಸಂಕಟ, ಅಸಹಾಯಕತೆ, ದುಃಖ, ದುಮ್ಮಾನಗಳನ್ನು, ಜಮಿನ್ದಾರನ ಕ್ರೌರ್ಯ ದಬ್ಬಾಳಿಕೆ ಅಮಾನವೀಯತೆಯನ್ನು ಹಿಡಿದಿಡುವ ಒಂದು ಸಮರ್ಥಕತೆ. ಊಳಿಗಮಾನ್ಯ ವ್ಯವಸ್ಥೆಯಿಂದ ಹಿಡಿದು ಸಾಮ್ರಾಜ್ಯ ಶಾಹಿ ವ್ಯವಸ್ಥೆಯವರೆಗೆ ಪ್ರತಿಯೊಂದು ವ್ಯವಸ್ಥೆಯು ಗುಲಾಮಗಿರಿಯನ್ನು ಪೋಷಿಸಿಕೊಂಡೆ ಬಂದಿವೆ. ಆಧುನಿಕ ಶಿಕ್ಷಣ ಚಿಂತನೆ, ಸಮಾಜವಾದಿ ಮತ್ತು ಪ್ರಜಾಪ್ರಭುತ್ವವಾದಿ ವ್ಯವಸ್ಥೆಗಳು ಜಗತ್ತಿನ ಪರಂಪರಾಗತ ವ್ಯವಸ್ಥೆಯನ್ನು ಬದಲಾಯಿಸುವುವಲ್ಲಿ

ಕೇಂದ್ರೀಯ ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ,ಹಂಪಿ

ಅತ್ಯಂತ ಪ್ರಮುಖ ಪಾತ್ರವಹಿಸಿವೆ. ಸಾಮಾನ್ಯವಾಗಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಭಿವೃದ್ಧಿ ಸ್ವಾತಂತ್ರ್ಯಕ್ಕೆ ಧಕ್ಕೆ ಬರುವುದಿಲ್ಲ, ಬರಬಾರದು.

ಆದರೆ ಭಾರತದಲ್ಲಿರುವುದು ಪ್ರಜಾಪ್ರಭುತ್ವದ ಹೆಸರಿನ ಒಂದು ವ್ಯವಸ್ಥೆ ಮಾತ್ರ ನಮ್ಮ ಹಳ್ಳಿಗಳಲ್ಲಿ ಭೂ ಮಾಲೀಕರ ಕೆಳಗೆ ದಲಿತರಿಗೆ, ಕೂಲಿ ಆಳುಗಳಿಗೆ ಈಗಲೂ ನಿರಂತರ ಶೋಷಣೆಗಳಾಗುತ್ತವೆ ಎಂಬುದನ್ನು ಯೋಚಿಸಿದರೆ ಪ್ರಜಾಪ್ರಭುತ್ವ ಭದ್ರವಾದುದಲ್ಲ ಎನಿಸುತ್ತದೆ .

ಗ್ರಾಮೀಣ ಪ್ರದೇಶದ ದಲಿತ ಜನಾಂಗದ ನೋವನ್ನು ಅದರ ಭೀಕರತೆಯನ್ನು ಇವರ ಕಥೆಗಳು ಸಮರ್ಥವಾಗಿಯೇ ದಾಖಲಿಸುತ್ತವೆ. ಜೀತದಾಳುಗಳನ್ನು ಒದೆಯುವ, ಸುಲಿಗೆ ಮಾಡುವ ಶ್ರೀಮಂತರ ದರ್ಪ-ದೌರ್ಜನ್ಯಗಳನ್ನು ಚಿತ್ರಿಸುತ್ತಲೇ ಖಂಡಿಸುತ್ತವೆ.

ದನಗಳಿಗಿಂತಲೂ ಕಡೆಯಾಗಿ ತನ್ನ ತಮ್ಮನನ್ನು ಗದ್ದೆಯಲ್ಲೆಲ್ಲಾ ಓಡಾಡಿಸಿಕೊಂಡು ಕಬ್ಬಿನ ಗದ್ದೆ ಹೊಕ್ಕರೂ ಬಿಡದೆ ಬೆದರಿಸಿ ಬೈದು ಹೊಡೆದುದನ್ನು ನೆನೆದು ಪುಟ್ಟಸ್ವಾಮಿಗೆ ಅಸಹ್ಯವಾಗುತ್ತದೆ. ಯಾವ ಜೀತವೂ ಬೇಡ, ಈ ಅನಿಷ್ಟ ಬಾಳು ಬಾಳಬಾರದು. ಊರಲ್ಲಿ ಇರುವ ಅರ್ಧ ಎಕರೆ ಜಮೀನಿನಲ್ಲಿ ಕಷ್ಟು ಪಟ್ಟು ದುಡಿಯೋಣ ಎಂದು ನಿರ್ಧರಿಸಿ ಹೊರಟ ಪುಟ್ಟಸ್ವಾಮಿ ಮತ್ತವನ ತಮ್ಮ ಚಿಕ್ಕರಾಮ ಊರಲ್ಲಿ ಮಳೆ, ಬೆಳೆ ಇಲ್ಲದೆ ಎಲ್ಲಾ ಜನಗಳು ಕೆಲಸ ಹುಡಿಕಿಕೊಂಡು ಇಲ್ಲಿಗೆ ಬರುತ್ತಿದ್ದಾರೆ ಎಂಬ ವಿಷಯ ತಿಳಿದು ಕಂಗಾಲಾಗುತ್ತಾರೆ. ಬಡವರ ಬದುಕಿನ ಭಯಾನಕ ಅಂಶ ಇಲ್ಲಿ ಮನದಟ್ಟಾಗುತ್ತದೆ. ಒಂದು ಹೊತ್ತಿನ ತುತ್ತಿಗೂ ಗತಿಯಿಲ್ಲದೇ ಉಳ್ಳವರ ಮನೆಯ ಆಳಾಗಿ ದುಡಿಯುವ ಅಸಂಖ್ಯಾತ ಬಡವರ ಬದುಕನ್ನು ತೆರೆದಿಡುತ್ತದೆ.

ಇಂದು ಗುಲಾಮಗಿರಿಯನ್ನು ಪೂರ್ಣವಾಗಿ ಕಾನೂನು ಮೂಲಕ ತೊಡೆದು ಹಾಕುವ ಪ್ರಯತ್ನಗಳು ನಡೆದಿದ್ದರೂ ವಾಸ್ತವದಲ್ಲಿ ಗುಲಾಮಗಿರಿ ಬೇರೆ ಬೇರೆ ರೂಪದಲ್ಲಿ ಪ್ರಕಟವಾಗುತ್ತಲೇ ಇದೆ. ಕೇವಲ ಗ್ರಾಮೀಣ ಪ್ರದೇಶಕ್ಕೆ ಮಾತ್ರ ಸೀಮಿತವಾಗದೆ, ಇದು ನಗರದ ಕಾರ್ಖಾನೆಗಳಲ್ಲಿ ಕಟ್ಟಡ ನಿರ್ಮಾಣದ ನಿವೇಶನಗಳಲ್ಲಿ ಶ್ರೀಮಂತರ ಮನೆಗಳಲ್ಲಿ ಉಳಿದುಕೊಂಡು ಬಂದಿದೆ.

141592

ಅಧ್ಯಾಯ-7

ಸಮಾರೋಪ

ಶೋಷಿತಪರ ನಿಲುವನ್ನು ಹೊತ್ತು ಬಂದ ದಲಿತ ಬಂಡಾಯ ಸಾಹಿತ್ಯ ದಲಿತರ ಬಡವರ ಮಹಿಳೆಯರ ಪರ ಧ್ವನಿಯಾಗಿ ಬಂದದ್ದು ಚಾರಿತ್ರಿಕವಾಗಿ ಗಮನಾರ್ಹವಾದ ಸಂಗತಿಯಾಗಿದೆ.

ಶತಮಾನಗಳಿಂದ ತುಳಿತಕ್ಕೆ ಒಳಗಾಗುತ್ತ ಬಂದಿರುವ ಈ ಗುಂಪುಗಳೇ ಈ ಹಂತದ ಸಾಹಿತ್ಯದಲ್ಲಿ ಪ್ರಮುಖ ಸ್ಥಾನ ಪಡೆದದ್ದು ಮತ್ತೊಂದು ವೈಶಿಷ್ಟ್ಯ ಕಾವ್ಯಗಳು ಹಾಡುಗಳಾದ ನಾಟಕಗಳು ಬೀದಿನಾಟಕಗಳಾದ ಸಾಹಿತ್ಯಕ ಸಂದರ್ಭ ಇದಾಗಿದೆ. ಸ್ವಾನುಭವದ ಅಭಿವ್ಯಕ್ತಿ ಸ್ವರೂಪ ಪಡೆದ ಸಂವೇದನೆಗಳು ಈ ಹಂತದಲ್ಲಿ ಎದ್ದುಕಾಣುತ್ತದೆ.

ಈ ಹಂತದ ಕತೆಗಾರರಲ್ಲಿ ಬೆಸಗರಹಳ್ಳಿ ರಾಮಣ್ಣನವರು ರೊಚ್ಚು, ಸಿಟ್ಟುಗಳಿಲ್ಲದೆ ಪ್ರತಿಭಟನೆಯನ್ನು ಸಹಜವಾಗಿ ಕಲಾತ್ಮಕವಾಗಿ ತಣ್ಣನೆಯ ಮಾತುಗಳಲ್ಲಿ ದಾಖಲಿಸುತ್ತಾರೆ. ವ್ಯವಸ್ಥೆಯನ್ನು ಇಡಿಯಾಗಿ ತಿರಸ್ಕರಿಸದೆ ಅಲ್ಲಿನ ಅಮಾನವೀಯ ಅಂಶಗಳನ್ನು ಖಂಡಿಸುತ್ತ, ಕೆಳಜಾತಿ ಕೆಳವರ್ಗದವರು ಶ್ರಮ ಸಂಸ್ಕೃತಿಯನ್ನೇ ನೆಚ್ಚಿಕೊಂಡು ಬಂದು ಅನುಭವಿಸುವ ಪಡಿಪಾಟಲುಗಳು ಅವರ ಕತೆಗಳಲ್ಲಿ ಮಾರ್ಮಿಕವಾಗಿ ಅನಾವರಣಗೊಂಡಿವೆ. ಸಮತೋಲನದ ಆರೋಗ್ಯಕರ ಚಿಂತನೆ ಇಲ್ಲಿದೆ. ಅನಕ್ಷರತೆಯೇ ವೈಚಾರಿಕತೆಯ ಕೊರತೆಗೆ ಕಾರಣ ಎಂಬುದನ್ನು ಇಲ್ಲಿನ ಪಾತ್ರಗಳಲ್ಲಿ ತೋರಿಸಿಕೊಡುತ್ತಾರೆ. ಬಂದ ಬದುಕಿನೊಂದಿಗೆ ರಾಜಿ ಹೊಂದಾಣಿಕೆ ಅನಿವಾರ್ಯವಾಗುತ್ತದೆ.

ಶೋಷಿತರ ಬದುಕಿನ ಚಿತ್ರಗಳಾಗಿ ಮೂಡಿಬಂದಿರುವ ಬೆಸಗರಹಳ್ಳಿ ರಾಮಣ್ಣನವರ ಕತೆಗಳು ಅವರ ಸಾಮಾಜಿಕ ಸ್ಥಿತಿಗತಿಗಳಿಗೆ ಹಿಡಿದ ಕನ್ನಡಿಗಳಾಗಿವೆ. ಶೋಷಣೆಯ ವಿವಿಧ ಮುಖಗಳು ವಿಭಿನ್ನ ರೀತಿಗಳಲ್ಲಿ ಇಲ್ಲಿ ಅನಾವರಣಗೊಳ್ಳುತ್ತವೆ. ಶೋಷಿತರ ಬದುಕನ್ನು ಯಥಾವತ್ತಾಗಿ ದಾಖಲಿಸುತ್ತಲೇ ಅಲ್ಲಿನ ಅಸಮಾನತೆಯ ಕ್ರೌರ್ಯಗಳು ಮತ್ತು ಅಮಾನವೀಯ ಅಂಶಗಳನ್ನು ಪ್ರಶ್ನಿಸುವ ಪರಿ ಪರಿಣಾಮಕಾರಿಯಾಗಿದೆ. ನವೋದಯ ಸಾಹಿತ್ಯ ರಸನಿಷ್ಠವಾಗಿ ಭಾವುಕತೆ ಪ್ರಧಾನವಾಗಿ, ನವ್ಯ ಸಾಹಿತ್ಯ ರೂಪನಿಷ್ಠವಾಗಿ ರಚನೆಗೊಂಡಿರುವುದು ಕಂಡುಬರುತ್ತದೆ. ಆವರೆ ಬಂಡಾಯ ಸಾಹಿತ್ಯ ಸಮಾಜ ನಿಷ್ಠವಾಗಿ ಪ್ರಗತಿಪರತೆ ಮತ್ತು ಸಮಾನತೆ ಪರಚಿಂತನೆಗಳಿಂದ ಸ್ವಾಗತಾರ್ಹವಾಗುತ್ತದೆ.

ಮನರಂಜನೆ ದೃಷ್ಟಿಯಿಂದ ಜನಪ್ರಿಯವಾದ ಕತೆಗಳನ್ನು ಪ್ರಮುಖ ಮಾಧ್ಯಮವಾಗಿಸಿ ಕೊಂಡ ರಾಮಣ್ಣನವರು ತಮ್ಮ ನೆಲದ ಒಡಲು , ಗರ್ಜನೆ ಹರಕೆಯ ಹಣ ದಂತಹ ಕಥಾ ಸಂಕಲನಗಳಲ್ಲಿ ಮಾನವೀಯ ಸಂಬಂಧಗಳು ಶಿಥಿಲಗೊಂಡದ್ದರ ಬಗ್ಗೆ ವಿಷಾದವನ್ನು ಮಾರ್ಮಿಕವಾಗಿ

ದಾಖಲಿಸುತ್ತಾರೆ. ವ್ಯಕ್ತಿ-ಸಮುದಾಯಗಳನ್ನು ಹೊರಗಿಡುವುದಕ್ಕಿಂತ ಒಳಗೊಳ್ಳುವಿಕೆ ಮುಖ್ಯ ಎಂಬುದನ್ನು ಪ್ರತಿಪಾದಿಸುವ ರಾಮಣ್ಣನವರ ಮಹಿಳಾ ಪರ ಚಿಂತನೆಗಳೂ ಗಮನಸೆಳೆಯುತ್ತವೆ.

ಗ್ರಾಮೀಣ ಬದುಕಿನ ಪರಿಣಾಮಕಾರಿ ಚಿತ್ರಣಗಳಾಗಿರುವ ಇವರ ಕತೆಗಳು ಅಲಕ್ಷ್ಯಕ್ಕೆ ಈಡಾದ ಗುಂಪುಗಳ ಬದುಕಿನ ಸೂಕ್ಷ್ಮಗಳನ್ನು ತೆರೆದಿಡುತ್ತವೆ. ಪಟ್ಟಭದ್ರಹಿತಾಸಕ್ತಿಗಳ ಅಮಾನವೀಯತೆ ಇಲ್ಲಿ ಖಂಡಿಸಲ್ಪಡುತ್ತದೆ.

ಮನುಷ್ಯ ಪ್ರೀತಿಗೆ ಒತ್ತುಕೊಡುವ ಕತೆಗಾರರು ಗ್ರಾಮೀಣದ ಬದುಕಿನಲ್ಲಿನ ತುಡಿತ ಮಿಡಿತಗಳಿಗೆ ಧ್ವನಿಯಾಗುತ್ತಾರೆ. ಜೀತದಂತಹ ಅಮಾನವೀಯ ವ್ಯವಸ್ಥೆಯ ಅಡಿಯಲ್ಲಿನ ಕ್ರೌರ್ಯ ನೋವುಗಳು ಇವರ ಕತೆಗಳಲ್ಲಿ ಜೀವಂತವಾಗಿ ದಾಖಲಿಸಲ್ಪಡುತ್ತವೆ. ಜಮೀನ್ದಾರಿ ಪದ್ಧತಿಯ ದಬ್ಬಾಳಿಕೆ ಅಮಾನವೀಯತೆಗಳನ್ನು ತಣ್ಣಗೆ ನಿರೂಪಿಸುತ್ತಲೇ ಪ್ರಶ್ನಿಸುವ, ಪ್ರತಿಭಟಿಸುವ ಪರಿ ಗಮನಾರ್ಹವಾಗಿದೆ. ಗುಲಾಮಗಿರಿಯನ್ನು ಪೋಷಿಸಿಕೊಂಡು ಬರುವ ಮನಸ್ಸುಗಳ ವಿರುದ್ಧ ರಾಮಣ್ಣವರು ತಣ್ಣಗೆ ಸಿಡಿಯುತ್ತಾರೆ.

ಜೀತಗಾರಿಕೆ-ಬಾಲಕಾರ್ಮಿಕ ಪದ್ಧತಿಗಳಂತಹ ಅನಿಷ್ಟಗಳನ್ನು ತೊಡೆದುಹಾಕಲು ಕಾನೂನಾತ್ಮಕವಾಗಿ ಎಷ್ಟೇ ಪ್ರಯತ್ನಗಳು ನಡೆದರೂ ತೆರೆಮರೆಯಲ್ಲಿ ಅವುಗಳಿನ್ನೂ ಜೀವಂತವಾಗಿ ಮುಂದುವರೆದುಕೊಂಡೇ ಬಂದಿರುವುದು ವಾಸ್ತವದ ಸಂಗತಿ.

ಸಾಹಿತ್ಯದ ಸಂಪರ್ಕವೆ ನನ್ನನ್ನು ಮನುಷ್ಯನನ್ನಾಗಿ ಮಾಡಿದ್ದು ಎಂದು ಬಲವಾಗಿ ನಂಬಿರುವ ರಾಮಣ್ಣನವರು ವೈದ್ಯರಾಗಿಯೂ ಕತೆಗಾರರಾಗಿ ಬೆಳೆದದ್ದು ಅಪರೂಪದ ಸಂಗತಿಗಳಲ್ಲಿ ಒಂದಾಗಿದೆ.

ಶೋಷಿತರ ಬದುಕಿನ ವಿವಿಧ ಮುಖಗಳನ್ನು ವಿಭಿನ್ನವಾಗಿ ತೆರೆದಿಡುತ್ತಾ ಸಾಗುವ ಕತೆಗಾರರು, ಅವರ ಸತ್ವ ಜೀವನ ಪ್ರೀತಿಗಳನ್ನು ಚಿತ್ರಿಸುತ್ತಾರೆ. ಶೋಷಿತರ ಬದುಕಿನ ಸಂದಿಗ್ಧತೆಗಳ ಚಿತ್ರಣ ಓದುಗರನ್ನು ಚಿಂತನೆಗೆ ಹಚ್ಚುವಂತೆ ಮಾಡುವಲ್ಲಿ ಯಶಸ್ವಿಯಾಗುತ್ತವೆ.

ಅವಿಭಕ್ತ ಕುಟುಂಬದ ಅವಶ್ಯಕತೆಯನ್ನು ಪ್ರತಿಪಾದಿಸುವ ರಾಮಣ್ಣನವರ ಕತೆಗಳು ಆ ಕಾರಣಕ್ಕೆ ಮುಖ್ಯವಾಗುತ್ತವೆ. ನಾಗರಿಕತೆ ಆಧುನಿಕತೆಗಳು ಬೆಳೆದಂತೆ ಮನುಷ್ಯ ಮಾನಸಿಕವಾಗಿ ಸಂಕುಚಿತಗೊಳ್ಳುತ್ತಾ ಕೌಟುಂಬಿಕ ವ್ಯವಸ್ಥೆ ಶಿಥಿಲಗೊಳ್ಳುತ್ತ ಸಾಗುತ್ತಿರುವ ಇಂದಿನ ದಿನಗಳಲ್ಲಿ ಅವಿಭಕ್ತ ವ್ಯವಸ್ಥೆ ಬಗ್ಗೆ ಆಲೋಚಿಸುವಂತೆ ಮಾಡುವಂಥ ಸಾಹಿತ್ಯಿಕ ಪ್ರಯತ್ನಗಳ ಅವಶ್ಯಕತೆ ಇದೆ.

ಯಾರಿಗೆ ಬಂತು ಎಲ್ಲಿಗೆ ಬಂತು ನಲವತ್ತೇಳರ ಸ್ವಾತಂತ್ರ್ಯ ಎಂಬ ದಲಿತಕವಿ ಸಿದ್ದಲಿಂಗಯ್ಯನವರ ಪ್ರಶ್ನೆ ಇಂದಿಗೂ ಪ್ರಸ್ತುತವಾಗಿರುವ ದಿನಗಳನ್ನು ನಾವು ಕಾಣುತ್ತೇವೆ. ಅಲ್ಲಿ ಬರುವ ಮಾಲೀಕರ ಚಾಟಿಗೆ ಎಂಬ ಸಾಲು ಜೀತಗಾರಿಕೆ ಗುಲಾಮತನಗಳು ನಿರಂತರವಾಗಿವೆ ಎಂಬುದನ್ನು ಸೂಚಿಸುತ್ತದೆ.

ಸಾಮಾಜಿಕ ಆರ್ಥಿಕ- ಲೈಂಗಿಕ ಅಸಮಾನತೆಗಳು ಅಸಹಾಯಕರ ಬದುಕನ್ನು ಹಿಂಡಿ ಹಿಪ್ಪೆ ಮಾಡಿ ಹಾಕುತ್ತಿರುವ ಕ್ರೌರ್ಯದ ಅನುಭವ ಈ ಕತೆಗಳನ್ನು ಓದುವ ಓದುಗರಿಗೂ ಆಗುವಷ್ಟು ಪರಿಣಾಮಕಾರಿಯಾದ ನಿರೂಪಣೆ ರಾಮಣ್ಣನವರನ್ನು ಯಶಸ್ವಿ ಕತೆಗಾರರಾಗಿಸುತ್ತದೆ.

ಶೋಷಣೆ ರಹಿತವಾದ ಸಮಾಜ ನಿರ್ಮಾಣದ ಕನಸನ್ನು ಹೊತ್ತು ಬಂದ ಕತೆಗಾರರ ಆಶಯ ಆರೋಗ್ಯಕರ ಚಿಂತನೆಗಳು ಗಮನಾರ್ಹವಾದ ಅಂಶಗಳಾಗಿವೆ.

ಬೆಸಗರಹಳ್ಳಿ ರಾಮಣ್ಣನವರಂಥ ಪ್ರಗತಿ ಪರ ಚಿಂತನೆಯ ಕತೆಗಾರರನ್ನು ಸೃಷ್ಟಿಸಿದ ದಲಿತ ಬಂಡಾಯ ಸಾಹಿತ್ಯ, ಸಮಾಜದಲ್ಲಿ ಶೋಷಣೆ ವಿರುದ್ಧ ಮೂಡಿಸಿದ ಜಾಗೃತಿ ವಿಶಿಷ್ಟವಾಗಿದೆ. ಸಾಕ್ಷರತೆ-ಸ್ವಾವಲಂಬಿತನದ ಮಹತ್ವಗಳನ್ನು ಪ್ರತಿಪಾದಿಸುವ ಇಂತಹ ಕತೆಗಳು ಸಾರ್ವಕಾಲಿಕವಾಗಿ ಸ್ವಾಗತಾರ್ಹವಾಗುತ್ತವೆ. ಈ ನಿಟ್ಟಿನಲ್ಲಿ ಬೆಸಗರಹಳ್ಳಿ ರಾಮಣ್ಣನವರು ವೈದ್ಯರಾಗಿ ದೈಹಿಕ ಸಮಸ್ಯೆಗಳಿಗೆ ಪರಿಹಾರ ನೀಡಿದಂತೆ ಸಾಹಿತಿಗಳಾಗಿ ಸಾಮಾಜಿಕ ಸಮಸ್ಯೆಗಳಿಗೆ ಸೃಜನಾತ್ಮಕ ಪರಿಹಾರ ಹುಡುಕುವಲ್ಲಿ ತಮ್ಮನ್ನು ತೊಡಗಿಸಿಕೊಂಡ ಕತೆಗಾರರಾಗಿ ಯಶಸ್ವಿಯಾಗುತ್ತಾರೆ.

ಅನುಬಂಧ

ಬೆಸಗರಹಳ್ಳಿ ರಾಮಣ್ಣನವರ ಬದುಕಿನ ಚಿತ್ರಸಂಪುಟ



ದೀರ್ಘಾಲೋಚನೆಯಲ್ಲಿ ರಾಮಣ್ಣನವರು



ತಂದೆ ಚಿಕ್ಕ ಎಲ್ಲೇಗೌಡ , ತಾಯಿ ದೊಡ್ಡತಾಯಮ್ಮ ಅವರೊಂದಿಗೆ



ಸರಳ ವಿವಾಹ ಸಮಾರಂಭದಲ್ಲಿ ವಧು-ವರರಿಗೆ ವಿವಾಹ ಸಂಹಿತೆ ಬೋಧನೆ



ಶ್ರೀಯುತರಾದ ಹ.ಕ. ರಾಜೇಗೌಡ, ಜೀಶಂಪ, ಎಚ್.ಎಲ್. ನಾಗೇಗೌಡರವರೊಡನೆ ಚುಂಚನಗಿರಿಯಲ್ಲಿ ನಡೆದ ಜಾನಪದ ಸಮ್ಮೇಳನದ ಪೂರ್ವಭಾವಿ ಸಭೆಯಲ್ಲಿ



ಕೊಡಿಯಾಲದ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ಬಂದಿದ್ದ ಜನರು ಮತ್ತು ಸಿಬ್ಬಂದಿ ಹಾಗೂ ಶಾಸಕರಾಗಿದ್ದ ಶ್ರೀ ಬಂಡಿಸಿದ್ದೇಗೌಡರೊಂದಿಗೆ.



ವರ್ಧಮಾನ ಉಯೋನ್ಮುಖ ಸಾಹಿತ್ಯ ಪ್ರಶಸ್ತಿ ಪಡೆದ ಸಂದರ್ಭದಲ್ಲಿ ಶ್ರೀರಂಗಪಟ್ಟಣದ ಶಾಸಕರು ಮತ್ತು ಆತ್ಮೀಯರಾದ ಶ್ರೀ ಬಂಡಿಸಿದ್ದೇಗೌಡರಿಂದ ಕೊಡಿಯಾಲದ ಆಸ್ಪತ್ರೆಯಲ್ಲಿ ಅಭಿನಂದನೆ ಸ್ವೀಕರಿಸುತ್ತಿರುವುದು.



ಮಂಡ್ಯದ ಮಣ್ಣಿನ ಭಾಗ್ಯ ಕೆ.ವಿ. ಶಂಕರಗೌಡರವರೊಡನೆ ರಾಮಣ್ಣನವರು



ಕೆ.ವಿ. ಎಸ್. ರವರೊಡನೆ ಪ್ರೋ. ಜಯಪ್ರಕಾಶಗೌಡ, ಲೈಬ್ರರಿ ಶಿವರಾಂ, ಹಾಗೂ ಎಸ್.ಬಿ. ಶಂಕರೇಗೌಡ ಮತ್ತು ರಾಮಣ್ಣನವರು.



ಕಮುರದಲ್ಲಿ ನಡೆದ ಬೆಂಗಳೂರು ಜಿಲ್ಲೆ ಬಂಡಾಯ ಸಾಹಿತ್ಯ ಸಮ್ಮೇಳನದಲ್ಲಿ ರಾಮಣ್ಣನವರು



ಶ್ರೀ ಜಿ.ಟಿ. ವೀರಪ್ಪರವರೊಡನೆ ಮಾತುಕತೆಯಲ್ಲಿ ತೊಡಗಿರುವ ರಾಮಣ್ಣನವರು.



1993 ಕರ್ನಾಟಕ ಸಾಹಿತ್ಯ ಆಕಾಡೆಮಿ ಗೌರವ ಪ್ರಶಸ್ತಿ ಸ್ವೀಕಾರ ಶ್ರೀ ಎಂ.ಬಿ. ವಾಸುದೇವನ್ ನಾಯರ್‌ರವರಿಂದ



ಕುಟುಂಬ ಸಮೇತರಾಗಿ ಸಮುದ್ರದ ಮುಂದೆ ರಾಮಣ್ಣನವರು.



1994- ಹಂಪಿಯ ಕನ್ನಡ ವಿಶ್ವವಿದ್ಯಾಲಯದಲ್ಲಿ ನಡೆದ ಸಮಾರಂಭವೊಂದರಲ್ಲಿ ಅಗ್ರಹಾರ ಕೃಷ್ಣಮೂರ್ತಿಯವರೊಡನೆ ರಾಮಣ್ಣನವರು.



1994-ಹಂಪಿಯ ಕನ್ನಡ ವಿಶ್ವವಿದ್ಯಾಲಯ ಗಿರಿಸೀಮೆಯಲ್ಲಿ ದೇವನೂರ ಮಹಾದೇವ, ಕರೀಗೌಡ ಬಿಚನಹಳ್ಳಿ ಮತ್ತು ಬೋಳುವಾರ ಮಹಮ್ಮದ್ ಕುಂಞ ಅವರ ಜೊತೆಯಲ್ಲಿ



1994 ಕನ್ನಡ ಸಾಹಿತ್ಯ ಪರಿಷತ್ತು ಮಂಡ್ಯ ಜಿಲ್ಲೆ ಏರ್ಪಡಿಸಿದ್ದ ಬೆಸಗರಹಳ್ಳಿ ರಾಮಣ್ಣರವರ ಕಥಾಸಾಹಿತ್ಯ ಕುರಿತ ವಿಚಾರ ಸಂಕೀರಣದಲ್ಲಿ ರಾಷ್ಟ್ರ ಕವಿ ಜಿ.ಎಸ್. ಶಿವರುದ್ರಪ್ಪ ರವರಿಂದ ಆತ್ಮೀಯ ಸನ್ಮಾನ ಜೊತೆಗೆ ನಾಗತಿಹಳ್ಳಿ ಚಂದ್ರಶೇಖರ್.



1996 ಮೊಮ್ಮಗಳು ಸಿರಿಯೊಡನೆ ರಾಮಣ್ಣ ದಂಪತಿ.



1997 ಅನಾಥ ಪಕ್ಷಿಯ ಕಲರವ ಕೃತಿ ಬಿಡುಗಡೆ ಸಮಾರಂಭದಲ್ಲಿ ವೀರಭದ್ರ, ಮದೆನೂರು ಸಂಗಣ್ಣ, ಚಂಪಾ, ನೆಲಮನೆ ದೇವೇಗೌಡರ ಜೊತೆ.



1998 ಕುಂ.ವೀ ಅವರ ಶಾಮಣ್ಣ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಡಾ. ಕೆ.ವಿ.ನಾರಾಯಣ, ಚನ್ನಬಸವಣ್ಣರವರೊಡನೆ ರಾಮಣ್ಣನವರು.



ರಾಮಣ್ಣನವರು ಕೊಡಿಯಾಲದಲ್ಲಿ ಬೆಳೆಸಿದ ವನ.

ಗ್ರಂಥ ಋಣ

1	ಬೆಸಗರಹಳ್ಳಿ ರಾಮಣ್ಣ	ಸಮಗ್ರ ಕಥೆಗಳು
2	ಎಲ್.ಎಸ್. ಶೇಷಗಿರಿ ರಾವ್	ಹೊಸಗನ್ನದ ಸಾಹಿತ್ಯ ಚರಿತ್ರೆ
3	ಜಿ.ಎಸ್. ಅಮೂರ	ಕನ್ನಡ ಕಥನ ಸಾಹಿತ್ಯ ಸಣ್ಣಕತೆ
4	ಪ್ರಹ್ಲಾದ್ ಅಗಸನಕಟ್ಟೆ	ದಲಿತ-ಬಂಡಾಯ ಕಾವ್ಯ ಮತ್ತು ವಿಚಾರವಾದಗಳು
5	ಕೆ.ಎಸ್. ಭಗವಾನ್	ಕನ್ನಂಬಾಡಿ
6	ಬಿ.ಎನ್. ಸುಮಿತ್ರಾಬಾಯಿ	ಓದುವ ದಾರಿಗಳು.
7	ಡಾ. ಮಧುಸೂಧನಾಚಾರ್ಯ ಜೋಷಿ	ಬಂಡಾಯ ಸಾಹಿತ್ಯ : ಹೈದರಾಬಾದ್ ಕರ್ನಾಟಕದ ಪರಂಪರೆ.
8	ಡಾ. ಬೆಸಗರಹಳ್ಳಿ ರಾಮಣ್ಣನವರನ್ನು ಕುರಿತ ಒಡನಾಡಿಗಳ ನೆನಪುಗಳು : ಸಂಪಾದಕರು ಡಾ. ಕೆ.ಪುಟ್ಟಸ್ವಾಮಿ, ರವಿ ಬೆಸಗರಹಳ್ಳಿ	ಕಾಡುಗಿಣಿ ಬೆಸಗರಹಳ್ಳಿ ರಾಮಣ್ಣ ನೆನಪಿನ ಸಂಪುಟ